ಕರ್ನಾಟಕ ಸರ್ಕಾರ

# ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ತಡೆಗಟ್ಟುವಿಕೆ

ಗುರುತಿಸುವಿಕೆ



ಪುನರ್ವಸತಿ

ಸಾಮಾಜಿಕ ಭದ್ರತೆ

# ಹೊಂಬೆಳಕು

## ಯೋಜನೆಗಳ ಕೈಪಿಡಿ 2014

Karnataka State Government Disabled Employees Association
Renukaradhya S
Indresh R

## ವಿಶ್ವ ವಿಕಲಚೇತನರ ದಿನಾಚರಣೆ 2013ರ ಸಂದರ್ಭದಲ್ಲಿ
## ವಿಕಲಚೇತನರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು



Karnataka State Government Disabled Employees Association
Renukaradhya S
Indresh





# ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ತಡೆಗಟ್ಟುವಿಕೆ

ಗುರುತಿಸುವಿಕೆ



ಪುನರ್ವಸತಿ

ಸಾಮಾಜಿಕ ಭದ್ರತೆ

# ಹೊಂಬೆಳಕು

## ಯೋಜನೆಗಳ ಕೈಪಿಡಿ 2014

Karnataka State Government Disabled Employees Association
Renukaradhya S
Indresh R

# ಯೋಜನೆಗಳ ಕೈಪಿಡಿ

ಪ್ರಕಟಣೆ:

**ನಿರ್ದೇಶಕರು**

**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ**

ಪೋಡಿಯಂ ಬ್ಲಾಕ್, ನೆಲಮಹಡಿ, ವಿಶ್ವೇಶ್ವರಯ್ಯ ಕೇಂದ್ರ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು – 560 001

Karnataka State Government Disabled Employees Association
Renukaradhya S
Indresh R

Email: dir-dwdsc-ka@nic.in dirdwdscka@gmail.com

Website: welfareofdisabled.kar.nic.in

ಯೋಜನೆಗಳ ಅನುಷ್ಠಾನದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು,
ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
(ದೂರವಾಣಿ ಸಂಖ್ಯೆ ಹಾಗೂ ವಿಳಾಸವನ್ನು ಕೊನೆಯ ಪುಟದಲ್ಲಿ ನೀಡಲಾಗಿದೆ)

ಹಾಗೂ

ಮಾಹಿತಿ ಸಲಹಾ ಕೇಂದ್ರ – ದೂರವಾಣಿ ಸಂಖ್ಯೆ : 080–22860907



**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ : 22255282
22033469
ಕೊಠಡಿ ಸಂಖ್ಯೆ : 252, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು

# ಸಂದೇಶ

ಸಂ: ಮ.ಮ.ಅ.ಕ.ಸಂ.ಸ/ /2014

ದಿನಾಂಕ: 18-6-14

ವಿಕಲಚೇತನರ – ಅವಕಾಶಗಳು, ಸವಾಲುಗಳು ಹಾಗೂ ಪರಿಹಾರೋಪಾಯಗಳು ಕುರಿತಂತೆ ಅಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯ ಪದಾಧಿಕಾರಿಗಳಿಗೆ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮವನ್ನು ದಿನಾಂಕ 21.6.2014ರಂದು ಹಮ್ಮಿಕೊಂಡಿದ್ದು, ಆ ಕಾರ್ಯಕ್ರಮದ ಅಂಗವಾಗಿ ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ "ಹೊಂಬೆಳಕು" ಎಂಬ ಕೈಪಿಡಿಯನ್ನು ಹೊರತರುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿಕಲಚೇತನರು ಮುಖ್ಯವಾಹಿನಿಯಲ್ಲಿ ಸಾಮಾನ್ಯರಂತೆ ಜೀವಿಸಲು ಅನುವಾಗುವಂತೆ ಎಲ್ಲಾ ರೀತಿಯ ಅಡೆತಡೆರಹಿತ ಸೌಲಭ್ಯ ಅಥವಾ ನೆರವನ್ನು ನೀಡುವುದು ಸರ್ಕಾರದ ಹಾಗೂ ಸಮುದಾಯದ ಜವಾಬ್ದಾರಿಯಾಗಿರುತ್ತದೆ. ಹೆಚ್ಚಿನ ವಿಕಲಚೇತನರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಿದ್ದು ಶೈಕ್ಷಣಿಕವಾಗಿ ಹಿಂದುಳಿದವರಾಗಿರುತ್ತಾರೆ ಇದರಿಂದ ಹೆಚ್ಚಿನವರು ಸೌಲಭ್ಯಗಳಿಂದ ವಂಚಿತರಾಗುವ ಸಂಭವವಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ನೀಡಲಾಗುವ ಸೌಲಭ್ಯಗಳ ಬಗ್ಗೆ ಸಾರ್ವಜನಿಕ ಅರಿವು ಮೂಡಿಸುವುದು ಕೂಡ ಸಂಬಂಧಿಸಿದ ಇಲಾಖೆಯ ಹೊಣೆಯಾಗಿದ್ದು, ಈ ನಿಟ್ಟಿನಲ್ಲಿ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿರುವುದು ಸಂತೋಷದಾಯವಾದ ವಿಷಯವಾಗಿರುತ್ತದೆ.

ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಹಾಗೂ ವಿಕಲಚೇತನರಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ನೀಡಲಾಗುತ್ತಿರುವ ವಿವಿಧ ಯೋಜನೆಗಳ ಪ್ರಯೋಜನವನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಸಂಪರ್ಕಿಸಬೇಕಾದ ಅಧಿಕಾರಿ/ಕಛೇರಿಗಳ ಮಾಹಿತಿಯನ್ನು ನೀಡಿ ವಿಕಲಚೇತನರು ಸರ್ಕಾರಿ ಸೌಲಭ್ಯಕ್ಕಾಗಿ ವಿವಿಧ ಕಛೇರಿಗಳಿಗೆ ವೃಥಾ ಅಲೆದಾಡುವ ಶ್ರಮವನ್ನು ತಪ್ಪಿಸುವ ನಿಟ್ಟಿನಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಹೊರತರುತ್ತಿರುವ "ಹೊಂಬೆಳಕು" ಕೈಪಿಡಿಯು ಎಲ್ಲಾ ವಿಕಲಚೇತನರು ಮುಖ್ಯವಾಹಿನಿಗೆ ಬರುವಲ್ಲಿ ಹಾಗೂ ಅವರ ಏಳಿಗೆಗಾಗಿ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗಳಿಗೆ ದಾರಿದೀಪವಾಗಲಿ ಎಂದು ಹಾರೈಸುತ್ತೇನೆ.

Uma

(ಉಮಾಶ್ರೀ)

Karnataka State Government Disabled Employees Association
Renukaradhya S
Indresh R

ಡಾ: ಅಮಿತಾ ಪ್ರಸಾದ್, ಭಾ.ಆ.ಸೇ.,
**Dr. AMITA PRASAD, I.A.S.,**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ
**PRINCIPAL SECRETARY TO GOVERNMENT**
DEPARTMENT OF WOMEN & CHILD
DEVELOPMENT & EMPOWERMENT OF
DIFFERENTLY ABLED & SENIOR CITIZENS

FAX : 22251011
TELEPHONE : OFF : 22353991
E-mail: secy-wc@karnataka.gov.in
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, 1ನೇ ಮಹಡಿ
ಗೇಟ್-3, ಬೆಂಗಳೂರು - 560 001
KARNATAKA GOVT. SECRETARIAT
M.S. BUILDING, 1ST FLOOR
GATE-3, BANGALORE - 560 001



# ಸಂದೇಶ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿಕಲಚೇತನರ ಏಳಿಗೆಗಾಗಿ ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ವಿವರಗಳು, ಅವುಗಳ ಪ್ರಯೋಜನ ಪಡೆಯುವ ಕುರಿತು ಅನುಸರಿಸಬೇಕಾದ ಕ್ರಮ ಹಾಗೂ ಸಂಪರ್ಕಿಸಬೇಕಾದ ಅಧಿಕಾರಿ/ಕಛೇರಿಗಳ ಮಾಹಿತಿಯ ಅರಿವು ಸಾರ್ವಜನಿಕರಿಗೆ, ಸ್ವಯಂಸೇವಾ ಸಂಸ್ಥೆಗಳಿಗೆ ಹಾಗೂ ಸ್ವತ: ವಿಕಲಚೇತನರಿಗೆ ಇರಬೇಕಾಗಿದ್ದು, ತನ್ಮೂಲಕ ವಿಕಲಚೇತನರು ನೇರವಾಗಿ ಸಂಬಂಧಿತ ಕಛೇರಿಯನ್ನು ಸಂಪರ್ಕಿಸಿ ಸೌಲಭ್ಯ ಪಡೆಯುವಂತಾಗುವುದು ಇಂದಿನ ತಾಂತ್ರಿಕ ಯುಗದ ವೇಗದ ಬದುಕಿನ ಅವಶ್ಯಕತೆಯಾಗಿದ್ದು, ಈ ನಿಟ್ಟಿನಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಹೊರತರುತ್ತಿರುವ "ಹೊಂಬೆಳಕು" ಇಲಾಖಾ ಯೋಜನೆಗಳ ಸಮಗ್ರ ಕೈಪಿಡಿ ಹೆಚ್ಚು ಉಪಯುಕ್ತವಾಗಿರುತ್ತದೆಂಬ ಆಶಯದೊಂದಿಗೆ ಎಲ್ಲಾ ಬಗೆಯ ವಿಕಲಚೇತನರೂ ಇದರ ಸೌಲಭ್ಯವನ್ನು ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

ಡಾ|| ಅಮಿತ ಪ್ರಸಾದ್

Karnataka State Government Disabled Employees Association
Renukaradhya S
Indresh R




**ಪಿ.ಸಿ. ಜಯಣ್ಣ,** ಕ.ಆ.ಸೇ.,
ನಿರ್ದೇಶಕರು
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ



ಪೋಡಿಯಂ ಬ್ಲಾಕ್, ವಿ.ವಿ. ಗೋಪುರ
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು–560 001
ದೂರವಾಣಿ ಸಂ : 22860907, 22866066, 22866046
ಫ್ಯಾಕ್ಸ್ ಸಂ : 22868347
Email : dir-dwdsc-ka@nic.in
Website : www.welfareofdisabled.kar.nic.in


ದಿನಾಂಕ 21–7–2014

## ನಿರ್ದೇಶಕರ ನುಡಿ

ವಿಕಲಚೇತನರನ್ನು ಗುರುತಿಸುವಿಕೆ, ಅಂಗವಿಕಲತೆಯನ್ನು ತಡಗಟ್ಟುವಿಕೆ, ಸಾಮಾಜಿಕ ಭದ್ರತೆ ಸೌಲಭ್ಯಗಳನ್ನು ನೀಡುವುದು ಹಾಗೂ ಪುನರ್ವಸತಿ ಕಾರ್ಯಗಳನ್ನು ಅಂಗವಿಕಲರ ಅಧಿನಿಯಮ 1995ರ ಪರಿಭಾಷೆಯ ಅರ್ಥದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಇಲಾಖೆಯ ಆದ್ಯ ಕರ್ತವ್ಯವಾಗಿದೆ ಎಂದು ಭಾವಿಸುತ್ತೇನೆ. ಈ ನಿಟ್ಟಿನಲ್ಲಿ ಇಲಾಖೆಯು ಕಳೆದ 26 ವರ್ಷಗಳಿಂದ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು ಮುನ್ನಡೆಯುತ್ತಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ 7 ಹೊಸ ಯೋಜನೆಗಳನ್ನು ಜಾರಿಗೊಳಿಸುತ್ತಿರುವದು ತಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇಲಾಖೆಯಲ್ಲಿ ಹಾಲಿ ಜಾರಿಯಲ್ಲಿರುವ ಎಲ್ಲಾ ಯೋಜನೆಗಳನ್ನು ಜಾರಿಗೊಳಿಸುತ್ತಿರುವದು ತಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇಲಾಖೆಯಲ್ಲಿ ಹಾಲಿ ಜಾರಿಯಲ್ಲಿರುವ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪರಿಷ್ಕರಣೆ ಮಾಡಿ ಮಾರ್ಗಸೂಚಿಗಳನ್ನು ಸೂಕ್ತವಾಗಿ ಬದಲಾಯಿಸಿ ಇನ್ನೂ ಉತ್ತಮವಾದ ಯೋಜನೆಯನ್ನಾಗಿ ರೂಪಿಸಲಾಗಿದೆ. ಇಲಾಖೆಯು ಈ ವರ್ಷ ವಿಕಲಚೇತನರ ಸಮೀಕ್ಷೆ ಹಾಗೂ ಹಲವು ಯೋಜನೆಗಳ ಮೌಲ್ವೀಕರಣದ ಪ್ರಯತ್ನವನ್ನೂ ಸಹ ಆರಂಭಿಸಿದೆ.

ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಈ ಎಲ್ಲಾ ಯೋಜನೆಗಳು ಹಾಗೂ ಕಾರ್ಯಗಳ ಪರಿಚಯವನ್ನು ಸಮಾಜಕ್ಕೆ ಮುಟ್ಟಿಸುವ ನಿಟ್ಟಿನಲ್ಲಿ “ಹೊಂಬೆಳಕು” ಕೈಪಿಡಿಯು ಸಹಕಾರಿಯಾಗಿದೆಯೆಂದು ಆಶಿಸುತ್ತಾ ಈ ದಿನ ಮಾನ್ಯ ಇಲಾಖೆ ಸಚಿವರು ಈ ಕೈಪಿಡಿಯನ್ನು ಹೊರತರುತ್ತಿರುವುದು ನನಗೆ ಮತ್ತು ನನ್ನ ಎಲ್ಲಾ ಸಹೋದ್ಯೋಗಿಗಳಿಗೆ ಹರ್ಷವಾಗುತ್ತಿದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

(ಪಿ.ಸಿ. ಜಯಣ್ಣ) ಕ.ಆ.ಸೇ.,
ನಿರ್ದೇಶಕರು


Karnataka State Government Disabled Employees Association
Renukaradhya S
Indresh R

# ವಿಷಯ ಸೂಚಿ


| | | ಪುಟ ಸಂಖ್ಯೆ |
|---|---|---|
| ಇಲಾಖೆಯ ಕಿರುನೋಟ | | 9–10 |
| **ರಾಜ್ಯ ವಲಯ ಯೋಜನೆಗಳು:** | | |
| **I.** | **ಫಲಾನುಭವಿ ಆಧಾರಿತ ಯೋಜನೆಗಳು** | |
| 1 | ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ | 12 |
| 2 | ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ | 13-14 |
| 3 | ಪ್ರತಿಭಾವಂತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | 15 |
| 4 | ಸಾಧನ ಸಲಕರಣೆ | 16 |
| 5 | ಸ್ವಯಂ ಉದ್ಯೋಗ ಕೈಗೊಳ್ಳಲು ಆಧಾರ ಯೋಜನೆ | 17-18 |
| 6 | ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ | 19 |
| 7 | ಸಾಧನೆ ಮತ್ತು ಪ್ರತಿಭೆ | 20-23 |
| 8 | ಬುದ್ಧಿ ಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರಿಗೆ ವಿಮಾ ಯೋಜನೆ | 24-25 |
| 9 | ಉದ್ಯೋಗ ಕೋಶ | 26 |
| 10 | ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯ ವ್ಯಕ್ತಿಗಳು ವಿವಾಹವಾದಲ್ಲಿ ಪ್ರೋತ್ಸಾಹಧನ | 27 |
| 11 | ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ | 28 |
| 12 | ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಶಿಶು ಪಾಲನಾ ಭತ್ಯೆ | 29 |
| 13 | ವಿಕಲಚೇತನರಿಗೆ ಗುರುತಿನ ಚೀಟಿ ವಿತರಣೆ | 30-31 |
| 14 | ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಣೆ | 32 |
| 15 | ವೃದ್ಧಾಪ್ಯ ವೇತನ | 33 |
| **II.** | **ಸಮುದಾಯ ಆಧಾರಿತ** | |
| 1 | ಅಂಗವಿಕಲರ ಗ್ರಾಮೀಣ ಪುನರ್ವಸತಿ ಯೋಜನೆ | 35 |
| 2 | ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ | 36-38 |
| 3 | ಸರ್ಕಾರದ ವತಿಯಿಂದ ನಡೆಯುತ್ತಿರುವ ವಿಶೇಷ ಶಾಲೆಗಳು | 39-40 |
| 4 | ಅಂಧ ಮತ್ತು ಶ್ರವಣ ದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ | 41 |
| 5 | ಸರ್ಕಾರಿ ಬ್ರೈಲ್ ಮುದ್ರಣಾಲಯ, ಮೈಸೂರು | 42 |
| 6 | ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ | 43-44 |
| 7 | ಸಮಾಜ ಸೇವಾ ಸಂಕೀರ್ಣ | 45-46 |



Karnataka State Government Disabled Employees Association
Renukaradhya S
Indresh R

| | | |
|---|---|---|
| 8 | ಮಂದಮತಿ ಮಹಿಳೆಯರ ಅನುಪಾಲನಾ ಗೃಹ | 47 |
| 9 | ಮಾನಸ ಕೇಂದ್ರ | 48 |
| 10 | ಉದ್ಯೋಗಸ್ಥ ವಿಕಲಚೇತನ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿನಿಲಯ | 49 |
| 11 | ಅಂಗವಿಕಲ ನೌಕರರ ಮತ್ತು ತರಬೇತಿದಾರರ (ಪುರುಷ & ಮಹಿಳೆಯರ) ವಸತಿ ನಿಲಯ, ಬೆಂಗಳೂರು | 50 |
| 12 | ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ | 51-52 |
| 13 | ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ | 53-54 |
| 14 | ವಿಕಲಚೇತನರಿಗೆ ಇರುವ ಅಧಿನಿಯಮಗಳು | 55 |

## ಜಿಲ್ಲಾ ವಲಯದ ಯೋಜನೆಗಳು

| | | |
|---|---|---|
| 1 | 1982ರ ಅನುದಾನ ಸಂಹಿತೆಯಡಿ ವಿಶೇಷ ಶಾಲೆ/ತರಬೇತಿ ಕೇಂದ್ರಗಳಿಗೆ ಅನುದಾನ | 57 |
| 2 | ರಾಜ್ಯ ಅನುದಾನದಡಿ ನಡೆಯುತ್ತಿರುವ ವೃದ್ಧಾಶ್ರಮಗಳು | 58 |

## ಕೇಂದ್ರ ಸರ್ಕಾರದ ಯೋಜನೆಗಳು

| | | |
|---|---|---|
| 1 | ದೀನ್ ದಯಾಳ್ ರಿಹ್ಯಾಬಿಲಿಟೇಷನ್ (DDRS) ಯೋಜನೆಯಡಿ ವಿಕಲಚೇತನರಿಗೆ ಶೈಕ್ಷಣಿಕ ಹಾಗು ವೃತ್ತಿ ತರಬೇತಿ, ಯೋಜನೆಗಳು | 60 |
| 2 | ಇಂಟಿಗ್ರೇಟೆಡ್ ಪ್ರೋಗ್ರಾಂ ಫಾರ್ ಓಲ್ಡರ್ ಪರ್ಸನ್ಸ್ (IPOP)ಯೋಜನೆಯಡಿ ವೃದ್ಧಾಶ್ರಮಗಳು, ಮೊಬೈಲ್ ಮೆಡಿಕೇರ್ ಸೆಂಟರ್, ಹಗಲು ಯೋಗಕ್ಷೇಮ ಕೇಂದ್ರಗಳು ಮತ್ತು ಡಿಮೆನ್ಷಿಯ ಹಗಲು ಯೋಗಕ್ಷೇಮ ಕೇಂದ್ರಗಳು ಇತ್ಯಾದಿ. | 61 |
| 3 | ಸಿಪ್ಡಾ (SIPDA) ಯೋಜನೆಯಡಿ ವಿಕಲಚೇತನರಿಗೆ ಸಾರ್ವಜನಿಕ ಕಟ್ಟಡಗಳಲ್ಲಿ ಅಡೆತಡೆರಹಿತ ವಾತಾವರಣ ಕಲ್ಪಿಸುವುದು. | 62 |
| 4 | ಅಡಿಪ್ (ಅಸಿಸ್ಟಿವ್ ಡಿವೈಸಸ್ ಫಾರ್ ಪರ್ಸನ್ಸ್ ವಿತ್ ಡಿಸೆಬಿಲಿಟೀಸ್) ಯೋಜನೆ | 63 |

## 2014-15ನೇ ಸಾಲಿನ ಹೊಸ ಯೋಜನೆಗಳು

| | | |
|---|---|---|
| 1 | ನಿರಾಮಯ - ವೈದ್ಯಕೀಯ ವೆಚ್ಚ ಮರುಪಾವತಿ ಯೋಜನೆ | 65 |
| 2 | ಎಸ್.ಎಸ್.ಎಲ್.ಸಿ ಹಾಗೂ ನಂತರದ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ವಿತರಣೆ | 66 |


Karnataka State Government Disabled Employees Association
Renukaradhya S
Indresh R

| | | |
|---|---|---|
| 3 | ತೀವ್ರತರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ನೀಡುವುದು | 67 |
| 4 | ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಮ್ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು | 68 |
| 5 | ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ | 69 |

**ವಿಕಲಚೇತನರಿಗೆ ಇತರೆ ಇಲಾಖೆಯಿಂದ ದೊರಕುತ್ತಿರುವ ಸೌಲಭ್ಯಗಳು** 71-73

| | | |
|---|---|---|
| 1 | ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳಿಗೆ ವಿವಿಧ ಇಲಾಖೆಗಳಲ್ಲಿರುವ ಯೋಜನೆಗಳಲ್ಲಿ ಶೇ.3ರಷ್ಟು ಅನುದಾನ ಮೀಸಲಾತಿ | |
| 2 | ಅಂಗವಿಕಲ ವ್ಯಕ್ತಿಗಳಿಗೆ ರಿಯಾಯಿತಿ ಬಸ್‌ಪಾಸ್: | |
| 3 | ಉದ್ಯೋಗದಲ್ಲಿ ಮೀಸಲಾತಿ | |
| 4 | ಅಂಧ ಮತ್ತು ದೈಹಿಕ ಅಂಗವಿಕಲ ಸರ್ಕಾರಿ ನೌಕರರಿಗೆ ಸಂಚಾರಿ ಭತ್ಯೆ | |
| 5 | ಅಂಗವಿಕಲತೆಯುಳ್ಳ ರಾಜ್ಯ ಸರ್ಕಾರಿ ನೌಕರರು ಖರೀದಿಸುವ ಯಂತ್ರಚಾಲಿತ ವಾಹನದ ಬೆಲೆಯ ಶೇ.25ರಷ್ಟನ್ನು ಹಿಂಬರಿಸುವ ಬಗ್ಗೆ. | |
| 6 | ರಾಜ್ಯ ಸರ್ಕಾರಿ ನೌಕರರ ಅವಲಂಬಿತ ಅಂಧ ಮತ್ತು ಅಂಗವಿಕಲ ಮಕ್ಕಳಿಗೆ ಶಿಕ್ಷಣ ಭತ್ಯೆಯ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ. | |
| 7 | ಚಲನವೈಕಲ್ಯ ಹೊಂದಿರುವ ಮಕ್ಕಳಿರುವ ಸರ್ಕಾರಿ ನೌಕರರಿಗೆ ಪೋಷಣಾ ಭತ್ಯೆಯ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ | |
| 8 | ನಗರ ಸ್ಥಳೀಯ ಸಂಸ್ಥೆಗಳ ಅಂಗವಿಕಲರ ಕಲ್ಯಾಣ ನಿಧಿಯ ಲೆಕ್ಕಚಾರ ಹಾಗೂ ನಿಧಿ ವಿನಿಯೋಗದ ಬಗ್ಗೆ ಮಾರ್ಗಸೂಚಿ | 74-81 |
| 9 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ಯೋಜನೆಗಳಲ್ಲಿ ಶೇ 3ರಷ್ಟು ನಿಧಿಯನ್ನು ಮೀಸಲಿರಿಸುವ ಬಗ್ಗೆ | 82-83 |
| 10. | ಅಂಗವಿಕಲರ ಅಧಿನಿಯಮ 1995ರ ನಿಯಮ 33 ಮತ್ತು 43ಕ್ಕೆ ಸಂಬಂಧಿಸಿದ ಅಧಿಸೂಚನೆ. (ಶೇ 3ರಷ್ಟು ಅನುದಾನ ಬಳಕೆ) | 84-85 |


Karnataka State Government Disabled Employees Association
Renukaradhya S
Indresh R

# ಇಲಾಖೆಯ ಕಿರುನೋಟ

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು 1988 ರಿಂದ ಪ್ರತ್ಯೇಕ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ಇಲಾಖೆಯ ಮುಖ್ಯಸ್ಥರಾಗಿ ನಿರ್ದೇಶಕರಿದ್ದು, ಅವರಿಗೆ ಸಹಾಯಕರಾಗಿ ಜಂಟಿ ನಿರ್ದೇಶಕರು, ಉಪನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಪತ್ರಾಂಕಿತ ಕಛೇರಿ ವ್ಯವಸ್ಥಾಪಕರು ಇರುತ್ತಾರೆ. ದಿನಾಂಕ:01–04–2006ರಿಂದ ಜಿಲ್ಲಾ ಪುನರ್ವಸತಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 21 ಸಿಬ್ಬಂದಿಗಳು ಹಾಗೂ ದಿನಾಂಕ:01–01–2008ರಿಂದ ಇಲಾಖೆಗೆ 72 ಸಿಬ್ಬಂದಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಶಾಶ್ವತ ವರ್ಗಾವಣೆಯಾಗಿ ವಿಲೀನಗೊಂಡಿರುತ್ತಾರೆ.

## ಇಲಾಖೆಯ ಮುಖ್ಯ ಉದ್ದೇಶಗಳು:

- ವಿಕಲಚೇತನ ವಿದ್ಯಾರ್ಥಿಗಳಿಗೆ ಅವಶ್ಯಕತೆಯಿರುವ ಶಿಕ್ಷಣವನ್ನು ನೀಡುವುದು.
- ವಿಕಲಚೇತನರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಹಾಗೂ ಸ್ವಯಂ ಉದ್ಯೋಗಗಳಿಗೆ ನೆರವಾಗಲು ಸರ್ಕಾರದಿಂದ ಹಾಗೂ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ಸಹಾಯ ನೀಡುವುದು
- ವಿಕಲಚೇತನರು ಎಲ್ಲರಂತೆ ಓಡಾಡಲು ಅಡೆತಡೆ ರಹಿತ ವಾತಾವರಣ ಕಲ್ಪಿಸುವುದು.
- ವಿಕಲಚೇತನರ ಕುಂದುಕೊರತೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸುವುದು.
- ವಿಕಲಚೇತನರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದು.
- ವಿಕಲಚೇತನರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಅವಕಾಶಗಳನ್ನು ಕಲ್ಪಿಸುವುದು.
- ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶೈಕ್ಷಣಿಕ ತರಬೇತಿ ಮತ್ತು ಉದ್ಯೋಗ ಸಾಮಾಜಿಕ ಭದ್ರತೆ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ವಿಕಲಚೇತನರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣಗೊಳಿಸಿ ಸಮಾಜದ ಮುಖ್ಯ ವಾಹಿನಿಗೆ ತರುವುದು.
- ಹಿರಿಯ ನಾಗರಿಕರಿಗೆ ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಆಶ್ರಯ ಹಾಗೂ ಅವರನ್ನು ನಿಂದಿಸುವ ಮತ್ತು ಅನುಚಿತ ಉಪಯೋಗ ಪಡೆದುಕೊಳ್ಳುವವರಿಂದ ರಕ್ಷಣೆ ಒದಗಿಸುವುದು, ಇನ್ನಿತರ ಅವಶ್ಯಕತೆಗಳನ್ನು ಪೂರೈಸಲು ಬೆಂಬಲವನ್ನು ನೀಡುವುದು.

Karnataka State Government Disabled Employees Association
Renukaradhya S
Indresh R

ಅಂಗವಿಕಲತೆಯನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

1. ದೈಹಿಕ ವಿಕಲಚೇತನರು
2. ಸಂಪೂರ್ಣ ದೃಷ್ಟಿದೋಷವುಳ್ಳವರು,
3. ಮಂದ ದೃಷ್ಟಿದೋಷವುಳ್ಳವರು
4. ಶ್ರವಣದೋಷವುಳ್ಳವರು,
5. ಬುದ್ಧಿಮಾಂದ್ಯರು,
6. ಕುಷ್ಟರೋಗ ನಿವಾರಿತರು
7. ಮಾನಸಿಕ ಅಸ್ವಸ್ಥರು.

2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 13,24,205 ವಿವಿಧ ರೀತಿಯ ವಿಕಲಚೇತನರು ಇರುತ್ತಾರೆ. ಒಟ್ಟು ಜನ ಹಾಗೂ ಒಟ್ಟು ಜನಸಂಖ್ಯೆಯ ಶೇ.7.72ರಷ್ಟು, 47.18ಲಕ್ಷ ಹಿರಿಯ ನಾಗರಿಕರು ಇರುತ್ತಾರೆ.

| ಕ್ರ.ಸಂ | ವಿವಿಧ ಬಗೆಯ ಅಂಗವಿಕಲರು | ವಿಕಲಚೇತನರ ಸಂಖ್ಯೆ |
|---|---|---|
| 1 | ಅಂಧರು | 2,64,170 |
| 2 | ಶ್ರವಣದೋಷವುಳ್ಳವರು | 2,35,691 |
| 3 | ವಾಗ್ದೋಷವುಳ್ಳವರು | 90,741 |
| 4 | ದೈಹಿಕ ವಿಕಲಚೇತನರು | 2,71,982 |
| 5 | ಬುದ್ಧಿಮಾಂದ್ಯರು | 93,974 |
| 6 | ಮಾನಸಿಕ ಅಸ್ವಸ್ಥರು | 20,913 |
| 7 | ಇತರರು | 2,46,721 |
| 8 | ಬಹುವಿಧ ಅಂಗವಿಕಲರು | 1,00,013 |
| | ಒಟ್ಟು | **13,24,205** |

Karnataka State Government Disabled Employees Association
Renukaradhya S
Indresh R

ವಿವಿಧ ರೀತಿಯ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳು ಹಾಗೂ ಹಿರಿಯ ನಾಗರಿಕರು ಸರ್ಕಾರದಿಂದ ಅನುಷ್ಠಾನವಾಗುವ ಯೋಜನೆಗಳ ಲಾಭ ಪಡೆದು ಸಾಧ್ಯವಾದಷ್ಟು ಸಾಮಾನ್ಯರಂತೆ ಜೀವನವನ್ನು ನಡೆಸಲು ಅನುಕೂಲವಾಗುವಂತೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳ ಸಹಕಾರದೊಂದಿಗೆ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

# ಫಲಾನುಭವಿ ಆಧಾರಿತ ಯೋಜನೆಗಳು

Karnataka State Government Disabled Employees Association
Renukaradhya S
Indresh R

# 1. ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ

(ಸರ್ಕಾರಿ ಆದೇಶ ಸಂ:ಆರ್.ಡಿ:74:ಡಿಎಸ್.ಪಿ:2013: ಬೆಂಗಳೂರು ದಿ:30.08.2013)

ಗ್ರಾಮೀಣ ಪ್ರದೇಶದಲ್ಲಿ ರೂ.12000/– ಹಾಗೂ ನಗರ ಪ್ರದೇಶದಲ್ಲಿ ರೂ.17000/– ಕ್ಕಿಂತಲೂ ಕಡಿಮೆ ವಾರ್ಷಿಕ ಆದಾಯವಿರುವ ಕುಟುಂಬದಲ್ಲಿರುವ ಶೇ.40 ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆಯಾನ ರೂ.500/–ಗಳ ಪೋಷಣಾ ಭತ್ಯೆಗಳನ್ನು ನೀಡಲಾಗುತ್ತಿದೆ. ಶೇ.75ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರಿಗೆ ಮಾಹೆಯಾನ ರೂ.1200/–ಪೋಷಣಾ ಭತ್ಯೆಯನ್ನು ನೀಡಲಾಗುತ್ತಿದೆ. ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ನಿರ್ದೇಶನಾಲಯದ ಮುಖಾಂತರ ಸಂಬಂಧಿಸಿದ ತಾಲ್ಲೂಕಿನ ತಹಸೀಲ್ದಾರ್‌ರವರು ಪೋಷಣಾ ಭತ್ಯೆಯನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

Karnataka State Government Disabled Employees Association
Renukaradhya S
Indresh R

**ಅರ್ಹತೆಗಳು:–**

- ವ್ಯಕ್ತಿಯ ಕುಟುಂಬದ ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶದಲ್ಲಿ ರೂ.12000/– ಹಾಗೂ ನಗರ ಪ್ರದೇಶದಲ್ಲಿ ರೂ.17000/– ಕ್ಕಿಂತಲೂ ಕಡಿಮೆ ಇರಬೇಕು.
- ವ್ಯಕ್ತಿಯು ಸತತವಾಗಿ ಕರ್ನಾಟಕ ರಾಜ್ಯದಲ್ಲಿ 05 ವರ್ಷಗಳಿಂದ ವಾಸಿಸಿರಬೇಕು.
- ಸರ್ಕಾರದ ವತಿಯಿಂದ ವೃದ್ಧಾಪ್ಯ ವೇತನ ಒಳಗೊಂಡಂತೆ ಇತರೆ ಯಾವುದೇ ಪಿಂಚಣಿ ಸೌಲಭ್ಯ ಪಡೆಯದ ಅಭ್ಯರ್ಥಿಗಳಾಗಿರಬೇಕು.
- ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದ ಕುಟುಂಬ ವಾರ್ಷಿಕ ಆದಾಯ ಪ್ರಮಾಣ ಪತ್ರ ಒದಗಿಸಬೇಕು.
- ವೈದ್ಯಕೀಯ ಪ್ರಾಧಿಕಾರರವರು ನಿಗಧಿಪಡಿಸಿದಂತೆ ತಜ್ಞ ವೈದ್ಯಾಧಿಕಾರಿಗಳಿಂದ ಅಂಗವಿಕಲತೆ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

# 2. ವಿಕಲಚೇತನರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

(ಸರ್ಕಾರಿ ಆದೇಶ ಸಂಖ್ಯೆ:ಮಮಅ/404/ಪಿಹೆಚ್‌ಪಿ/2001 ದಿನಾಂಕ:04-09-2001)

(ಸರ್ಕಾರಿ ಆದೇಶ ಸಂಖ್ಯೆ:ಮಮಇ:293:ಪಿಹೆಚ್‌ಪಿ:2013 ಬೆಂಗಳೂರು ದಿನಾಂಕ:01.02.2014)

## ಪೀಠಿಕೆ:

ಈ ಯೋಜನೆಯಡಿ ಒಂದನೇ ತರಗತಿಯಿಂದ ವಿಶ್ವವಿದ್ಯಾಲಯದ ಮಟ್ಟದವರೆಗೆ ಓದುತ್ತಿರುವ ಅರ್ಹ ವಿಕಲಚೇತನರಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಮಇ:293:ಪಿಹೆಚ್‌ಪಿ:2013 ಬೆಂಗಳೂರು ದಿನಾಂಕ:01.02.2014 ರ ಆದೇಶದಲ್ಲಿ ವಿಕಲಚೇತನರಿಗೆ ನೀಡುತ್ತಿರುವ ವಿದ್ಯಾರ್ಥಿವೇತನ ದರಗಳನ್ನು ಪರಿಷ್ಕರಿಸಿ ಆದೇಶವನ್ನು ಹೊರಡಿಸಿದೆ.

Karnataka State Government Disabled Employees Association
Renukaradhya S
Indresh R

## ಉದ್ದೇಶ :-

- ವಿಕಲಚೇತನರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ಸಮಾಜದ ಮುಖ್ಯವಾಹಿನಿಗೆ ಬರಲು ಸಹಕಾರಿಯಾಗುತ್ತದೆ.
- ವಿಕಲಚೇತನ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಮಧ್ಯಕ್ಕೆ ಮೊಟಕುಗೊಳಿಸಿ ಶಿಕ್ಷಣ ಪಡೆಯುವಲ್ಲಿ ವಂಚಿತರಾಗುತ್ತಿರುವುದನ್ನು ತಡೆಯಬಹುದು.
- ವಿದ್ಯಾರ್ಥಿವೇತನವನ್ನು ವಿಕಲಚೇತನ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಿದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಮುಂದುವರಿಸಲು ಸಹಕಾರಿ ಯಾಗುತ್ತದೆ.
- ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ವ್ಯಾಸಂಗದವರೆಗೂ ಶಿಕ್ಷಣ ನೀಡಲು ಉತ್ತೇಜನ ನೀಡುವುದು.
- ರಾಜ್ಯದಲ್ಲಿರುವ ವಿಕಲಚೇತನ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಮಾಣವನ್ನು ಹೆಚ್ಚಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು.
- ವಿಕಲಚೇತನ ವಿದ್ಯಾರ್ಥಿಗಳು ಸಾಮಾನ್ಯ ವಿದ್ಯಾರ್ಥಿಗಳು ಪಡೆಯುವ ವ್ಯಾಸಂಗದಂತೆ ಇವರುಗಳಿಗೂ ಸಹ ಸಮಾನ ಶಿಕ್ಷಣ ಕಲ್ಪಿಸುವುದು.
- ವಿಕಲಚೇತನ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮುಂದುವರಿಸಲು ಪ್ರೋತ್ಸಾಹ ನೀಡುವುದು.

## ಷರತ್ತುಗಳು:–

- ವಿಕಲಚೇತನ ವಿದ್ಯಾರ್ಥಿಗಳ ವೇತನವನ್ನು ಮಂಜೂರು ಮಾಡಲು ಶಾಲಾ/ಕಾಲೇಜು ಮುಖ್ಯಸ್ಥರ ದೃಢೀಕರಣದೊಂದಿಗೆ ಅರ್ಜಿಗಳನ್ನು ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸುವುದು.
- ಎಲ್ಲಾ ವರ್ಗದ ವಿಕಲಚೇತನ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವುದು.
- ವಿಕಲಚೇತನ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯಲು ಯಾವುದೇ ಆದಾಯ ಮಿತಿ ಇರುವುದಿಲ್ಲ.
- ಉನ್ನತ ಶಿಕ್ಷಣದಲ್ಲಿ ಆಯಾ ವರ್ಷಗಳಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.
- ವಿದ್ಯಾರ್ಥಿಗಳು ಕಡ್ಡಾಯವಾಗಿ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು ಹಾಗೂ ಅವರ ಬ್ಯಾಂಕ್ ಖಾತೆಗೆ ವಿದ್ಯಾರ್ಥಿವೇತನವನ್ನು ಜಮಾ ಮಾಡಲಾಗುವುದು.

Karnataka State Government Disabled Employees Association
Renukaradhya S
Indresh R

## ಸೌಲಭ್ಯ:

**ವಿದ್ಯಾರ್ಥಿ ವೇತನವನ್ನು ಕೆಳಗೆ ವಿವರಿಸಿದಂತೆ ಮಂಜೂರು ಮಾಡಿ ಪಾವತಿಸಲಾಗುವುದು.**

| ಕ್ರ ಸಂ | ವಿಕಲಚೇತನ ವಿದ್ಯಾರ್ಥಿಗಳಿಗೆ ಶಿಷ್ಯವೇತನ | ಹಿಂದೆ ನೀಡುತ್ತಿದ್ದ ವಿದ್ಯಾರ್ಥಿ ವೇತನ (ಮಾಹೆಯಾನ) | ಪರಿಷ್ಕೃತ ವಿದ್ಯಾರ್ಥಿ ವೇತನ (ಮಾಹೆಯಾನ) |
|---|---|---|---|
| 1 | 1 ರಿಂದ 5ನೇ ತರಗತಿ | 50/– | 100/– |
| 2 | 6ರಿಂದ 10ನೇ ತರಗತಿ | 100/– | 200/– |
| 3 | ಪಿ.ಯು.ಸಿ | 150/– | 300/– |
| 4 | ಬಿ.ಎ/ಬಿ.ಎಸ್ಸಿ,/ಬಿ.ಕಾಂ, ಇತರೆ ಪದವೀಧರರು ಹಾಗೂ ಟಿ.ಸಿ.ಹೆಚ್/ತತ್ಸಮಾನ | 200/– | 400 |
| 5 | ಬಿ.ಇ.ಬಿ.ಟೆಕ್, ಎಂ.ಬಿ.ಬಿ.ಎಸ್, ಎಲ್.ಎಲ್.ಬಿ/ ಡಿಪ್ಲೋಮಾ ಇನ್ ಪ್ರೋಫೆಷನ್ ಮತ್ತು ಇಂಜಿನಿಯರಿಂಗ್ ಇನ್ ಪ್ಲ್ಯಾಂಟ್ ಟ್ರೈನಿಂಗ್. | 250/– | – * |
| 6 | ಎಂ.ಎ, ಎಂ.ಎಸ್ಸಿ, ಎಂ.ಕಾಂ. ಎಲ್.ಎಲ್.ಎಂ ಹಾಗೂ ತತ್ಸಮಾನ | 300/– | – * |

* ಕ್ರಮ ಸಂಖ್ಯೆ 5 & 6 ವಿದ್ಯಾರ್ಥಿ ವೇತನ ಪರಿಷ್ಕರಣೆಗಾಗಿ ಸರ್ಕಾರದ ಅದೇಶ ನಿರೀಕ್ಷಿಸಲಾಗಿದೆ.

## 3. ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ:

(ಸರ್ಕಾರಿ ಆದೇಶ ಸಂ:ಸ.ಕಾ.ಕ:223:ಪಿಹೆಚ್‌ಪಿ:98:ದಿ:31.12.1992)
ಸರ್ಕಾರಿ ಆದೇಶ ಸಂ:ಮಮಅ:288:ಪಿಹೆಚ್.ಪಿ:2002 ದಿ:19.09.2002)
(ಸರ್ಕಾರಿ ಆದೇಶ ಸಂ:ಮಮಇ:324:ಪಿಹೆಚ್‌ಪಿ:2013 ಬೆಂಗಳೂರು. ದಿ:05.02.2014
ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ಮಮಇ:324:ಪಿಹೆಚ್‌ಪಿ:2013 ಬೆಂಗಳೂರು ದಿ:08.05.2014)

### ಉದ್ದೇಶ:-

ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ವಿಕಲಚೇತನ ವಿದ್ಯಾರ್ಥಿಗಳನ್ನು ಪ್ರತಿಭಾವಂತರನ್ನಾಗಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು ಯೋಜನೆಯ ಉದ್ದೇಶವಾಗಿರುತ್ತದೆ. ಪ್ರೋತ್ಸಾಹಧನದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ | ತರಗತಿಗಳು | ನೀಡುತ್ತಿರುವ ಪ್ರೋತ್ಸಾಹ ಧನ |
|---|---|---|
| 1 | ಎಸ್.ಎಸ್.ಎಲ್.ಸಿ | 3000/- |
| 2 | ಪದವಿ ಪೂರ್ವ ಶಿಕ್ಷಣ | 5000/- |
| 3 | ಪದವಿ, ಟಿ.ಸಿ.ಹೆಚ್. | 8000/- |
| 4 | ಬಿ.ಇಡಿ, ಸ್ನಾತಕೋತ್ತರ ಪದವಿ, ಎಂ.ಎ., ಎಂ.ಕಾಂ., ಎಂ.ಎಸ್ಸಿ ಹಾಗೂ ಪದವಿ ನಂತರ 2 ವರ್ಷಗಳ ಕೋರ್ಸ್‌ಗೆ. | 10000/- |
| 5 | ಕೃಷಿ ಪದವಿ, ಇಂಜಿನೀಯರಿಂಗ್ ತಾಂತ್ರಿಕ ಪಶು ವೈದ್ಯಕೀಯ, ಎಂ.ಇಡಿ. ವೈದ್ಯಕೀಯ ಪದವಿ. | 12000/- |

Karnataka State Government Disabled Employees Association
Renukaradhya S
Indresh R

### ಅರ್ಹತೆಗಳು:

1. ವ್ಯಾಸಂಗ ಮಾಡುತ್ತಿರುವ ಹಾಗೂ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಯು ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರಬೇಕು ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರಬೇಕು.
2. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಪ್ರಥಮ ಬಾರಿಗೆ ಉತ್ತೀರ್ಣರಾಗಿರಬೇಕು.
3. ಶೇ.60%ಕ್ಕಿಂತಲೂ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ.
4. ಅರ್ಜಿಯನ್ನು ವ್ಯಾಸಂಗ ಮಾಡುತ್ತಿರುವ ಶಾಲೆ/ಕಾಲೇಜು ಮುಖ್ಯಸ್ಥರ ಮೂಲಕ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.

# 4. ಸಾಧನ ಸಲಕರಣೆಗಳು

(ಸರ್ಕಾರಿ ಆದೇಶ ಸಂ.ಎಸ್.ಡಬ್ಲ್ಯೂ.ಎಲ್-199. ಪಿಹೆಚ್‌ಪಿ-91 ದಿನಾಂಕ: 05-02-1992)

(ಸರ್ಕಾರದ ಸೇರ್ಪಡೆ ಆದೇಶ ಸಂ: ಡಬ್ಲ್ಯೂಸಿಡಿ 194 ಪಿಹೆಚ್‌ಪಿ 2012 ದಿನಾಂಕ: 14-08-2012)

## ಪೀಠಿಕೆ

ಅಂಗವಿಕಲರ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾಗಿರುವ ತ್ರಿಚಕ್ರವಾಹನಗಳು, ಶ್ರವಣ ಸಾಧನಗಳು, ಕೃತಕ ಅಂಗಾಂಗಳು, ಬ್ರೈಲ್ ಗಡಿಯಾರಗಳು, ದೃಷ್ಟಿದೋಷವುಳ್ಳವರು ಉಪಯೋಗಿಸುವ ಬಿಳಿ ಕೋಲುಗಳನ್ನು ಉಚಿತವಾಗಿ ವಿತರಿಸುವುದು ಹಾಗೂ ಯಂತ್ರಚಾಲಿತ ತ್ರಿಚಕ್ರವಾಹನ ಮತ್ತು ಡಿಜಿಟಲ್ ಶ್ರವಣ ಸಾಧನಗಳನ್ನು ಖರೀದಿಸಲು ಶೇಕಡ 50ರಷ್ಟು ಸಹಾಯಧನವನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಸಾಧನ ಸಲಕರಣೆಗಳನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುವುದು.

## ಅರ್ಹತೆ/ಷರತ್ತುಗಳು:

1. ಅಂಗವಿಕಲ ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿ 10 ವರ್ಷಗಳಿಂದ ವಾಸ ಮಾಡುತ್ತಿರುವ ಬಗ್ಗೆ ತಹಸೀಲ್ದಾರ್ ರವರಿಂದ ಪಡೆದ ದೃಢೀಕರಣ ಅಥವಾ ಕರ್ನಾಟಕದಲ್ಲಿ 10 ವರ್ಷಗಳಿಂದ ವ್ಯಾಸಂಗ ಮಾಡಿದ ವಿದ್ಯಾಭ್ಯಾಸದ ದೃಢೀಕರಣ ಪತ್ರ ಒದಗಿಸಬೇಕು.
2. ಅಂಗವಿಕಲತೆ ಹೊಂದಿರುವ ಬಗ್ಗೆ ಸಂಬಂಧಪಟ್ಟ ವೈದ್ಯಕೀಯ ಮಂಡಳಿಯಿಂದ ಪಡೆದ ದೃಢೀಕರಣ ಒದಗಿಸಬೇಕು.
3. ಅಂಗವಿಕಲ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ನಗರ ವಾಸಿಯಾಗಿದ್ದಲ್ಲಿ ರೂ.24,000 ಮತ್ತು ಗ್ರಾಮೀಣ ವಾಸಿಯಾಗಿದ್ದಲ್ಲಿ ರೂ. 11,500 ಮೀರಿರಬಾರದು.
4. ಈ ಹಿಂದೆ ಸರ್ಕಾರದ ವತಿಯಿಂದಾಗಲಿ ಅಥವಾ ಸಂಘ ಸಂಸ್ಥೆಗಳಿಂದಾಗಲೀ ಸಹಾಯಧನ/ ಸಾಧನ ಸಲಕರಣೆ ಪಡೆದಿರಬಾರದು.

Karnataka State Government Disabled Employees Association
Renukaradhya S
Indresh R






# 5. ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆ

(ಸರ್ಕಾರದ ಆದೇಶದ ಸಂ.ಮ.ಮ.ಅ. 242 ಪಿಹೆಚ್‌ಪಿ–98 ದಿನಾಂಕ: 12–01–1999)
(ಸರ್ಕಾರದ ಆದೇಶದ ಸಂ.ಮ.ಮ.ಇ. 156. ಪಿಹೆಚ್‌ಪಿ–2006 ದಿನಾಂಕ: 28–08–2006)
(ಸರ್ಕಾರದ ಆದೇಶದ ಸಂ.ಮ.ಮ.ಇ. 244 ಪಿಹೆಚ್‌ಪಿ–2007 ದಿನಾಂಕ: 25–06–2007)

ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಆಧಾರ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆಯ ಅಡಿಯಲ್ಲಿ ರೂ.15000 ಮೌಲ್ಯದ ಪೆಟ್ಟಿಗೆ ಅಂಗಡಿಯನ್ನು ಮತ್ತು ನಿರ್ವಹಣಾ ಬಂಡವಾಳ ರೂ.20000/–ಗಳನ್ನು ಬಡ್ಡಿರಹಿತ ಸಾಲವನ್ನಾಗಿ ಮಂಜೂರುಮಾಡಲಾಗುತ್ತದೆ. ಸಾಲವನ್ನು 40 ಕಂತಿನಲ್ಲಿ ಮರುಪಾವತಿ ಮಾಡಲು ಕಾಲಾವಕಾಶವಿರುತ್ತದೆ.

## ಉದ್ದೇಶ:

ದೃಷ್ಠಿದೋಷವುಳ್ಳ, ಶ್ರವಣದೋಷವುಳ್ಳ, ಚಲನವಲನ ತೊಂದರೆ ಮತ್ತು ಮನೋವಿಕಲತೆಯುಳ್ಳ ಅಂಗವಿಕಲರಿಗೆ ಲಾಭದಾಯಕ ಉದ್ಯೋಗವನ್ನು ಒದಗಿಸಿಕೊಡುವುದು ಅಂಗವಿಕಲರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಪ್ರೋತ್ಸಾಹಿಸುವುದು ಹಾಗೂ ಆರ್ಥಿಕ ಮಟ್ಟವನ್ನು ಅಭಿವೃದ್ಧಿಗೊಳಿಸಿ ಇವರು ಸಮಾಜದಲ್ಲಿ ಇತರರಿಗೆ ಸಮಾನವಾಗಿ ಬಾಳಲು ಅವಕಾಶ ಮಾಡಿಕೊಡುವುದು.

Karnataka State Government Disabled Employees Association
Renukaradhya S
Indresh R

## ಅರ್ಹತೆ:

ಫಲಾನುಭವಿಗಳಿಗೆ ಶೇ 40 ಹಾಗೂ ಹೆಚ್ಚಿನ ಅಂಗವಿಕಲತೆ ಇರತಕ್ಕದ್ದು, ಗ್ರಾಮೀಣ ಅಭ್ಯರ್ಥಿಗಳಿಗೆ ರೂ.11,500ಗಳು ಮತ್ತು ನಗರದ ಅಭ್ಯರ್ಥಿಗಳಿಗೆ ರೂ.24,00ಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಇರತಕ್ಕದ್ದು. ಅಕ್ಷರಸ್ಥರಾಗಿರಬೇಕು. ಸಣ್ಣ ವ್ಯಾಪಾರ ಮಾಡುವ ನೈಪುಣ್ಯವಿರಬೇಕು. ಕಳೆದ 10 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು. ಸರ್ಕಾರಕ್ಕೆ ಸುಸ್ತಿದಾರರಾಗಿರಬಾರದು. ಕನಿಷ್ಠ 18 ಹಾಗೂ ಗರಿಷ್ಠ 55ವರ್ಷಗಳೊಳಗಿನ ನಿರುದ್ಯೋಗಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.

## ಫಲಾನುಭವಿಗಳ ಆಯ್ಕೆ:

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

## ಆಧಾರ ಯೋಜನೆ





Karnataka State Government Disabled Employees Association
Renukaradhya S
Indresh R

## 6. ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ

**(ಸರ್ಕಾರಿ ಆದೇಶ ಸಂ:ಮಮಅ 341 ಪಿಹೆಚ್‌ಪಿ–2000 ದಿನಾಂಕ 7–8–2000 , ಮಮಇ 199 ಪಿಹೆಚ್‌ಪಿ 2008(5) ದಿನಾಂಕ:15/09/2008 ಮತ್ತು ಮಮಇ 114 ಪಿಎಚ್‌ಪಿ 2014, ಬೆಂಗಳೂರು, ದಿನಾಂಕ:07/06/2014)**

### ಉದ್ದೇಶ:

ಅಂಗವೈಕಲ್ಯತೆಯ ಪ್ರಮಾಣವನ್ನು ಕಡಿಮೆ ಮಾಡುವ ಅಥವಾ ನಿವಾರಿಸುವ ಸಲುವಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗುವ ವಿಕಲಚೇತನ ವ್ಯಕ್ತಿಗೆ ಒಳರೋಗಿಯಾಗಿ ಶಸ್ತ್ರಚಿಕಿತ್ಸೆ/ಔಷಧಿ/ವೈದ್ಯಕೀಯ ಪರೀಕ್ಷೆ/ಬೆಡ್‌ಚಾರ್ಜ್‌ಗಳ ವೆಚ್ಚವನ್ನು ಭರಿಸಲು ಗರಿಷ್ಠ ರೂ.1.00 ಲಕ್ಷಗಳವರೆಗೆ ಅನುದಾನವನ್ನು ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ ವೈದ್ಯರ ಶಿಫಾರಸ್ಸಿನ ಮೇಲೆ ಮರುಪಾವತಿಸಲಾಗುವುದು. ಈ ಸೌಲಭ್ಯವನ್ನು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆ, ಸುಸಜ್ಜಿತ ಖಾಸಗಿ ಆಸ್ಪತ್ರೆಗಳ ಅಥವಾ ಸಂಜಯಗಾಂಧಿ ಆಸ್ಪತ್ರೆ, ಬೆಂಗಳೂರು ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯು ದಿನಾಂಕ: 01–04–2000ದಿಂದ ಜಾರಿಯಲ್ಲಿರುತ್ತದೆ.

Karnataka State Government Disabled Employees Association
Renukaradhya S
Indresh R

**ಅರ್ಹತೆ/ಷರತ್ತು/ನಿಯಮಗಳು:**

- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.25000/– ಹಾಗೂ ನಗರಪ್ರದೇಶದವರಾಗಿದ್ದಲ್ಲಿ ರೂ.50000/– ಇರಬೇಕು.
- ಶಸ್ತ್ರಚಿಕಿತ್ಸೆಯಿಂದ ಅಂಗವಿಕಲತೆ ನಿವಾರಣೆಯಾಗುವ ಇಲ್ಲವೆ ಅಂಗವಿಕಲತೆಯ ಪ್ರಮಾಣ ಕಡಿಮೆಯಾಗುವ ಕುರಿತಂತೆ ತಜ್ಞ ವೈದ್ಯಾಧಿಕಾರಿಗಳಿಂದ ಪಡೆದ ದೃಢೀಕರಣ ಒದಗಿಸಬೇಕು.
- ಮರುಪಾವತಿ ಪಡೆಯಲು, ಚಿಕಿತ್ಸೆಗೆ ಸಂಬಂಧಪಟ್ಟ ಔಷಧಿ ಖರೀದಿ, ಬೆಡ್ ಖರ್ಚು, ವೈದ್ಯಕೀಯ ಪರೀಕ್ಷೆಗಳ ವೆಚ್ಚ ಮತ್ತು ಶಸ್ತ್ರಚಿಕಿತ್ಸೆಗೆ ತಗಲುವ ವೆಚ್ಚದ ರಸೀತಿ ಒದಗಿಸಬೇಕು

### ಅನುದಾನ ವಿಧಾನ:

ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ, ಸಂಬಂಧಪಟ್ಟ ಆಸ್ಪತ್ರೆಯ ಮುಖ್ಯಸ್ಥರು ಶಸ್ತ್ರಚಿಕಿತ್ಸೆ ಕೈಗೊಂಡ ನಂತರ ತಗಲಿದ ವೆಚ್ಚ ದೃಢೀಕರಿಸಿ, ಮೂಲ ರಸೀದಿಯೊಂದಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನಿಗದಿತ ನಮೂನೆಯಲ್ಲಿ ಕೋರಿಕೆ ಸಲ್ಲಿಸಿದಲ್ಲಿ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಸದರಿ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಹಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾಮಟ್ಟದ ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಚಿಕಿತ್ಸೆ ನಡೆಸಿದ ಆಸ್ಪತ್ರೆಗೆ ನೇರವಾಗಿ ಸಂದಾಯ ಮಾಡಲಾಗುತ್ತದೆ.

# 7. ಸಾಧನೆ ಮತ್ತು ಪ್ರತಿಭೆ

(ಸರ್ಕಾರಿ ಆದೇಶ ಸಂಖ್ಯೆ:ಮಮಅ-282, ಪಿಹೆಚ್‌ಪಿ-96(ಭಾಗ-2) ದಿ:18/09/1996 )

## ಸಾಧನೆ

**ಪೀಠಿಕೆ :**

- ಅಂಗವಿಕಲರು ಇತರೆ ಸಾಮಾನ್ಯ ಜನರಂತೆ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಮಾಜದ ಮುಖ್ಯವಾಹಿನಿಯಲ್ಲಿ ಸೇರುವಂತೆ ಅವಕಾಶ ಕಲ್ಪಿಸಲು ಈ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿದ ಕ್ರೀಡಾ ಪಟುಗಳಿಗೆ ಗರಿಷ್ಠ ರೂ.30,000/- ಗಳವರೆಗೆ ಧನ ಸಹಾಯ ನೀಡಲಾಗುವುದು.

**ಉದ್ದೇಶ:**

ವಿವಿಧ ಬಗೆಯ ಅಂಗವಿಕಲತೆಯಿರುವ ಕ್ರೀಡಾ ಪಟುಗಳಿಗೆ ಅವರ ಕ್ರೀಡಾ ಚಾತುರ್ಯವನ್ನು ಪ್ರದರ್ಶಿಸಲು ಅವಕಾಶ ನೀಡುವುದು ಹಾಗೂ ಅವರಿಗೆ ಹೆಚ್ಚಿನ ಪ್ರಗತಿ ಸಾಧಿಸಲು ಪ್ರೋತ್ಸಾಹ ನೀಡುವುದು.

Karnataka State Government Disabled Employees Association
Renukaradhya S
Indresh R

**ಷರತ್ತುಗಳು:**

- ಕ್ರೀಡೆಯಲ್ಲಿ ಭಾಗವಹಿಸಿದ ನಂತರ, ಭಾಗವಹಿಸಲು ಆಹ್ವಾನಿಸಿರುವ ಮಾಹಿತಿ ಹಾಗೂ ಪ್ರಯಾಣದ ವೆಚ್ಚದ ಮೂಲ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

- ಪ್ರಸ್ತಾವನೆ ಪರಿಶೀಲಿಸಿದ ನಂತರ ಸಹಾಯಧನವನ್ನು ಮಂಜೂರು ಮಾಡಲಾಗುವುದು.

ವಿಕಲಚೇತನರು ವಿವಿಧ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿರುವುದು.









Karnataka State Government Disabled Employees Association
Renukaradhya S
Indresh R

# ಪ್ರತಿಭೆ:

**ಸರ್ಕಾರಿ ಆದೇಶ ಸಂಖ್ಯೆ:ಮಮಅ-282, ಪಿಹೆಚ್‌ಪಿ-96(ಭಾಗ-1) ದಿ:18/09/1996 ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಮಮಅ-485, ಪಿಹೆಚ್‌ಪಿ-2013,ಬೆಂಗಳೂರು ದಿ:7/6/2014**

ಅಂಗವಿಕಲರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು, ನೋಂದಾಯಿತ ಸಾಂಸ್ಕೃತಿಕ ಸ್ವಯಂ ಸೇವಾ ಸಂಸ್ಥೆಗಳು ಅಂಗವಿಕಲ ಕಲಾವಿದರನ್ನು ಒಳಗೊಂಡು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 'ಪ್ರತಿಭೆ' ಯೋಜನೆಯಡಿ ದಿನಾಂಕ:18//09/1996ರ ಆದೇಶದನ್ವಯ ಗರಿಷ್ಠ ಮೊತ್ತ ರೂ.10,000/- ಸಹಾಯಧನವನ್ನು ನೀಡಲಾಗುತ್ತಿದ್ದು, ದಿನಾಂಕ:7/6/2014 ರ ಆದೇಶದಲ್ಲಿ ವಿಕಲಚೇತನರು ವೈಯಕ್ತಿಕವಾಗಿ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಲಾ ರೂ.2000/- ಸಹಾಯಧನ ನೀಡಲು ಸರ್ಕಾರವು ಮಂಜೂರಾತಿ ನೀಡಿದೆ.

## ಉದ್ದೇಶ:

ವಿವಿಧ ಬಗೆಯ ಅಂಗವಿಕಲತೆ ಹೊಂದಿದ್ದರೂ ಕೂಡ ಅನೇಕ ವಿಕಲಚೇತನ ವ್ಯಕ್ತಿಗಳು ಉತ್ತಮ ಮಟ್ಟದ ಕಲಾವಿದರಾಗಿದ್ದಾರೆ. ಈ ಕಲಾವಿದರಿಗೆ ತಮ್ಮ ಕಲೆಯ ಪ್ರದರ್ಶನಕ್ಕೆ ಸೂಕ್ತ ಅವಕಾಶ ಕಲ್ಪಿಸಿಕೊಡುವುದು ಹಾಗೂ ಆ ಮೂಲಕ ಅವರ ಕಲೆಗೆ ಪ್ರೋತ್ಸಾಹ ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

Karnataka State Government Disabled Employees Association
Renukaradhya S
Indresh R

## ಅರ್ಹತೆ/ಷರತ್ತು/ನಿಯಮಗಳು:

- ಜಿಲ್ಲೆಯ ಕಲಾವಿದರನ್ನು ಆಯಾ ಜಿಲ್ಲೆಯಲ್ಲಿ ಸ್ಥಳೀಯ ಕಲಾವಿದರೆಂದು ಪರಿಗಣಿಸಲಾಗುವುದು.
- ಪ್ರಾಯೋಜಿತ ಕಾರ್ಯಕ್ರಮ ನೀಡುವ ಕಲಾವಿದರು ಅಲ್ಲವೇ ಪ್ರಾಯೋಜಿತ ಕಾರ್ಯಕ್ರಮಗಳನ್ನು ಪಡೆಯಲು ಉದ್ದೇಶಿಸಿರುವ ನೊಂದಾಯಿತ ಸಂಸ್ಥೆ ಕಲಾವಿದರು ಹಾಗೂ ಕಾರ್ಯಕ್ರಮದ ಕುರಿತು ಎಲ್ಲಾ ವಿವರಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಕನಿಷ್ಠ 1 ತಿಂಗಳ ಮೊದಲು ಅರ್ಜಿಯನ್ನು ಸಲ್ಲಿಸತಕ್ಕದ್ದು.
- ಕಾರ್ಯಕ್ರಮ ನಡೆದಿರುವ ಬಗ್ಗೆ ಸೂಕ್ತ ವಿವರಗಳನ್ನು ಹಾಗೂ ಅಗತ್ಯವಿರುವ ದಾಖಲೆಗಳನ್ನು ಪಡೆದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಹಾಯಧನವನ್ನು ಮಂಜೂರು ಮಾಡುವರು.

## ವಿಕಲಚೇತನ ವಿದ್ಯಾರ್ಥಿಗಳು / ವ್ಯಕ್ತಿಗಳು ತಮ್ಮಲ್ಲಿಯ ಪ್ರತಿಭೆಯನ್ನು ಪ್ರದರ್ಶಿಸುತ್ತಿರುವುದು





Karnataka State Government Disabled Employees Association
Renukaradhya S
Indresh R





# 8. ಬುದ್ಧಿ ಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರಿಗೆ ವಿಮಾ ಯೋಜನೆ

**(ಸರ್ಕಾರದ ಆದೇಶ ಸಂಖ್ಯೆ: ಮಮಅ 291 ಪಿಹೆಚ್‌ಪಿ 95 ಬೆಂಗಳೂರು, ದಿನಾಂಕ:06–3–97 ಮತ್ತು ಮಮಇ 156 ಪಿಹೆಚ್‌ಪಿ 2006(4) ದಿನಾಂಕ:28–08–2006)**

## ಉದ್ದೇಶ:

ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ಹೆಸರಲ್ಲಿ, ಭಾರತೀಯ ಜೀವ ವಿಮಾ ನಿಗಮಕ್ಕೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದಿಂದ ವಾರ್ಷಿಕ ವಿಮಾ ಕಂತನ್ನು ಪಾವತಿ ಮಾಡಿ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತದೆ.

ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ನಿಧನದ ನಂತರ ಬುದ್ಧಿಮಾಂದ್ಯ ವ್ಯಕ್ತಿಗಳ ಪೋಷಣೆಗಾಗಿ ಜೀವವಿಮಾ ನಿಗಮದಿಂದ ನಾಮನಿರ್ದೇಶಿತರಿಗೆ ತಲಾ 20,000/– ರಂತೆ ವಿಮಾ ಹಣ ದೊರೆಯುತ್ತದೆ.

ದಿನಾಂಕ:28–08–2006ರ ಸರ್ಕಾರದ ಆದೇಶದಲ್ಲಿ ಒಂದೇ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳು ಬುದ್ಧಿಮಾಂದ್ಯರಾಗಿದ್ದಲ್ಲಿ ಎರಡು ಬುದ್ಧಿಮಾಂದ್ಯ ಮಕ್ಕಳಿಗೆ ವಿಮಾ ಸೌಲಭ್ಯ ಪಡೆದಿದ್ದಲ್ಲಿ ಅವರ ಪೋಷಕರು (ವಿಮಾದಾರರು) ಮರಣ ಹೊಂದಿದ ಪಕ್ಷದಲ್ಲಿ ನಾಮ ನಿರ್ದೇಶನದವರಿಗೆ ಇಬ್ಬರ ಮಕ್ಕಳ ಪರವಾಗಿ ತಲಾ ರೂ20,000/– ರಂತೆ ಒಟ್ಟು ರೂ 40,000/–ವಿಮಾ ಹಣವನ್ನು ಒದಗಿಸಲಾಗುವುದು.

Karnataka State Government Disabled Employees Association
Renukaradhya S
Indresh R

## ಅರ್ಹತೆ/ಷರತ್ತು/ನಿಯಮಗಳು:

1. ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರು 18 ರಿಂದ 60 ವರ್ಷವರೆಗಿನ ವಯೋಮಿತಿಯವರಾಗಿರಬೇಕು.
2. ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ರೂ 11,500/– ಮತ್ತು ನಗರ ಪ್ರದೇಶಗಳಲ್ಲಿ ರೂ 24,000/–ಗಳನ್ನು ಮೀರಿರಬಾರದು.
3. ಬುದ್ಧಿಮಾಂದ್ಯತೆ ಬಗ್ಗೆ ತಜ್ಞವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದಿರಬೇಕು.
4. ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರಿಗೆ ಗರಿಷ್ಠ ರೂ.20,000ಗಳಿಗೆ ವಿಮೆ ಮಾಡಿಸಲಾಗುವುದು.

5. ವಿಮಾ ಮೊತ್ತವು ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ನಿಧನದ ನಂತರ ಬುದ್ಧಿಮಾಂದ್ಯ ವ್ಯಕ್ತಿಗಳಿಗೆ ಅವರ ಮತ್ತೋರ್ವ ನಾಮನಿರ್ದೇಶಿತ ಪೋಷಕರ ಮುಖಾಂತರ ಜೀವ ವಿಮಾ ನಿಗಮವು ಹಣವನ್ನು ಪಾವತಿ ಮಾಡುತ್ತದೆ.

## ಅನುದಾನದ ವಿಧಾನ:

ವಿಮೆಗೆ ಒಳಪಡುವ ಅಭ್ಯರ್ಥಿಯ ವಯಸ್ಸು, ಪೋಷಕರ ವಯಸ್ಸು, ಕುಟುಂಬದ ಆದಾಯ ಪ್ರಮಾಣ ಪತ್ರ, ಬುದ್ಧಿಮಾಂದ್ಯತೆಯ ಸ್ವಭಾವ, ನಾಮ ನಿರ್ದೇಶನ ಹಾಗೂ ಸಂಬಂಧಪಟ್ಟ ಪ್ರಮಾಣ ಪತ್ರಗಳೊಂದಿಗೆ ಅರ್ಜಿನಮೂನೆಯನ್ನು ದ್ವಿಪ್ರತಿಗಳಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ನಿಧನದ ನಂತರ ಬುದ್ಧಿಮಾಂದ್ಯ ವ್ಯಕ್ತಿಗಳ ನಾಮ ನಿರ್ದೇಶನ ಮಾಡಿದ ಪೋಷಕರ ಹೆಸರಿನಲ್ಲಿ ತೆರೆಯುವ ಬ್ಯಾಂಕ್ ಖಾತೆಗೆ ವಿಮಾ ಮೊತ್ತವನ್ನು ಭಾರತೀಯ ಜೀವವಿಮಾ ನಿಗಮವು ಜಮಾ ಮಾಡುತ್ತದೆ.

Karnataka State Government Disabled Employees Association
Renukaradhya S
Indresh R

# 9. ಉದ್ಯೋಗ ಕೋಶ

(ಸರ್ಕಾರಿ ಆದೇಶ ಸಂಖ್ಯೆ:ಮಮಇ:231:ಪಿಹೆಚ್‌ಪಿ:2013 ಬೆಂಗಳೂರು ದಿ:20.01.2014)

## ಪೀಠಿಕೆ:

- ವಿವಿಧ ಬಗೆಯ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಸೂಕ್ತ ತರಬೇತಿಯನ್ನು ನೀಡಿ ಉದ್ಯೋಗವನ್ನು ಒದಗಿಸುವ ಸಲುವಾಗಿ ಹಾಗೂ ವಿಕಲಚೇತನರಿಗೆ ಮೀಸಲಿಟ್ಟಿರುವ ಹುದ್ದೆಗಳ ನೇಮಕಾತಿ ಹಾಗೂ ಸಾರ್ವಜನಿಕ ವಲಯಗಳಲ್ಲಿ ವಿಕಲಚೇತನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಉದ್ಯೋಗ ಕೋಶವನ್ನು ಸರ್ಕಾರದ ಆದೇಶದಂತೆ ಮೆ॥ ಎನೇಬಲ್ ಇಂಡಿಯಾ, ಕೋರಮಂಗಲ, ಬೆಂಗಳೂರು ಸಂಸ್ಥೆಯ ಮುಖಾಂತರ ಬೆಂಗಳೂರಿನಲ್ಲಿ 2013-14ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

## ಅರ್ಹತೆಗಳು/ಷರತ್ತುಗಳು:

- ವಿಕಲಚೇತನರು 18-45 ವಯೋಮಾನದವರಾಗಿರಬೇಕು.
- ಅಭ್ಯರ್ಥಿಯು ಕರ್ನಾಟಕ ರಾಜ್ಯದವರಾಗಿರಬೇಕು.
- ಅಂಗವಿಕಲತೆಯ ಕುರಿತಂತೆ ವೈದ್ಯಕೀಯ ಮತ್ತು ವಿದ್ಯಾರ್ಹತೆ ಪ್ರಮಾಣ ಪತ್ರ ಸಲ್ಲಿಸಬೇಕು.

Karnataka State Government Disabled Employees Association
Renukaradhya S
Indresh R

## ಸೌಲಭ್ಯಗಳು

- ಆಸಕ್ತ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಶಿಬಿರಗಳಲ್ಲಿ ಸಂದರ್ಶನದ ಮೂಲಕ ಆಯ್ಕೆ ಮಾಡಿ, ಅವಶ್ಯಕತೆಗನುಗುಣವಾಗಿ ತರಬೇತಿಯನ್ನು ನೀಡಲಾಗುವುದು.
- ವಿಭಾಗ ಮಟ್ಟದಲ್ಲಿ ಪ್ರತಿ ತ್ರೈಮಾಸಿಕಕ್ಕೊಮ್ಮೆ ಉದ್ಯೋಗ ಮೇಳ ಆಯೋಜಿಸಲಾಗುವುದು. ಈ ಮೇಳದಲ್ಲಿ ಅರೆಸರ್ಕಾರಿ/ಖಾಸಗಿ/ಬಹುರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸಿ ಸದರಿ ಕಂಪನಿಗಳ ಮೂಲಕ ಉದ್ಯೋಗದಾತರಿಗೆ ಉದ್ಯೋಗ ಒದಗಿಸಲು ಅವಕಾಶ ಒದಗಿಸಲಾಗುವುದು.
- ಸ್ವಯಂ ಉದ್ಯೋಗ ಮಾಡಲಿಚ್ಛಿಸುವ ವಿಕಲಚೇತನರಿಗೆ ಉಚಿತವಾಗಿ ಅಗತ್ಯ ವೃತ್ತಿ ತರಬೇತಿ ಮತ್ತು ದೈನಂದಿನ ಕೌಶಲ್ಯಗಳನ್ನು ಕಲ್ಪಿಸುವುದು (Vocational Training and Soft Skills).
- 2013-14ನೇ ಸಾಲಿನಲ್ಲಿ 600 ವಿಕಲ ಚೇತನರಿಗೆ ತರಬೇತಿ ನೀಡಿದ್ದು, ತರಬೇತಿ ಹೊಂದಿರುವವರಲ್ಲಿ 248 ಜನರಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

# 10. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯ ವ್ಯಕ್ತಿಗಳು ವಿವಾಹವಾದಲ್ಲಿ ಪ್ರೋತ್ಸಾಹಧನ

**(ಸರ್ಕಾರಿ ಆದೇಶ ಸಂಖ್ಯೆ:ಮಮಇ:261:ಪಿಹೆಚ್‌ಪಿ:2013 ಬೆಂಗಳೂರು ದಿ:28.08.2013)**

## ಪೀಠಿಕೆ:

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ಜಂಟಿಯಾಗಿ ರೂ.50,000/– ಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 5 ವರ್ಷಗಳ ಅವಧಿಗೆ ನಿಶ್ಚಿತ ಠೇವಣಿ ಇಡಲಾಗುವುದು. ಅದರಿಂದ ಬರುವ ಬಡ್ಡಿ ಹಣವನ್ನು ಜೀವನ ನಿರ್ವಹಣೆಗೆ ಉಪಯೋಗಿಸುವುದು. 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರಿಸಬಹುದು. ಈ ಯೋಜನೆಯು ದಿ:29–08–2013ರಿಂದ ಜಾರಿಗೆ ಬಂದಿರುತ್ತದೆ.

## ಯೋಜನೆಯ ಉದ್ದೇಶ:-

- ಸಾಮಾನ್ಯ ವ್ಯಕ್ತಿಗಳು ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾಗಲು ಮುಂದೆ ಬಂದು ವಿಕಲಚೇತನರು ವೈವಾಹಿಕ ಜೀವನ ಸುಗುಮವಾಗಿ ನಡೆಸಲು ಅನುಕೂಲವಾಗುತ್ತದೆ.
- ಸಾಮಾನ್ಯ ವ್ಯಕ್ತಿಗಳು ವಿಕಲಚೇತನರನ್ನು ವಿವಾಹವಾಗಲು ನಿರ್ಲಕ್ಷತೆ ತೋರುತ್ತಿರುವುದನ್ನು ತಡೆಯಬಹುದಾಗಿರುತ್ತದೆ.
- ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯ ವ್ಯಕ್ತಿಗಳು ಮದುವೆಯಾದಲ್ಲಿ ವಿಕಲಚೇತನರು ಸಹ ಸಾಮಾನ್ಯರಂತೆ ವೈವಾಹಿಕ ಜೀವನ ಸಾಗಿಸಲು ಸಾಧ್ಯವಾಗುತ್ತದೆ.

## ಷರತ್ತುಗಳು:-

- ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ.
- ವಿವಾಹವಾಗುವ ಯುವತಿಯರ ವಯಸ್ಸು 18 ಹಾಗೂ ಯುವಕರ ವಯಸ್ಸು 21 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
- ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿಕಲಚೇತನ ವ್ಯಕ್ತಿಗಳು/ಸಾಮಾನ್ಯ ವ್ಯಕ್ತಿಗಳು 2ನೇ ಮದುವೆ ಮಾಡಿಕೊಂಡಲ್ಲಿ ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.
- ನೀಡಲಾಗುವ ಧನಸಹಾಯವನ್ನು ಐದು ವರ್ಷಗಳ ಅವಧಿಗೆ ಬ್ಯಾಂಕಿನಲ್ಲಿ ಠೇವಣಿ ರೂಪದಲ್ಲಿ ಇಡತಕ್ಕದ್ದು. ಹಾಗೂ ಈ ಠೇವಣಿಯಿಂದ ಬಂದ ಬಡ್ಡಿ ಹಣವನ್ನು ಯುವಕ/ಯುವತಿಯರು ಅವರ ಜೀವನ ನಿರ್ವಹಣೆಗೆ ಉಪಯೋಗಿಸತಕ್ಕದ್ದು. 5 ವರ್ಷದ ನಂತರ ಪೂರ್ಣ ಹಣ ಪಡೆಯಬಹುದು ಅಥವಾ ಮುಂದುವರೆಸುವುದು ಫಲಾನುಭವಿಯ ಇಚ್ಚೆಗೆ ಒಳಪಟ್ಟಿದೆ.
- ವಿಕಲಚೇತನ ಯುವಕ/ಯುವತಿಯರ ವಿಕಲಚೇತನತೆಯ ಪ್ರಮಾಣ ಶೇ.40%ಕ್ಕಿಂತ ಹೆಚ್ಚಾಗಿರತಕ್ಕದ್ದು.
- ವಿವಾಹವಾಗುವ ಯುವಕ/ಯುವತಿಯರು ಕಡ್ಡಾಯವಾಗಿ ಸಂಬಂಧಪಟ್ಟವರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರ ನೀಡತಕ್ಕದ್ದು.
- ವಿವಾಹವನ್ನು ವಿವಾಹ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸತಕ್ಕದ್ದು.
- ಪ್ರೋತ್ಸಾಹ ಧನವನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿರುತ್ತದೆ.

Karnataka State Government Disabled Employees Association
Renukaradhya S
Indresh R

# 11. ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ

**(ಸರ್ಕಾರಿ ಆದೇಶ ಸಂಖ್ಯೆ:ಮಮಇ:271:ಪಿಹೆಚ್‌ಪಿ:2013 ಬೆಂಗಳೂರು ದಿ:03.09.2013)**

**ಪೀಠಿಕೆ:**

ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿಕಲಚೇತನ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯು ದಿನಾಂಕ:03-09-2013ರಿಂದ ಜಾರಿಗೆ ಬಂದಿರುತ್ತದೆ. ಭರ್ತಿಮಾಡಿದ ಅರ್ಜಿಯನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಆಯಾ ವರ್ಷದೊಳಗೆ ಸಲ್ಲಿಸತಕ್ಕದ್ದು.

**ಷರತ್ತುಗಳು.:**

- ವಿಕಲಚೇತನರು ಭಾರತದ ಪ್ರಜೆಯಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 5 ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರತಕ್ಕದ್ದು.
- ಸರ್ಕಾರಿ, ಸ್ಥಳೀಯ ಸಂಸ್ಥೆ, ಅನುದಾನಿತ ಸಂಸ್ಥೆ, ಸರ್ಕಾರದ ಮಾನ್ಯತೆ ಪಡೆದ ಅನುದಾನ ಸಹಿತ ಮತ್ತು ಅನುದಾನ ರಹಿತ ಖಾಸಗಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ ನಂತರದ ವಿಕಲಚೇತನ ವಿದ್ಯಾರ್ಥಿಗಳು ಶುಲ್ಕ ಮರು ಪಾವತಿ ಪಡೆಯಲು ಅರ್ಹರಿರುತ್ತಾರೆ.
- ಯಾವ ಸಂಸ್ಥೆಗಳು ವಿಕಲಚೇತನ ವಿದ್ಯಾರ್ಥಿಗಳಿಗೆ ಶುಲ್ಕವನ್ನು ವಿಧಿಸುವುದಿಲ್ಲವೋ ಅಂತಹ ಸಂಸ್ಥೆಯ ವಿದ್ಯಾರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಿರುವುದಿಲ್ಲ.
- ವಿಕಲಚೇತನರ ವಿದ್ಯಾರ್ಥಿಗಳು ಹಿಂದಿನ ವರ್ಷದ ಪಬ್ಲಿಕ್ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗದಿದ್ದಲ್ಲಿ ಮುಂದಿನ ವರ್ಷದಲ್ಲಿ ಶುಲ್ಕ ಮರುಪಾವತಿಗೆ ಅರ್ಹರಾಗುವುದಿಲ್ಲ. ಆದರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹಿಂದಿನ ಬಾಕಿ ವಿಷಯಗಳು ಸೇರಿದಂತೆ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ ನಂತರದ ವರ್ಷದಲ್ಲಿ ಶುಲ್ಕ ಮರುಪಾವತಿಗೆ, ಆ ಕೋರ್ಸ್‌ಗಳಲ್ಲಿ ಕ್ಯಾರಿ ಓವರ್ ಪದ್ಧತಿ ಜಾರಿಯಿದ್ದು ಮುಂದಿನ ತರಗತಿಗೆ/ವರ್ಷಕ್ಕೆ ಪ್ರವೇಶ ಅವಕಾಶವಿದ್ದಲ್ಲಿ ಅಂತಹವರು ಶುಲ್ಕ ಮರುಪಾವತಿಗೆ ಅರ್ಹರಿರುತ್ತಾರೆ.
- ಪರೀಕ್ಷಾ ಶುಲ್ಕವನ್ನು ವರ್ಷಕ್ಕೆ ಒಂದು ಸಲ ಮಾತ್ರ ಮರುಪಾವತಿಸಲಾಗುವುದು. ಅನುತ್ತೀರ್ಣರಾದ ಅಭ್ಯರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಾಗುವುದಿಲ್ಲ.
- ಬೇರೆ ಇಲಾಖೆ ಹಾಗೂ ಇತರೆ ಮೂಲಗಳಿಂದ ಶುಲ್ಕವನ್ನು ಪಡೆದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಶುಲ್ಕ ಮರುಪಾವತಿಗೆ ಅವಕಾಶವಿರುವುದಿಲ್ಲ.
- ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ.
- ವಿದ್ಯಾರ್ಥಿಯು ವ್ಯಾಸಂಗ ಮಾಡುವ ಅವಧಿಯಲ್ಲಿ 2ನೇ ವರ್ಷದಿಂದ ನೀಡುವಾಗ ಹಿಂದಿನ ವರ್ಷದಲ್ಲಿ ಕನಿಷ್ಠ ಶೇ.80ರಷ್ಟು ಹಾಜರಾತಿ ಹೊಂದಿರಬೇಕು.
- ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಸೂಚಿಸಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಯೋಜನೆಗೆ ಅರ್ಹರಿರುತ್ತಾರೆ.

Karnataka State Government Disabled Employees Association
Renukaradhya S
Indresh R S

## 12. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಶಿಶು ಪಾಲನಾ ಭತ್ಯೆ

**(ಸರ್ಕಾರಿ ಆದೇಶ ಸಂಖ್ಯೆ:ಮಮಇ:265 :ಪಿಹೆಚ್‌ಪಿ:2013 ಬೆಂಗಳೂರು ದಿ: 28.08. 2013)**

### ಉದ್ದೇಶ:-

ಬಡ ಕುಟುಂಬದ ಅಂಧ ಮೆಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರು ಹಾಗೂ ಅವರಿಗೆ ಜನಿಸುವ ಕನಿಷ್ಠ 2 ಮಕ್ಕಳಿಗೆ ಆರೈಕೆ ಮಾಡಲು ದಾದಿ/ಶೂಶ್ರುಷಕರ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ಗಳಂತೆ 2 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುವುದು.

### ಅರ್ಹತೆ/ಷರತ್ತುಗಳು :-

- ವಿಕಲಚೇತನ ಅಂಧ ಮಹಿಳೆಯರು ಭಾರತದ ಪ್ರಜೆಯಾಗಿರಬೇಕು. ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಕನಿಷ್ಠ 6 ವರ್ಷಗಳು ಕರ್ನಾಟಕದಲ್ಲಿ ವಾಸವಾಗಿರಬೇಕು.
- ಅಂಧ ಮಹಿಳೆಯ ವಯಸ್ಸು ಕನಿಷ್ಠ 18 ವರ್ಷಕ್ಕಿಂತ ಹೆಚ್ಚಾಗಿರಬೇಕು.
- ಕಂದಾಯ ಇಲಾಖೆಯಿಂದ ಪಡೆಯಲಾದ ಆದಾಯ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅವರುಗಳ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳ ಒಳಗಿರಬೇಕು.
- ಶಿಶು ಪಾಲನಾ ಭತ್ಯೆಯು 2 ಹೆರಿಗೆಗೆ ಮಾತ್ರ ಸೀಮಿತವಾಗಿರುತ್ತದೆ.
- ಸಹಾಯಕ್ಕಾಗಿ ಬರುವ ವ್ಯಕ್ತಿಯಿಂದ ಶಿಶು ಲಾಲನೆ, ಪಾಲನೆ, ಆರೋಗ್ಯ ಹಾಗೂ ಪೌಷ್ಠಿಕ ಆಹಾರ ಒದಗಿಸುವ ಕುರಿತು ಮುಚ್ಚಳಿಕೆ ಪಡೆಯತಕ್ಕದ್ದು.
- ಶಿಶು ಪಾಲನಾ ಭತ್ಯೆಯನ್ನು ಮಗುವಿನ ಆರೋಗ್ಯ, ಪೌಷ್ಠಿಕ ಆಹಾರ ಮತ್ತು ಪಾಲನೆಗೆ ಮಾತ್ರ ಉಪಯೋಗಿಸಲಾಗುವುದೆಂದು ದೃಢೀಕರಿಸತಕ್ಕದ್ದು.
- ಶಿಶು ಪಾಲನಾ ಭತ್ಯೆಯನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿರುತ್ತದೆ.

Karnataka State Government Disabled Employees Association
Renukaradhya S
Indresh R

## 13. ವಿಕಲಚೇತನರಿಗೆ ಗುರುತಿನ ಚೀಟಿ ವಿತರಣೆ

**(ಸರ್ಕಾರಿ ಆದೇಶದ ಸಂ:ಮಮಅ:65:ಪಿಹೆಚ್‌ಪಿ:2010 ದಿ:21.09.2011)**

### ಪೀಠಿಕೆ:-

ವಿಕಲಚೇತನರ ಬಾಳನ್ನು ಹಸನುಗೊಳಿಸಿ ಅವರಿಗೆ ನೆಮ್ಮದಿ ನೀಡುವ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳಲು ಶೇ40 ಹಾಗೂ 40 ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ವಿಕಲಚೇತನರಿಗೆ ಗುರುತಿನ ಚೀಟಿಗಳನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ.

ವಿವಿಧ ಬಗೆಯ ಅಂಗವಿಕಲರಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುವ ವಿಧಾನವನ್ನು ಸರಳೀಕರಿಸಲು ವೈದ್ಯಕೀಯ ಪ್ರಾಧಿಕಾರಗಳನ್ನು ರಚಿಸಿ ಈ ಕೆಳಕಂಡಂತೆ ಆದೇಶಿಸಿ

### 1. ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ವೈದ್ಯಕೀಯ ಪ್ರಾಧಿಕಾರ:-

ದೈಹಿಕ ಅಂಗವಿಕಲರು (ಕೈ/ಕಾಲುಗಳನ್ನು ತುಂಡರಿಸಿರುವ ಅಥವಾ ಸಂಪೂರ್ಣವಾಗಿ ಲಕ್ವ/ಪಾರ್ಶ್ವವಾಯುವಿನಿಂದ ಶಾಶ್ವತವಾಗಿ ಕಾಲು/ಕೈಗಳ ಸ್ವಾಧೀನವನ್ನು ಕಳೆದುಕೊಂಡಿರುವ ಅಂಗವಿಕಲರಿಗೆ) ಹಾಗೂ ಹುಟ್ಟಿನಿಂದ ಅಂಧತ್ವ ಹೊಂದಿದವರಿಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ನಗರಸಭೆ/ಪುರಸಭೆಗಳ ಆಸ್ಪತ್ರೆಗಳಲ್ಲಿ ಅಥವಾ ಇನ್ನಿತರ ಕೇಂದ್ರ, ಸರ್ಕಾರಿ ಸ್ವಾಮ್ಯದ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ಎಂ.ಬಿ.ಬಿ.ಎಸ್. ಪದವಿ ಹೊಂದಿರುವ ಆಡಳಿತ ವೈದ್ಯಾಧಿಕಾರಿಗಳು ಅಥವಾ ಆಸ್ಪತ್ರೆಯ ಮುಖ್ಯಸ್ಥರನ್ನೊಳಗೊಂಡ ವೈದ್ಯಕೀಯ ಪ್ರಾಧಿಕಾರದ ಏಕಸದಸ್ಯರು ಅಂಗವಿಕಲತೆ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ವಿತರಿಸಲು ಕ್ರಮವಹಿಸುವುದು.

Karnataka State Government Disabled Employees Association
Renukaradhya S
Indresh R

### 2. ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ:-

ತಾಲ್ಲೂಕು ಮಟ್ಟದಲ್ಲಿ ದೈಹಿಕ ಅಂಗವಿಕಲರು, ಬುದ್ಧಿಮಾಂದ್ಯರು, ಅಂಧರು, ಕುಷ್ಠರೋಗ ನಿವಾರಿತರು, ಮಾನಸಿಕ ಅಸ್ವಸ್ಥರು ಮತ್ತು ಬಹುವಿಧ ಅಂಗವಿಕಲರಿಗೆ ಈ ಕೆಳಗಿನ ಪ್ರಾಧಿಕಾರದವರು ಪ್ರಮಾಣ ಪತ್ರವನ್ನು ನೀಡಬಹುದಾಗಿದೆ. ತಜ್ಞ ವೈದ್ಯರುಗಳು ಲಭ್ಯವಿಲ್ಲದ ಕಡೆಗಳಲ್ಲಿ ಹತ್ತಿರವಿರುವ ವೈದ್ಯಕೀಯ ಕಾಲೇಜುಗಳ ತಜ್ಞ ವೈದ್ಯರುಗಳನ್ನು ಅಥವಾ ತಜ್ಞ ಖಾಸಗಿ ವೈದ್ಯರುಗಳನ್ನು ನಿಯೋಜಿಸಿಕೊಂಡು ಅಂಗವಿಕಲತೆ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ವಿತರಿಸಲು ಕ್ರಮವಹಿಸುವುದು.

| | | |
|---|---|---|
| 1 | ಆಡಳಿತ ವೈದ್ಯಾಧಿಕಾರಿಗಳು ತಾಲ್ಲೂಕು ಆಸ್ಪತ್ರೆ. | **ಅಧ್ಯಕ್ಷರು** |
| 2 | ಸಂಬಂಧಪಟ್ಟ ತಜ್ಞವೈದ್ಯರು | **ಸದಸ್ಯರು** |
| 3 | ಫಿಜಿಶಿಯನ್ | **ಸದಸ್ಯರು.** |

### 3. ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ:-

ಶ್ರವಣದೋಷವುಳ್ಳವರು, ಬುದ್ಧಿಮಾಂದ್ಯರು, ಮಾನಸಿಕ ಅಸ್ವಸ್ಥರು, ಮಂದದೃಷ್ಟಿ ದೋಷವುಳ್ಳವರು, ಸಂಪೂರ್ಣ ದೃಷ್ಟಿ ದೋಷವುಳ್ಳವರು, ದೈಹಿಕ ಅಂಗವಿಕಲರು, ಬಹುವಿಧ ಅಂಗವಿಕಲರು

ಹಾಗೂ ಇತರೆ ಎಲ್ಲಾ ವಿಧದ ಅಂಗವಿಕಲರಿಗೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ರಾಜ್ಯ/ಕೇಂದ್ರ ಸರ್ಕಾರದ ವತಿಯಿಂದ ನಡೆಯುತ್ತಿರುವ ಎಲ್ಲಾ ಆಸ್ಪತ್ರೆಗಳು/ಸಂಸ್ಥೆಗಳು, ಇ.ಎಸ್.ಐ ಆಸ್ಪತ್ರೆಗಳು, ಸ್ಥಳೀಯ ಸಂಸ್ಥೆಗಳ ವತಿಯಿಂದ ನಡೆಯುತ್ತಿರುವ ಎಲ್ಲಾ ಆಸ್ಪತ್ರೆಗಳಲ್ಲಿ ಸಂಬಂಧಿಸಿದ ಆಸ್ಪತ್ರೆ/ಸಂಸ್ಥೆಗಳು, ನಿರ್ದೇಶಕರು/ಅಧೀಕ್ಷಕರು, ಮುಖ್ಯಸ್ಥರು/ಜಿಲ್ಲಾ ಆಸ್ಪತ್ರೆಯ ಮುಖ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಈ ಕೆಳಕಂಡ ವೈದ್ಯಕೀಯ ಪ್ರಾಧಿಕಾರವು ಅಂಗವಿಕಲತೆ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ವಿತರಿಸಲು ಕ್ರಮವಹಿಸುವುದು.

| | | |
|---|---|---|
| 1 | ಜಿಲ್ಲಾ ಶಸ್ತ್ರಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು /ಸಂಸ್ಥೆಯ ಮುಖ್ಯಸ್ಥರು | **ಅಧ್ಯಕ್ಷರು** |
| 2 | ಸಂಬಂಧಪಟ್ಟ ತಜ್ಞವೈದ್ಯರು | **ಸದಸ್ಯರು** |
| 3 | ಫಿಜಿಶಿಯನ್ | **ಸದಸ್ಯರು.** |

## 4. ಬೆಂಗಳೂರು ವೈದ್ಯಕೀಯ ಪ್ರಾಧಿಕಾರ:-

ದೈಹಿಕ ಅಂಗವಿಕಲರು, ಬುದ್ದಿಮಾಂದ್ಯರು, ಅಂಧರು, ಕುಷ್ಠರೋಗ ನಿವಾರಿತರು, ಮಾನಸಿಕ ಅಸ್ವಸ್ಥರು, ಶ್ರವಣದೋಷವುಳ್ಳವರು ಮತ್ತು ಬಹುವಿಧ ಅಂಗವಿಕಲರಿಗೆ ಬೆಂಗಳೂರಿನ ಮುಖ್ಯ ಸಂಸ್ಥೆ/ಆಸ್ಪತ್ರೆಗಳಾದ 1) ವಿಕ್ಟೋರಿಯಾ 2)ಕೆ.ಸಿ.ಜನರಲ್ ಆಸ್ಪತ್ರೆ, ಮಲ್ಲೇಶ್ವರಂ 3) ಸಾರ್ವಜನಿಕ ಆಸ್ಪತ್ರೆ ಜಯನಗರ, 4) ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಶಿವಾಜಿನಗರ 5) ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಬೈರಸಂದ್ರ, ಬೆಂಗಳೂರು 6) ಸರ್ಕಾರಿ ಸಾರ್ವಜನಿಕ ಟಿ.ಬಿ.ಆಸ್ಪತ್ರೆ, ಇಂದಿರಾನಗರ, ಬೆಂಗಳೂರು(ಬುದ್ದಿಮಾಂದ್ಯರು ಮತ್ತು ಮಾನಸಿಕ ಅಸ್ವಸ್ಥರಿಗಾಗಿ ಮಾತ್ರ) 7) ಇ.ಎಸ್.ಐ ಆಸ್ಪತ್ರೆ, ರಾಜಾಜಿನಗರ/ಇಂದಿರಾನಗರ 8)ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳು 9) ರಾಷ್ಟ್ರೀಯ ಮಾನಸಿಕ ಮತ್ತು ನರರೋಗಗಳ ವಿಜ್ಞಾನ ಸಂಸ್ಥೆ (ಬುದ್ದಿಮಾಂದ್ಯರು ಮತ್ತು ಮಾನಸಿಕ ಅಸ್ವಸ್ಥರಿಗಾಗಿ) ಈ ಕೆಳಗಿನ ಪ್ರಾಧಿಕಾರದವರು ಪ್ರಮಾಣ ಪತ್ರವನ್ನು ನೀಡಬಹುದಾಗಿದೆ.

Karnataka State Government Disabled Employees Association
Renukaradhya S
Indresh R

| | | |
|---|---|---|
| 1 | ಅಧೀಕ್ಷಕರು/ಸಂಸ್ಥೆಯ ಮುಖ್ಯಸ್ಥರು | **ಅಧ್ಯಕ್ಷರು** |
| 2 | ಸಂಬಂಧಪಟ್ಟ ತಜ್ಞವೈದ್ಯರು | **ಸದಸ್ಯರು** |
| 3 | ಫಿಜಿಶಿಯನ್ | **ಸದಸ್ಯರು.** |

### ಷರತ್ತುಗಳು:-

- ಶೇ.40ಕ್ಕಿಂತ ಮೇಲ್ಪಟ್ಟು ಅಂಗವಿಕಲತೆಗೆ ಹೊಂದಿರುವ ವಿಕಲಚೇತನರಿಗೆ ಮಾತ್ರ ಗುರುತಿನ ಚೀಟಿ (ವೈದ್ಯಕೀಯ ಪ್ರಮಾಣ ಪತ್ರ) ನೀಡಲಾಗುವುದು
- ವೈದ್ಯಕೀಯ ಪ್ರಾಧಿಕಾರದವರು ನೀಡಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಹೊಂದಿರುವ ಗುರುತಿನ ಚೀಟಿಯನ್ನು ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಮೊಹರಿನೊಂದಿಗೆ ಮೇಲು ಸಹಿ ಮಾಡಿರಬೇಕು.
- ಗುರುತಿನ ಚೀಟಿ ನೀಡುವಿಕೆ ಯೋಜನೆಯನ್ನು ಸಕಾಲ ಯೋಜನಾ ವ್ಯಾಪ್ತಿಗೊಳಪಡಿಸಿದ್ದು, ಅರ್ಜಿ ಸಲ್ಲಿಸಿದ 21 ದಿನಗಳೊಳಗಾಗಿ ಗುರುತಿನ ಚೀಟಿ ವಿತರಿಸಲಾಗುವುದು.

# 14 ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಣೆ

(ಸರ್ಕಾರದ ಆದೇಶ ಸಂಖ್ಯೆ:ಮಮಇ/242/ಎಸ್.ಜೆ.ಡಿ/2006 ದಿನಾಂಕ:25-07-2006)

## ಉದ್ದೇಶ:

2011ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಒಟ್ಟು 47.18ಲಕ್ಷ ಹಿರಿಯ ನಾಗರಿಕರಿದ್ದು, ಇವರನ್ನು ಸುಲಭವಾಗಿ ಗುರುತಿಸಲು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿರಿಯ ನಾಗರಿಕರಿಗಾಗಿ ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸುವ ಯೋಜನೆಗಳ ಪ್ರಯೋಜನ ಪಡೆಯಲು ಅನುವಾಗುವಂತೆ ಹಿರಿಯನಾಗರಿಕರಿಗೆ ಗುರುತಿನ ಚೀಟಿಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ 2006ನೇ ಸಾಲಿನಿಂದ ವಿತರಿಸಲಾಗುತ್ತಿದೆ.

## ಗುರುತಿನ ಚೀಟಿ ಪಡೆಯುವ ವಿಧಾನ:

ಹಿರಿಯ ನಾಗರಿಕರು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಗುರುತಿಸಲ್ಪಟ್ಟ ಸ್ವಯಂ ಸೇವಾ ಸಂಸ್ಥೆಗಳಿಗೆ ರೂ.50/-ಗಳ ಶುಲ್ಕವನ್ನು ಪಾವತಿಸಿ, ಅರ್ಜಿಯನ್ನು, ಭರ್ತಿ ಮಾಡಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ವಾಸಸ್ಥಳದ ದೃಢೀಕರಣ ಪತ್ರ ಹಾಗೂ ವಯಸ್ಸಿನ ದೃಢೀಕರಣದ ದಾಖಲೆಗಳನ್ನು ಒದಗಿಸುವುದು. ಸ್ವಯಂ ಸೇವಾ ಸಂಸ್ಥೆಗಳು ದಾಖಲೆಗಳನ್ನು ಪರಿಶೀಲಿಸಿ ಸರಿಯಿದ್ದಲ್ಲಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ನಿಗದಿತ ನಮೂನೆಯಲ್ಲಿ ತಯಾರಿಸಿ ಸಹಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸುವುದು. ಸಹಿ ಮಾಡಲ್ಪಟ್ಟ ಗುರುತಿನ ಚೀಟಿಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಂದ ಸ್ವಯಂ ಸೇವಾ ಸಂಸ್ಥೆಗಳು ಪಡೆದು ಹಿರಿಯ ನಾಗರಿಕರಿಗೆ ವಿತರಿಸಲಾಗುತ್ತದೆ. ಯೋಜನೆಯನ್ನು ಸಕಾಲ ಯೋಜನೆಯಡಿ ತರಲಾಗಿದ್ದು, 21 ದಿನಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.

Karnataka State Government Disabled Employees Association
Renukaradhya S
Indresh R

## ಗುರುತಿನ ಚೀಟಿ ಪಡೆಯುವವರಿಗೆ ಇರಬೇಕಾದ ಅರ್ಹತೆಗಳು:

60ವರ್ಷ ಹಾಗೂ ಮೇಲ್ಪಟ್ಟ ಭಾರತೀಯ ಪೌರತ್ವವನ್ನು ಹೊಂದಿದ ವಯೋವೃದ್ದರಾಗಿರಬೇಕು.

## ಗುರುತಿನ ಚೀಟಿ ವಿತರಣೆ ಮಾಡಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುಮತಿ:

ತಾಲ್ಲೂಕು/ಜಿಲ್ಲಾ/ರಾಜ್ಯ/ರಾಷ್ಟ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಹಿರಿಯ ನಾಗರಿಕರ ಗುರುತಿನ ಚೀಟಿ ವಿತರಣೆ ಮಾಡಲು ಬಯಸುವುದಾಗಿ ಆಯಾ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮೂಲಕ ಅರ್ಜಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರು ಸಂಸ್ಥೆಯು ನೀಡಿರುವ ದಾಖಲೆಗಳನ್ನು ಪರಿಶೀಲಿಸಿ ಗುರುತಿನ ಚೀಟಿ ವಿತರಣೆ ಮಾಡಲು ಸಂಸ್ಥೆಗೆ ಅನುಮತಿ ನೀಡುವರು.

# 15. ವೃದ್ಧಾಪ್ಯ ವೇತನ

## ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ

ಈ ಯೋಜನೆಯಡಿ 60 ರಿಂದ 64 ವರ್ಷದೊಳಗಿನ ಫಲಾನುಭವಿಗಳಿಗೆ ಮಾಹೆಯಾನ ರೂ.200/– (ರೂ.ಎರಡು ನೂರು ಮಾತ್ರ)ಗಳ ಪಿಂಚಣಿಯನ್ನು ನೀಡಲಾಗುತ್ತಿದೆ. 65 ರಿಂದ 79 ವರ್ಷದೊಳಗಿನ ಫಲಾನುಭವಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಒಟ್ಟು ಮಾಹೆಯಾನ ರೂ.500/–ಗಳ ಪಿಂಚಣಿಯನ್ನು ನೀಡಲಾಗುತ್ತಿದೆ.

## ಸಂಧ್ಯಾ ಸುರಕ್ಷ ಯೋಜನೆ:

ಕಂದಾಯ ಇಲಾಖೆಯಿಂದ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.97 ಎಂ.ಎಸ್.ಟಿ.:2007 ದಿನಾಂಕ : 2.7.2007 ಈ ಯೋಜನೆಯಡಿ ಸಾಮಾಜಿಕ ಭದ್ರತಾ ರೂಪದಲ್ಲಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ರೂ.500/–ಗಳ ಆರ್ಥಿಕ ಸಹಾಯಧನವನ್ನು ಮಾಸಿಕವಾಗಿ ನೀಡಲಾಗುತ್ತಿದೆ.

Karnataka State Government Disabled Employees Association
Renukaradhya S
Indresh R

## ಅರ್ಹತೆಗಳು:

1. 65 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
2. ಸ್ಥಳೀಯ ಕಂದಾಯ ಅಧಿಕಾರಿಗಳ ದೃಢೀಕರಣದಂತೆ ಮನವಿದಾರರ ಮತ್ತು ಅವರ ಪತಿ ಅಥವಾ ಪತ್ನಿಯರ ವಾರ್ಷಿಕ ಆದಾಯವು ರೂ.20,000/–ಕ್ಕಿಂತ ಹೆಚ್ಚಾಗಿರಬಾರದು.
3. ಮಕ್ಕಳ ಆದಾಯವು ತಂದೆ ತಾಯಿಯರ ವಾರ್ಷಿಕ ಆದಾಯಕ್ಕೆ ಪರಿಗಣಿಸಲ್ಪಡುವುದಿಲ್ಲ.
4. ಪತಿ ಅಥವಾ ಪತ್ನಿಯ ಜಂಟಿ ಖಾತೆಯಲ್ಲಿ ರೂ.10,000/– ಕ್ಕಿಂತ ಹೆಚ್ಚಿನ ಠೇವಣಿ ಇರಬಾರದು.
5. ಯಾವುದೇ ರೀತಿಯ ಇತರೆ ಮಾಸಾಶನ/ಪಿಂಚಣಿಯನ್ನು ಪಡೆಯುತ್ತಿರುವವರು ಈ ವೇತನಕ್ಕೆ ಅರ್ಹರಾಗಿರುವುದಿಲ್ಲ.
6. ಈ ಕೆಳಗಿನ ವಲಯಗಳಲ್ಲಿ ಇರುವ ಅಭ್ಯರ್ಥಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಬಹುದಾಗಿದೆ.

ಅತಿ ಸಣ್ಣ ರೈತರು, ಸಣ್ಣ ರೈತರು, ಕೃಷಿ ಕಾರ್ಮಿಕರು, ಮೀನುಗಾರರು, ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರು ಆದರೆ ಕಟ್ಟಡ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರೆಂದರೆ (Regulation of Employment and conditions of services) Act 1996 ಇದರ ಪ್ರಕಾರ ಅರ್ಹರಿರುವುದಿಲ್ಲ. ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಬೇಕಾಗಿದ್ದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರನ್ನು ಸಂಪರ್ಕಿಸಬಹುದು.

ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾಸುರಕ್ಷಾ ಯೋಜನೆಗಳಡಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ದಿನಾಂಕ:30–08–2013ರ ಆದೇಶದನ್ವಯ ಮಾಹೆಯಾನ ರೂ.750/–ಗಳ ವೃದ್ಧಾಪ್ಯವೇತನವನ್ನು ಪಾವತಿಸಲಾಗುತ್ತಿದೆ.

# ಸಮುದಾಯ ಆಧಾರಿತ ಯೋಜನೆಗಳು

Karnataka State Government Disabled Employees Association
Renukaradhya S
Umesh R

# 1. ಅಂಗವಿಕಲರ ಗ್ರಾಮೀಣ ಪುನರ್ವಸತಿ ಯೋಜನೆ
## (ಸರ್ಕಾರದ ಆದೇಶ ಸಂಖ್ಯೆ ಮಮಇ 237 PHP 2007 ದಿ: 16.8.2007)

**ಉದ್ದೇಶ:**

- ಈ ಯೋಜನೆಯು ರಾಜ್ಯ ಸರ್ಕಾರದ ಪ್ರಮುಖ ಯೋಜನೆಯಾಗಿದ್ದು, ವಿಕಲಚೇತನರಿಗೆ ವಿಕಲಚೇತನರ ಮೂಲಕವೇ ಅವರು ವಾಸಿಸುವ ಸ್ಥಳದಲ್ಲಿಯೇ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಆರ್ಥಿಕ ಪುನರ್ವಸತಿ ಮತ್ತು ಸಾಮಾಜಿಕ ಭದ್ರತೆ ಯೋಜನೆಗಳ ಹಾಗೂ ನಿರ್ದೇಶನಾಲಯದ ಸೌಲಭ್ಯವನ್ನು ಕಲ್ಪಿಸುವ ಪ್ರಮುಖ ಉದ್ದೇಶವನ್ನು ಹೊಂದಿರುತ್ತದೆ.

**ರೂಪುರೇಷೆ :**

- ಈ ಯೋಜನೆಯ ಅನುಷ್ಠಾನದಿಂದ ಗ್ರಾಮ ಪಂಚಾಯತಿ ಮಟ್ಟದಿಂದ ಜಿಲ್ಲಾ ಮಟ್ಟದಲ್ಲಿ ಅಂಗವಿಕಲರ ಸಮಸ್ಯೆಗಳಿಗೆ ನೇರವಾಗಿ ಸ್ಪಂಧಿಸಲು ಅವಕಾಶವಿರುತ್ತದೆ.
- ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
- ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬರಂತೆ ಎಸ್.ಎಸ್.ಎಲ್.ಸಿ ಪಾಸಾದ ಅಥವಾ ಎಸ್.ಎಸ್.ಎಲ್.ಸಿ ಯಲ್ಲಿ ಅನುತ್ತೀರ್ಣರಾದವರನ್ನು ಪುನರ್ವಸತಿ ಕಾರ್ಯಕರ್ತರನ್ನಾಗಿ ನೇಮಕ ಮಾಡಲು ಅವಕಾಶವಿದ್ದು, ಅವರಿಗೆ ಮಾಸಿಕ ರೂ.1500/–ಗಳ ಗೌರವಧನವನ್ನು ನೀಡಲಾಗುವುದು.
- ಪ್ರತಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿನ ಸ್ಥಳೀಯ ಪದವೀಧರ ಅಥವಾ ಪದವಿಯಲ್ಲಿ ಅನುತ್ತೀರ್ಣರಾದವರನ್ನು ವಿವಿದೋದ್ದೇಶ ಕಾರ್ಯಕರ್ತರನ್ನಾಗಿ ನೇಮಕ ಮಾಡಲು ಅವಕಾಶವಿದ್ದು, ಅವರಿಗೆ ಮಾಹೆಯಾನ ರೂ.4000/– ಗೌರವಧನವನ್ನು ನೀಡಲಾಗುವುದು.
- ತಾಲ್ಲೂಕು ಮಟ್ಟದಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು (ವಿ.ಆರ್.ಡಬ್ಲ್ಯೂ) ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು (ಎಂ.ಆರ್.ಡಬ್ಲ್ಯೂ) ಆಯ್ಕೆ ಮಾಡಲು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.
- ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ.

Karnataka State Government Disabled Employees Association
Renukaradhya S
Indresh R

## 2. ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ

(ಸರ್ಕಾರಿ ಆದೇಶ ಸಂಖ್ಯೆ:ಮಮಇ:109:ಪಿಹೆಚ್‌ಪಿ:2010 ದಿ:14.12.2010)

### ಪೀಠಿಕೆ:

ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳಿಗೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸಹಾಯ ಧನ ನೀಡಲು 2010-11ನೇ ಸಾಲಿನಿಂದ ಈ ಯೋಜನೆಯು ಜಾರಿಗೆ ಬಂದಿರುತ್ತದೆ. ವಸತಿಯುತ ಪ್ರತೀ ಮಗುವಿಗೆ ಮಾಹೆಯಾನ ರೂ.2500/- ರಂತೆ ಹಾಗೂ ವಸತಿ ರಹಿತ ಮಗುವಿಗೆ ಮಾಹೆಯಾನ ರೂ. 2000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನ ನೀಡಲಾಗುತ್ತಿದೆ. ಈ ಅನುದಾನ ಶಿಕ್ಷಕರ ಗೌರವಧನ, ಪಥ್ಯಾಹಾರ ಹಾಗೂ ಶಾಲಾ ನಿರ್ವಹಣಾ ವೆಚ್ಚ ಮುಂತಾದವುಗಳನ್ನು ಒಳಗೊಂಡಿರುತ್ತದೆ.

ಬುದ್ಧಿಮಾಂದ್ಯ ಹಾಗೂ ಸ್ಪಾಸ್ಟಿಕ್ ಮಕ್ಕಳ ವಸತಿಯುತ ಶಾಲೆಯಲ್ಲಿ ಪ್ರಸ್ತುತ ಇರುವ ಪ್ರತಿ ಮಗುವಿನ ಮಾಸಿಕ ದರ ರೂ.2,500/- ರಿಂದ ರೂ.5,000/-ಗಳು ಹಾಗೂ ವಸತಿರಹಿತ ಶಾಲೆಯಲ್ಲಿ ಪ್ರತಿ ಮಗುವಿಗೆ ಮಾಸಿಕ ದರ ರೂ.2,000/- ರಿಂದ ರೂ.4,000/-ಗಳಿಗೆ, ಶ್ರವಣದೋಷವುಳ್ಳ ಹಾಗೂ ದೃಷ್ಟದೋಷವುಳ್ಳ ಮಕ್ಕಳ ಶಾಲೆಗಳಲ್ಲಿ ಪ್ರತಿ ವಸತಿಯುತ ಮಗುವಿಗೆ ಪ್ರಸ್ತುತ ಮಾಸಿಕ ದರ ರೂ.2,500/-ರಿಂದ ರೂ.5,000/-ಗಳಿಗೆ ಹಾಗೂ ವಸತಿರಹಿತ ಪ್ರತಿ ಮಗುವಿಗೆ ಮಾಸಿಕ ರೂ.2,000/- ರಿಂದ ರೂ.4,000/-ಗಳಿಗೆ ಹಾಗೂ ವೃತ್ತಿ ತರಬೇತಿಯ ವಸತಿಯುತ ಕೇಂದ್ರದಲ್ಲಿ ಪ್ರತಿ ಮಗುವಿಗೆ ಪ್ರಸ್ತುತ ಮಾಸಿಕ ದರ ರೂ.2,500/- ರಿಂದ ರೂ.5,000/-ಗಳಿಗೆ, ವಸತಿರಹಿತ ಕೇಂದ್ರದ ಮಗುವಿಗೆ ಮಾಸಿಕ ರೂ.2,000/- ರಿಂದ ರೂ.4,000/-ಗಳಿಗೆ 2014-15ನೇ ಸಾಲಿನಿಂದ ಸರ್ಕಾರದ ಆದೇಶ ಸಂಖ್ಯೆ ಮಮಇ 107 ಪಿಹೆಚ್‌ಪಿ 2014 ದಿ. 25-6-2014 ಹಾಗೂ 23-07-2014ರಲ್ಲಿ ಹೆಚ್ಚಿಸಲಾಗಿದೆ.

Karnataka State Government Disabled Employees Association
Renukaradhya S
Indresh R

### ಯೋಜನೆಯ ಉದ್ದೇಶ.:-

- ಸಂವಿಧಾನದಲ್ಲಿ ಸರ್ವರಿಗೂ ಶಿಕ್ಷಣ ಹಕ್ಕು ಸೂಚಿಸಿದಂತೆ ಅಂಗವಿಕಲ ಮಕ್ಕಳಿಗೂ ಶಿಕ್ಷಣದ ಹಕ್ಕನ್ನು ನೀಡುವುದು.
- ಎಲ್ಲಾ ಅಂಗವಿಕಲ ಮಕ್ಕಳಿಗೂ ಶೈಕ್ಷಣಿಕ ಸೌಲಭ್ಯ ಒದಗಿಸುವುದು.
- ಅಂಗವಿಕಲ ಮಕ್ಕಳಲ್ಲಿ ಶೇ.100 ರಷ್ಟು ಸಾಕ್ಷರತೆಯನ್ನು ಮೂಡಿಸುವುದು.
- ಅಂಗವಿಕಲ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು.
- ಕುಷ್ಠರೋಗ ನಿವಾರಿತ ಅಂಗವಿಕಲರಿಗೆ, ಮಾನಸಿಕ ಅಸ್ವಸ್ಥರಿಗೆ ಹಾಗೂ ತರಬೇತಿ ಪಡೆಯಲು ಅರ್ಹರಿರುವಂತಹ ಬುದ್ಧಿಮಾಂದ್ಯರಿಗೆ ಔದ್ಯೋಗಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಪುನರ್ವಸತಿಗೆ ನೆರವು ನೀಡುವುದು.

**ಷರತ್ತುಗಳು:-**

- ಸ್ವಯಂ ಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೋಂದಣಿಯಾಗಿರುವ ಚಾರಿಟಬಲ್ ಟ್ರಸ್ಟ್ ಸೊಸೈಟಿ ಅಥವಾ ಸಮಾಜಸೇವೆಯಲ್ಲಿ ತೊಡಗಿರುವ ಅಧಿಕಾರೇತರ ಸಂಸ್ಥೆಯಾಗಿರಬೇಕು. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲರ ಕಾಯ್ದೆ-1995 ಸೆಕ್ಷನ್ 50, 51 ರಂತೆ ನೋಂದಣಿ ಮಾಡಿಸಿರಬೇಕು.
- ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ವತಿಯಿಂದ ಅನುಮತಿ ಪಡೆದಂತಹ ಸಂಸ್ಥೆಗಳಿಗೆ ಮಾತ್ರವೇ ಸಹಾಯಧನ ನೀಡಲಾಗುವುದು.
- ಸಂಸ್ಥೆಯು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕ ದೇಣಿಗೆ ವಂತಿಗೆ ಧನ ಮುಂತಾದವುಗಳನ್ನು ಸ್ವೀಕರಿಸತಕ್ಕದ್ದಲ್ಲ.
- ಯಾವುದೇ ಸಂಸ್ಥೆಯು ಇಲಾಖೆಯಿಂದ ಅನುಮತಿ ಪಡೆದು ಶಾಲೆ ಪ್ರಾರಂಭಿಸಿದ 3 ವರ್ಷದ ಒಳಗೆ ಸಹಾಯಧನಕ್ಕೆ ಅರ್ಹತೆ ಪಡೆಯುವುದಿಲ್ಲ.
- ಸಂಸ್ಥೆಯು ಯಾವುದೇ ಜಾತಿ ಮತ ಪರಿಗಣಿಸದೇ ಎಲ್ಲಾ ಅಂಗವಿಕಲ ಮಕ್ಕಳಿಗೂ ಮುಕ್ತವಾಗಿರಬೇಕು.
- ಸಹಾಯಧನ ಪಡೆಯುವ ಸಂಸ್ಥೆಯು ರಾಜ್ಯ ಸರ್ಕಾರದ ಅಧಿಕಾರಿಗಳ ಅಥವಾ ಇಲಾಖೆಯಿಂದ ದೃಢೀಕರಿಸಲ್ಪಟ್ಟ ಯಾವುದೇ ವ್ಯಕ್ತಿಗಳ/ಸಂಸ್ಥೆಗಳ ತಪಾಸಣೆಗೆ ಸಿದ್ಧವಾಗಿರಬೇಕು./ ಮುಕ್ತವಾಗಿರಬೇಕು.
- ಶಾಲೆಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳು ದಾಖಲಾಗಿರಬೇಕು. ಶಾಲೆಯಲ್ಲಿ 20 ಕ್ಕಿಂತ ಕಡಿಮೆ ಇದ್ದಲ್ಲಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
- ಶಾಲೆಯು 220 ದಿನಗಳಿಗೆ ಕಡಿಮೆ ಇರದಂತೆ ಕಾರ್ಯನಿರ್ವಹಿಸಬೇಕು.
- ಶಿಕ್ಷಕರ ಶೈಕ್ಷಣಿಕ ಅರ್ಹತೆಯು ಯೋಜನೆಯ ನಿಯಮಾನುಸಾರ ಇರತಕ್ಕದ್ದು.

**ಯೋಜನೆಯ ಅನುಷ್ಠಾನ:** ಆಸಕ್ತ ಸ್ವಯಂ ಸೇವಾ ಸಂಸ್ಥೆಯವರು, ಸಹಾಯಧನದ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಿದಲ್ಲಿ, ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾಮಟ್ಟದ ಸಮಿತಿಯ ಶಿಫಾರಸ್ಸಿನೊಂದಿಗೆ ಪ್ರಧಾನ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವದು. ಸಹಾಯಧನದ ಮಂಜೂರಾತಿ ಅಧಿಕಾರವು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ.

Karnataka State Government Disabled Employees Association
Renukaradhya S
Indiresh R

## ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ವಿಶೇಷ ಶಾಲೆಗಳು











Karnataka State Government Disabled Employees Association
Renukaradhya S
Indresh R

# 3. ಸರ್ಕಾರದ ವತಿಯಿಂದ ನಡೆಯುತ್ತಿರುವ ವಿಶೇಷ ಶಾಲೆಗಳು:

## ಅ) ಕಿವುಡು ಮಕ್ಕಳಿಗಾಗಿ ವಿಶೇಷ ಶಾಲೆಗಳು

ಶ್ರವಣದೋಷವುಳ್ಳ 1 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಮೈಸೂರು, ಗುಲ್ಬರ್ಗಾ, ಬಳ್ಳಾರಿ ಮತ್ತು ಬೆಳಗಾವಿ ನಗರಗಳಲ್ಲಿ ವಿಶೇಷ ಶಾಲೆಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಹಾಗೂ ಇತರೆ ಸೌಲಭ್ಯವನ್ನು ಒದಗಿಸಲಾಗುವುದು.

### ಅರ್ಹತೆಗಳು:

1. ಹುಟ್ಟಿದ ದಿನಾಂಕದ ಬಗ್ಗೆ ದಾಖಲಾತಿ.
2. ಸಾಮಾನ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ಶ್ರವಣದೋಷವುಳ್ಳವರಿಗೆ.
3. ಶ್ರವಣದೋಷ ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು,
4. ಬೇರೆ ಶಾಲೆಯಲ್ಲಿ ಓದಿದಲ್ಲಿ ವರ್ಗಾವಣೆ ಪ್ರಮಾಣ ಪತ್ರ

## ಆ)ದೃಷ್ಠಿದೋಷವುಳ್ಳ ಮಕ್ಕಳಿಗಾಗಿ ವಿಶೇಷ ಶಾಲೆಗಳು::

ದೃಷ್ಠಿದೋಷವುಳ್ಳ 1 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಗುಲ್ಬರ್ಗಾ, ಮೈಸೂರು, ದಾವಣಗೆರೆ, ಮತ್ತು ಹುಬ್ಬಳ್ಳಿ ನಗರಗಳಲ್ಲಿ ವಿಶೇಷ ಶಾಲೆಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಹಾಗೂ ಇತರೆ ಸೌಲಭ್ಯವನ್ನು ಒದಗಿಸಲಾಗುವುದು.

Karnataka State Government Disabled Employees Association
Renukaradhya S
Indresh R

### ಅರ್ಹತೆಗಳು:

1. ಹುಟ್ಟಿದ ದಿನಾಂಕದ ಬಗ್ಗೆ ದಾಖಲಾತಿ.
2. ಸಾಮಾನ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ದೃಷ್ಠಿದೋಷವುಳ್ಳವರಿಗೆ.
3. ದೃಷ್ಠಿದೋಷ ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು,
4. ಬೇರೆ ಶಾಲೆಯಲ್ಲಿ ಓದಿದಲ್ಲಿ ವರ್ಗಾವಣೆ ಪ್ರಮಾಣ ಪತ್ರ

### ಪ್ರವೇಶಾವಕಾಶಕ್ಕೆ ಸಂಪರ್ಕಿಸಿ :.

1. ಅಧೀಕ್ಷಕರು, ಕಿವುಡ ಮಕ್ಕಳ ಶಾಲೆ, ಮೈಸೂರು 0821-2494104, ಅಧೀಕ್ಷರು, ಕಿವುಡ ಮಕ್ಕಳ ಶಾಲೆ ಬೆಳಗಾವಿ 08312-472250, ಅಧೀಕ್ಷಕರು, ಕಿವುಡ ಮಕ್ಕಳ ಶಾಲೆ ಗುಲ್ಬರ್ಗಾ 08472-274963, ಅಧೀಕ್ಷಕರು, ಕಿವುಡು ಮಕ್ಕಳ ಶಾಲೆ ಬಳ್ಳಾರಿ 0839-241530
2. ಅಧೀಕ್ಷಕರು, ಅಂಧ ಮಕ್ಕಳ ಶಾಲೆ, ಮೈಸೂರು0821-2497496. ಅಧೀಕ್ಷಕರು, ಅಂಧ ಮಕ್ಕಳ ಶಾಲೆ, ದಾವಣಗೆರೆ 08192-250442, ಅಧೀಕ್ಷಕರು, ಅಂಧ ಮಕ್ಕಳ ಶಾಲೆ ಹುಬ್ಬಳ್ಳಿ 08362-204167, ಅಧೀಕ್ಷಕರು, ಅಂಧ ಮಕ್ಕಳ ಶಾಲೆ, ಗುಲ್ಬರ್ಗಾ 08473-220641.
3. ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

## ಸರ್ಕಾರದಿಂದ ನಡೆಯುತ್ತಿರುವ ವಿಶೇಷ ಶಾಲೆಗಳು




Karnataka State Government Disabled Employees Association
Renukaradhya R S
Indresh R

# 4. ಅಂಧ ಮತ್ತು ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ.

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ಅಂಗವಿಕಲ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು. 2 ವಿಶೇಷ ಶಿಕ್ಷಕರ ತರಬೇತಿ ಕೇಂದ್ರಗಳನ್ನು 2000-01ನೇ ಸಾಲಿನಿಂದ ಮೈಸೂರಿನಲ್ಲಿ ಪ್ರಾರಂಭಿಸಿ ತರಬೇತಿಯನ್ನು ತಲಾ 25 ಮಂದಿಗೆ ಪ್ರತಿ ವರ್ಷವು ನೀಡಲಾಗುತ್ತಿದೆ.

## ಉದ್ದೇಶ:

ರಾಜ್ಯದಲ್ಲಿ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಕರ ಕೊರತೆ ಇರುವುದರಿಂದ ಪ್ರಾಥಮಿಕ ಹಂತದ ಮಕ್ಕಳಿಗೆ ಬೋಧನೆ ಮಾಡುವ ಶಿಕ್ಷಕರಿಗೆ ಆರ್.ಸಿ.ಐ. ನವದೆಹಲಿರವರ ಮಾರ್ಗಸೂಚಿಯನ್ವಯ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ವಿಶೇಷ ಶಿಕ್ಷಣದಲ್ಲಿ ಡಿ.ಎಸ್.ಇ.(ಹೆಚ್.ಐ) ಹಾಗೂ ಡಿ.ಎಸ್.ಇ.(ವಿ.ಐ) ಡಿಪ್ಲೋಮಾ (2ವರ್ಷ) ತರಬೇತಿಯನ್ನು ಸದರಿ ಕೇಂದ್ರದಲ್ಲಿ ನೀಡಲಾಗುತ್ತಿದೆ.

Karnataka State Government Disabled Employees Association
Renukaradhya S
Indresh R

## ಅರ್ಹತೆಗಳು:

1. ಪಿ.ಯು.ಸಿ.ಯಲ್ಲಿ ಶೇಕಡ 50ರಷ್ಟು ಅಂಕ ಪಡೆದು ಉತ್ತೀರ್ಣರಾಗಿಬೇಕು.

## ಪ್ರವೇಶಾವಕಾಶಕ್ಕೆ ಸಂಪರ್ಕಿಸಿ :

1. ಪ್ರಧಾನ ಕಛೇರಿ : ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು-1.
   ಮಾಹಿತಿ ಸಲಹಾ ಕೇಂದ್ರ, ದೂರವಾಣಿ ಸಂಖ್ಯೆ 080-22860907
2. ಉಪನಿರ್ದೇಶಕರು, ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ, ಮೈಸೂರು.
   E-mail : hkhelenkeller91@gmail.com ದೂರವಾಣಿ ಸಂ:0821-2491600.
3. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಮೈಸೂರು.

# 5. ಸರ್ಕಾರಿ ಬ್ರೈಲ್ ಮುದ್ರಣಾಲಯ, ಮೈಸೂರು

ದೃಷ್ಟಿದೋಷವುಳ್ಳ ಮಕ್ಕಳ ಶಿಕ್ಷಣ ಸಾಹಿತ್ಯದಲ್ಲಿ ತೊಡಗಿರುವ ಏಕೈಕ ಸಂಸ್ಥೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯ. ರಾಜ್ಯದ ಎಲ್ಲಾ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪಠ್ಯ ಪುಸ್ತಕ ಮತ್ತು ಸಾಮಾಗ್ರಿಗಳನ್ನು ಪೂರೈಸುವುದರ ಜೊತೆಗೆ ಮಕ್ಕಳಿಗೆ ಅಗತ್ಯವಿರುವ ಕೆಲವು ಉಪಯುಕ್ತ ಸಾಹಿತ್ಯವನ್ನು ಪ್ರಕಟಿಸುವ ಏರ್ಪಾಡು ಮಾಡಲಾಗುತ್ತಿದೆ. .

ಸಾಮಾನ್ಯ/ದೃಷ್ಟಿದೋಷವುಳ್ಳ ಮಕ್ಕಳ ಶಾಲೆಗಳಲ್ಲಿ ಅಭ್ಯಾಸ ಮಾಡುವ ಮಕ್ಕಳ ತರಗತಿವಾರು ಸಂಖ್ಯೆಯನ್ನು ವ್ಯವಸ್ಥಾಪಕರು, ಬ್ರೈಲ್ ಮುದ್ರಣಾಲಯ ಇವರಿಗೆ ಸಲ್ಲಿಸಬೇಕು. ಬ್ರೈಲ್ ಮುದ್ರಣಾಲಯ ಇವರು 1 ರಿಂದ 10ನೇ ತರಗತಿವರೆಗಿನ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಬೇಡಿಕೆ ಸಲ್ಲಿಸಿದ ಶಾಲೆಗಳಿಗೆ ಸರಬರಾಜು ಮಾಡುವರು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದವರು.**

1. ಪ್ರಧಾನ ಕಛೇರಿ : ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬೆಂಗಳೂರು-1.
ಮಾಹಿತಿ ಸಲಹಾ ಕೇಂದ್ರ,
ದೂರವಾಣಿ ಸಂಖ್ಯೆ 080-22860907
Website: www.welfareofdisabled@ka.nic.in

2. ಉಪನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,

3. ವ್ಯವಸ್ಥಾಪಕರು : ಸರ್ಕಾರಿ ಬ್ರೈಲ್ ಮುದ್ರಣಾಲಯ, ತಿಲಕ ನಗರ, ಮೈಸೂರು.
ದೂರವಾಣಿ ಸಂ:0821-2496846
E-mail : Braillepressmys@yahoo.co.in

Karnataka State Government Disabled Employees Association
Renukaradhya C
Indresh R

# 6. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ

(ಸರ್ಕಾರಿ ಆದೇಶ ಸಂಖ್ಯೆ:ಮಮಇ: 173:ಪಿಹೆಚ್‌ಪಿ:2010 ಬೆಂಗಳೂರು ದಿ:12.5.2011)

**ಪೀಠಿಕೆ:**

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. 2011-12ನೇ ಸಾಲಿನಿಂದ ಜಿಲ್ಲಾ ಪುನರ್ವಸತಿ ಕೇಂದ್ರಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿರುತ್ತದೆ. ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ತರಬೇತಿ, ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. ರಾಜ್ಯದ ಮೈಸೂರು, ಗದಗ್, ಹಾವೇರಿ, ಬೆಂಗಳೂರು ನಗರ, ಬೆಂಗಳೂರು (ಗ್ರಾ) ಉಡುಪಿ, ದಕ್ಷಿಣಕನ್ನಡ, ಬೆಳಗಾವಿ, ರಾಯಚೂರು, ಚಿಕ್ಕಮಗಳೂರು, ಬಿಜಾಪುರ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

Karnataka State Government Disabled Employees Association
Renukaradhya S
Indresh R

**ಯೋಜನೆಯ ಉದ್ದೇಶ:-**

- ತಪಾಸಣಾ ಶಿಬಿರಗಳ ಮೂಲಕ ಅಂಗವಿಕಲರ ಸಮೀಕ್ಷೆ ಹಾಗು ಗುರುತಿಸುವಿಕೆ.
- ಅಂಗವಿಕಲತೆಯನ್ನು ತಡೆಗಟ್ಟುವ ಬಗ್ಗೆ ಪ್ರೋತ್ಸಾಹಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.
- ಬಾಲ್ಯಾವಸ್ಥೆಯಲ್ಲಿಯೇ ಅಂಗವಿಕಲತೆಯನ್ನು ಪತ್ತೆಹಚ್ಚಿ ತಡೆಗಟ್ಟುವುದು.
- ಅಗತ್ಯವಿರುವ ಸಾಧನ ಸಲಕರಣೆಗಳನ್ನು ಗುರುತಿಸುವುದು ಹಾಗೂ ಅವುಗಳನ್ನು ತಯಾರಿಸಿ ನೀಡುವುದು ಮತ್ತು ದುರಸ್ತಿ ಕಾರ್ಯ ಕೈಗೊಳ್ಳುವುದು.
- ಅಂಗವಿಕಲತೆ ಪ್ರಮಾಣ ಪತ್ರಗಳನ್ನು ಒದಗಿಸುವುದು, ರಿಯಾಯಿತಿ ದರದ ಬಸ್‌ಪಾಸ್ ಅಂಗವಿಕಲರಿಗೆ ಇತರೆ ರಿಯಾಯಿತಿಗಳನ್ನು ಒದಗಿಸಲು ಕ್ರಮವಹಿಸುವುದು.
- ಅಂಗವಿಕಲತೆ ನಿವಾರಣೆ ಶಸ್ತ್ರಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆ ಹಾಗೂ ಇತರೆ ಖಾಸಗಿ ಆಸ್ಪತ್ರೆಗಳಿಗೆ ಅಂಗವಿಕಲರನ್ನು ಕಳುಹಿಸಲು ಮಾಹಿತಿ ಸೇವೆ ನೀಡಲು ವ್ಯವಸ್ಥೆ ಮಾಡುವುದು.
- ಸ್ವಯಂ ಉದ್ಯೋಗಕ್ಕೆ ಬ್ಯಾಂಕ್ ಹಾಗೂ ಇತರೆ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸುವುದು.
- ಶಿಕ್ಷಕರು, ಸಮುದಾಯ ಹಾಗೂ ಅಂಗವಿಕಲರ ಕುಟುಂಬಗಳಿಗೆ ತರಬೇತಿಯನ್ನು ನೀಡುವುದು.
- ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ವಿಕಲಚೇತನರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರನ್ನು ಸೂಕ್ತ ಕೆಲಸಗಳಲ್ಲಿ ತೊಡಗಿಸುವುದರ ಮೂಲಕ ಆರ್ಥಿಕವಾಗಿ ಸಬಲೀಕರಿಸುವುದು.

## ಅನುಷ್ಠಾನ :-

- ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ನಿರ್ವಹಣಾ ಸಮಿತಿಯನ್ನು ರಚಿಸಲಾಗಿದ್ದು, ಪುನರ್ವಸತಿ ಕೇಂದ್ರದ ಎಲ್ಲಾ ಚಟುವಟಿಕೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುವ ಕುರಿತು ಸದರಿ ಸಮಿತಿಯು ಮೇಲ್ವಿಚಾರಣೆ ಮಾಡುವುದು.

**ಜಿಲ್ಲಾ ಪುನರ್ವಸತಿ ಕೇಂದ್ರದ ಚಟುವಟಿಕೆಗಳು**






Karnataka State Government Disabled Employees Association
Renukaradhya S
Indresh R

# 7. ಸಮಾಜ ಸೇವಾ ಸಂಕೀರ್ಣ

ನಿರ್ಗತಿಕ ಪುರುಷ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಸಮಾಜ ಸೇವಾ ಸಂಕೀರ್ಣವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಗರಿಷ್ಟ 100 ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಅವಕಾಶ ಹೊಂದಿರುತ್ತದೆ.

## ಅರ್ಹತೆಗಳು

1. 18 ವರ್ಷಕ್ಕಿಂತ ಮೇಲ್ಪಟ್ಟ ಪೋಷಕರಿಲ್ಲದ ಪುರುಷ ಬುದ್ಧಿಮಾಂದ್ಯ ವ್ಯಕ್ತಿಗಳನ್ನು ದಾಖಲು ಮಾಡಿಕೊಳ್ಳಲಾಗುವುದು.
2. ಸದರಿ ವ್ಯಕ್ತಿಗಳು ನಿಮ್ಹಾನ್ಸ ಅಥವಾ ತತ್ಸಮಾನ ಸಂಸ್ಥೆಗಳಿಂದ ಬುದ್ಧಿಮಾಂದ್ಯತೆ ಬಗ್ಗೆ ದೃಢೀಕರಣ ಪತ್ರ ಹೊಂದಿರಬೇಕು.
3. ನ್ಯಾಯಾಲಯದ ಆದೇಶದ ಮೇರೆಗೆ ಬರುವಂತಹ ಬುದ್ಧಿಮಾಂದ್ಯ ವ್ಯಕ್ತಿಗಳನ್ನು ದಾಖಲಿಸಿಕೊಳ್ಳಲಾಗುವುದು.

## ಪ್ರವೇಶಾವಕಾಶಕ್ಕೆ ಸಂಪರ್ಕಿಸಿ :

**ಅಧೀಕ್ಷಕರು, ಸಮಾಜ ಸೇವಾ ಸಂಕೀರ್ಣ, ಕಿದ್ವಾಯಿ ಆಸ್ಪತ್ರೆ ಆವರಣ, ಹೊಸೂರು ರಸ್ತೆ, ಬೆಂಗಳೂರು, ದೂರವಾಣಿ ಸಂಖ್ಯೆ 080–26566258**



Karnataka State Government Disabled Employees Association
Renukaradhya S
Indresh R

# ಸಮಾಜ ಸೇವಾ ಸಂಕೀರ್ಣದ ಒಳನೋಟ





Karnataka State Government Disabled Employees Association
Renukaradhya S
Indresh R

# 8. ಮಂದಮತಿ ಮಹಿಳೆಯರ ಅನುಪಾಲನಾ ಗೃಹ

ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ರಾಜ್ಯದ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ನಡೆಸಲಾಗುತ್ತಿದೆ. ಬೆಂಗಳೂರಿನ ಅನುಪಾಲನಾ ಗೃಹದಲ್ಲಿ ಹಾಲಿ 100 ನಿವಾಸಿಗಳನ್ನು, ಹುಬ್ಬಳ್ಳಿಯ ಅನುಪಾಲನಾ ಗೃಹದಲ್ಲಿ ಹಾಲಿ 50 ನಿವಾಸಿಗಳನ್ನು ದಾಖಲಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

## ಅರ್ಹತೆಗಳು.

1. 18 ವರ್ಷಕ್ಕಿಂತ ಮೇಲ್ಪಟ್ಟ ಪೋಷಕರಿಲ್ಲದ ಬುದ್ಧಿಮಾಂದ್ಯ ಮಹಿಳೆಯರನ್ನು ದಾಖಲು ಮಾಡಿಕೊಳ್ಳಲಾಗುವುದು.
2. ಸದರಿ ವ್ಯಕ್ತಿಗಳು ನಿಮ್ಹಾನ್ಸ ಅಥವಾ ತತ್ಸಮಾನ ಸಂಸ್ಥೆಗಳಿಂದ ಬುದ್ಧಿಮಾಂದ್ಯತೆ ಬಗ್ಗೆ ದೃಢೀಕರಣ ಪತ್ರ ಹೊಂದಿರಬೇಕು.
3. ನ್ಯಾಯಾಲಯದ ಆದೇಶದ ಮೇರೆಗೆ ಬರುವಂತಹ ಬುದ್ಧಿಮಾಂದ್ಯ ವ್ಯಕ್ತಿಗಳನ್ನು ದಾಖಲಿಸಿಕೊಳ್ಳಲಾಗುವುದು.

## ಪ್ರವೇಶಾವಕಾಶಕ್ಕೆ ಸಂಪರ್ಕಿಸಿ :.

1. ಅಧೀಕ್ಷಕರು, ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಬೆಂಗಳೂರು, 080-26566258
2. ಅಧೀಕ್ಷಕರು, ಮಂದಮತಿ ಮಹಿಳೆಯರ ಅನುಪಾಲನಾ ಗೃಹ, ಹುಬ್ಬಳ್ಳಿ, 08362-2373857.
3. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಹಾಗೂ ಧಾರವಾಡ.





Karnataka State Government Disabled Employees Association
Renukaradhya S
Indresh R

# 9. ಮಾನಸ ಕೇಂದ್ರ

(ಸರ್ಕಾರದ ಆದೇಶ ಸಂಖ್ಯೆ ಮಮಇ 145 PHP 2006 ದಿ: 17.8.2007)

## ಉದ್ದೇಶ:

ರಾಜ್ಯದಲ್ಲಿ 2011ರ ಜನಗಣತಿಯ ಪ್ರಕಾರ 20,913 ಜನ ಮಾನಸಿಕ ಅಸ್ವಸ್ಥರು ಇರುತ್ತಾರೆ. ಮಾನಸಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದ ಮಾನಸಿಕ ಅಸ್ವಸ್ಥರು ಸಮಾಜದ ಮುಖವಾಹಿನಿಯಲ್ಲಿ ಸೇರ್ಪಡೆಗೊಳ್ಳುವ ಮುನ್ನ ಅವರಿಗೆ ತರಬೇತಿ ಹಾಗೂ ಆಪ್ತ ಸಮಾಲೋಚನೆ ನೀಡಿ ಪುನರ್ವಸತಿ ಕಲ್ಪಿಸುವ ಉದ್ದೇಶದಿಂದ ಅಲ್ಪಾವಧಿ ಕೇಂದ್ರಗಳನ್ನು ಬೆಂಗಳೂರು ಹಾಗೂ ಬೆಳಗಾವಿಗಳಲ್ಲಿ ಪ್ರಾರಂಭಿಸಲಾಗಿದೆ

## ಯೋಜನೆಯ ಸಂಕ್ಷಿಪ್ತ ಮಾಹಿತಿ:

1. ಮಾನಸ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರಿಗೆ ಅವಶ್ಯಕವಾಗಿ ಬೇಕಾಗಿರುವ ಆರೋಗ್ಯ, ಪೋಷಣೆ ಮತ್ತು ಆಶ್ರಯವನ್ನು ಒದಗಿಸುವುದು.
2. ಈ ಮಾನಸ ಕೇಂದ್ರಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು.
3. ಈ ಮಾನಸ ಕೇಂದ್ರಗಳ ಮಾನಸಿಕ ಅಸ್ವಸ್ಥರಿಗೆ ಖಾಯಂ ನೆಲೆಸುವ ಕೇಂದ್ರಗಳಾಗಿರದೇ, ಅಲ್ಪಾವಧಿ ತಾಣಗಳಾಗಿರುತ್ತವೆ. ಪೋಷಕರ ವಿಳಾಸ ತಿಳಿಯದ ಮಾನಸಿಕ ಅಸ್ವಸ್ಥರನ್ನು ಕೇಂದ್ರಕ್ಕೆ ಸೇರಿಸಿಕೊಂಡು ಪೋಷಕರನ್ನು ಗುರುತಿಸಲು ಕ್ರಮ ಕೈಗೊಂಡು ಫಲಾನುಭವಿಗಳನ್ನು ಪೋಷಕರಿಗೆ ಒಪ್ಪಿಸುವ ಕ್ರಮ ತೆಗೆದುಕೊಳ್ಳಲಾಗುವುದು.
4. ಮಾನಸ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರಿಗೆ ಬೇಕಾಗುವ ಔಷಧಗಳನ್ನು ಜಿಲ್ಲಾ/ತಾಲ್ಲೂಕು ಆಸ್ಪತ್ರೆಗಳಿಂದ ಉಚಿತವಾಗಿ ಪಡೆದು ಸರಬರಾಜು ಮಾಡಲಾಗುವುದು.

## ಫಲಾನುಭವಿಗಳ ಆಯ್ಕೆ:

1. ಮಾನಸಿಕ ಅಸ್ವಸ್ಥರು ಅಂದರೆ ಅಂಗವಿಕಲರ ಅಧಿನಿಯಮ 1995ರಲ್ಲಿ ತಿಳಿಸಿರುವ ವ್ಯಾಖ್ಯಾನಕ್ಕೆ ಒಳಪಟ್ಟವರು.
2. ಫಲಾನುಭವಿಯು ಮಾನಸಿಕ ಅಸ್ವಸ್ಥರಾಗಿದ್ದು ಅವರ ಅಂಗವಿಕಲತೆಯು ಕನಿಷ್ಠ ಶೇಕಡ 40 ರಷ್ಟು ಇರತಕ್ಕದ್ದು.
3. ಫಲಾನುಭವಿಯ ಕೌಟುಂಬಿಕ ವಾರ್ಷಿಕ ಆದಾಯ ನಗರ ಪ್ರದೇಶಗಳಲ್ಲಿ 24,000 ಮತ್ತು ಗ್ರಾಮೀಣ ಪ್ರದೇಶದಲ್ಲಿ 11,500 ರೂಗಳಿಗಿಂತ ಕಡಿಮೆ ಇರತಕ್ಕದ್ದು.
4. ರಸ್ತೆಗಳಲ್ಲಿ ಓಡಾಡುವ (Wandering) ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಿಗೆ ಸೇರಿಸಿಕೊಳ್ಳಲಾಗುವುದು.
5. ರಾಜ್ಯ ಉಚ್ಚ ನ್ಯಾಯಾಲಯವು ಮತ್ತು ನ್ಯಾಯಾಲಯಗಳು ಆದೇಶಿಸುವ ಫಲಾನುಭವಿಗಳನ್ನು ಸಹ ಈ ಕೇಂದ್ರಗಳಿಗೆ ಸೇರಿಸಕೊಳ್ಳಲಾಗುವುದು.

## ಪ್ರವೇಶಾವಕಾಶಕ್ಕೆ ಸಂಪರ್ಕಿಸಿ :

ಪ್ರಧಾನ ಕಛೇರಿ : ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ಬೆಂಗಳೂರು, ಮಾಹಿತಿ ಸಲಹಾ ಕೇಂದ್ರ, ದೂರವಾಣಿ ಸಂಖ್ಯೆ 080–22860907

ಜಿಲ್ಲೆಗಳಲ್ಲಿ : 1. ಉಪ / ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
2. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಜಿಲ್ಲಾ ಕಛೇರಿ. ಬೆಂಗಳೂರು ನಗರ, ಬೆಳಗಾವಿ.

Karnataka State Government Disabled Employees Association
Renukaradhya S
Indresh R

# 10. ಉದ್ಯೋಗಸ್ಥ ವಿಕಲಚೇತನ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ

**(ಸರ್ಕಾರಿ ಆದೇಶ ಸಂಖ್ಯೆ:ಮಮಇ:145:ಪಿಹೆಚ್‌ಪಿ:2006(2) ದಿ:29.07.2006)**

## ಪೀಠಿಕೆ:

ಗ್ರಾಮೀಣ ವಿಕಲಚೇತನ ಯುವತಿಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು 27 ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಮಹಿಳಾ ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದ್ದು, ಸದರಿ ವಸತಿನಿಲಯಗಳಲ್ಲಿ ತಲಾ 50 ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

## ಯೋಜನೆಯ ಉದ್ದೇಶ.:-

- ಈ ವಸತಿ ನಿಲಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಅಂಗವಿಕಲ ಉದ್ಯೋಗಸ್ಥ ಮಹಿಳೆಯರು/ ವಿದ್ಯಾರ್ಥಿನಿಯರು/ವೃತ್ತಿಪರ ತರಬೇತಿ ಪಡೆಯುತ್ತಿರುವ ಮಹಿಳೆಯರಿಗೆ ಮಾತ್ರ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿರುತ್ತದೆ.
- ಉದ್ಯೋಗಸ್ಥ ಮಹಿಳೆಯರು ಈ ವಸತಿ ನಿಲಯದಲ್ಲಿ ಪ್ರವೇಶ ಪಡೆದಲ್ಲಿ ಊಟದ ವೆಚ್ಚವಾಗಿ ಮಾಹೆಯಾನ ರೂ.600.00 ಗಳನ್ನು ಮಾತ್ರ ಪಾವತಿಸಬೇಕಾಗಿರುತ್ತದೆ.
- ಈ ವಸತಿ ನಿಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿನಿಯರು ಇತರೆ ಯಾವುದೇ ತರಹದ ಶಿಷ್ಯವೇತನವನ್ನು ಪಡೆಯಲು ಅರ್ಹರಿರುವುದಿಲ್ಲ, (ಪ್ರತಿಭಾನ್ವಿತವಾಗಿ ಪಡೆಯುವ ಶಿಷ್ಯ ವೇತನ ಹೊರತುಪಡಿಸಿ)

## ಪ್ರವೇಶಾವಕಾಶಕ್ಕೆ ಸಂಪರ್ಕಿಸಿ :

ಜಿಲ್ಲೆಗಳಲ್ಲಿ: 1. ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,

2. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಜಿಲ್ಲಾ ಕಛೇರಿ.

Karnataka State Government Disabled Employees Association
Renukaradhya S
Indresh R

# 11. ಅಂಗವಿಕಲ ನೌಕರರ ಮತ್ತು ತರಬೇತಿದಾರರ (ಪುರುಷ & ಮಹಿಳೆಯರ) ವಸತಿ ನಿಲಯ, ಬೆಂಗಳೂರು

ಅಂಗವಿಕಲ ಯುವತಿಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು ಉದ್ಯೋಗಸ್ಥ ಅಂಗವಿಕಲ ಪುರುಷರು ಹಾಗೂ ಮಹಿಳೆಯರಿಗಾಗಿ, ಪ್ರತ್ಯೇಕವಾಗಿ ಬೆಂಗಳೂರಿನಲ್ಲಿ ವಸತಿ ನಿಲಯಗಳನ್ನು ಇಲಾಖೆಯ ವತಿಯಿಂದ ಸ್ಥಾಪಿಸಲಾಗಿರುತ್ತದೆ. ಪುರುಷರ ವಸತಿ ನಿಲಯದಲ್ಲಿ 75 ಹಾಗೂ ಮಹಿಳೆಯರ ವಸತಿ ನಿಲಯದಲ್ಲಿ 50 ಉದ್ಯೋಗಸ್ಥ ಅಂಗವಿಕಲರಿಗೆ ವಸತಿ ಅವಕಾಶ ಕಲ್ಪಿಸಲಾಗಿರುತ್ತದೆ. ಉದ್ಯೋಗಸ್ಥರು ವೇತನದ ಶೇಕಡ 5ರಷ್ಟನ್ನು ಬಾಡಿಗೆ ರೂಪದಲ್ಲಿ ನೀಡಬೇಕಾಗಿರುತ್ತದೆ.

**ಪ್ರವೇಶಾವಕಾಶಕ್ಕೆ ಸಂಪರ್ಕಿಸಿ :**

ಜಿಲ್ಲೆಗಳಲ್ಲಿ:
1. ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ.
2. ಅಧೀಕ್ಷಕರು, ಅಂಗವಿಕಲರ ಹಾಗೂ ತರಬೇತುದಾರರ (ಪುರುಷರ) ವಸತಿನಿಲಯ, ಬೆಂಗಳೂರು.
3. ಅಧೀಕ್ಷಕರು, ಅಂಗವಿಕಲರ ಹಾಗೂ ತರಬೇತುದಾರರ (ಮಹಿಳೆಯರ) ವಸತಿನಿಲಯ, ಬೆಂಗಳೂರು.

Karnataka State Government Disabled Employees Association
Renukaradhya S
Indresh R

# 12. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ

**(ಟೋಲ್ ಫ್ರೀ ದೂರವಾಣಿ ಸಂಖ್ಯೆ:1090)** (ಸರ್ಕಾರದ ಆದೇಶ ಸಂಖ್ಯೆ:ಮಮಇ/265/ಎಸ್.ಜೆ.ಡಿ/2004 ದಿನಾಂಕ:27-11-2004)

## ಉದ್ದೇಶ:

ಹಿರಿಯ ನಾಗರಿಕರ ರಕ್ಷಣೆಗಾಗಿ, ಉಚಿತ ಕಾನೂನು ಸಲಹೆ ನೀಡಲು, ಆಪ್ತ ಸಲಹೆ ನೀಡಲು ಹಾಗೂ ಸಮಸ್ಯೆಗಳ ತುರ್ತು ಸ್ಪಂದನೆಗಾಗಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ(ಟೋಲ್ ಫ್ರೀ ದೂರವಾಣಿ ಸಂಖ್ಯೆ:1090)ಗಳನ್ನು ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿಯ ಆವರಣದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

## ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಗಳು:

- ಸಂಕಷ್ಟ/ಸೌಲಭ್ಯ ವಂಚಿತರಾಗಿರುವ ಯಾವುದೇ ಹಿರಿಯ ನಾಗರಿಕರು.

## ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ನಡೆಸಲು ಸ್ವಯಂ ಸೇವಾ ಸಂಸ್ಥೆಗೆ ಇರಬೇಕಾದ ಅರ್ಹತೆಗಳು:

- ಸೊಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್ / ಟ್ರಸ್ಟ್ ಆಕ್ಟ್‌ನಡಿ ನೋಂದಣಿಯಾದ ಸಂಸ್ಥೆಯಾಗಿರಬೇಕು
- ಸಂಸ್ಥೆಯು ನೋಂದಣಿಯಾಗಿ ಕನಿಷ್ಠ 2 ವರ್ಷಗಳಾಗಿರಬೇಕು.
- ಸಹಾಯವಾಣಿ ಕೇಂದ್ರದಲ್ಲಿ ಸರ್ಕಾರದ ಅದೇಶಗಳಲ್ಲಿ ನಿಗದಿಪಡಿಸಲಾದ ವಿದ್ಯಾರ್ಹತೆಯುಳ್ಳ ಸೇವಾಮನೋಭಾವದ ಸಿಬ್ಬಂದಿಗಳನ್ನು ಹೊಂದಿರಬೇಕು.
- ಹಿರಿಯ ನಾಗರಿಕರ ಅವಶ್ಯಕತೆಗಳನ್ನು ಪೂರೈಸುವ, ಮೂಲಭೂತ ಸೌಕರ್ಯ ಒದಗಿಸುವ ಮನೋಭಾವ ಹೊಂದಿರುವ ಆಡಳಿತ ಮಂಡಳಿಯನ್ನು ಹೊಂದಿರಬೇಕು. ಸಂಸ್ಥೆಯು ಆಡಳಿತ ಮಂಡಳಿಯ, ಕರ್ತವ್ಯಗಳು ಮತ್ತ ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿರುವ ಉಪನಿಯಮಗಳನ್ನು (ಬೈಲಾ) ಹೊಂದಿರಬೇಕು.
- ಸಂಸ್ಥೆಯ ಆರ್ಥಿಕ ಸ್ಥಿತಿಗತಿಯು ಸಧೃಡವಾಗಿರಬೇಕು.
- ಯಾವುದೇ ಓರ್ವ ವ್ಯಕ್ತಿ ಹಾಗೂ ಜನಾಂಗದ ಲಾಭಕ್ಕಾಗಿ ಸಂಸ್ಥೆಯನ್ನು ನಡೆಸುತ್ತಿರಬಾರದು.
- ಸಂಸ್ಥೆಯು ಯಾವುದೇ ಜಾತಿ, ಪಂಥ, ಮತ ಮತ್ತು ಭಾಷೆಗಳನ್ನು ಪರಿಗಣಿಸದೇ ಎಲ್ಲರಿಗೂ ಸೌಲಭ್ಯ ಒದಗಿಸಬೇಕು

Karnataka State Government Disabled Employees Association
Renukaradhya S
Indresh R

## ಸಹಾಯವಾಣಿ ಕೇಂದ್ರ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಯ ಆಯ್ಕೆ ವಿಧಾನ:

- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಪ್ರಾರಂಭಿಸಲು ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳು ಅರ್ಜಿ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆ ನೀಡುವುದು.
- ಸ್ವೀಕೃತವಾದ ಅರ್ಜಿಗಳನ್ನು ಪಾಲಕರ ಪೋಷಣೆ ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ 2007ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳವರ ಅಧ್ಯಕ್ಷತೆಯಲ್ಲಿರುವ ಜಿಲ್ಲಾಮಟ್ಟದ ಸಮಿತಿಯಲ್ಲಿ ಮಂಡಿಸುವುದು.
- ಸಮಿತಿಯಲ್ಲಿ ಆಯ್ಕೆಯಾದ ಒಂದು ಪ್ರಸ್ತಾವನೆಯನ್ನು ಮಾತ್ರ ಆಡಳಿತಾತ್ಮಕ ಅನುಮೋದನೆಗಾಗಿ ಜಿಲ್ಲಾಮಟ್ಟದ ಸಮಿತಿಯ ಸಭಾ ನಡವಳಿ, ತಪಾಸಣಾ ವರದಿ ಹಾಗೂ ಪ್ರಸ್ತಾವನೆಯೊಂದಿಗೆ ಪ್ರಧಾನ ಕಛೇರಿಗೆ ಸಲ್ಲಿಸುವುದು.
- ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಪ್ರಾರಂಭಿಸುವುದು.

Karnataka State Government Disabled Employees Association
Renukaradhya S
Indresh R

## ಅನುದಾನ :

ಸ್ವಯಂ ಸೇವಾ ಸಂಸ್ಥೆಗಳಿಗೆ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳ ನಿರ್ವಹಣೆಗಾಗಿ ವಾರ್ಷಿಕ ರೂ.7.15ಲಕ್ಷಗಳ ಅನುದಾನ ನೀಡಲಾಗುತ್ತಿದೆ.

## ಪ್ರಸ್ತುತ ಸ್ಥಿತಿಗತಿ:

ರಾಜ್ಯದಲ್ಲಿ 14 ಸಹಾಯವಾಣಿ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಿಲ್ಲಾ ಪೋಲೀಸ್ ಅಧೀಕ್ಷಕರುಗಳ ಕಛೇರಿ ಆವರಣದಲ್ಲಿ ನಡೆಸಲಾಗುತ್ತಿದ್ದು, 2014-15ನೇ ಸಾಲಿನಿಂದ ಬಾಕಿ ಉಳಿದ ಜಿಲ್ಲೆಗಳಲ್ಲಿಯೂ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

# 13.ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ

(ಸರ್ಕಾರದ ಆದೇಶ ಸಂಖ್ಯೆ:ಮಮಇ/246/ಎಸ್.ಜೆ.ಡಿ/2004 ದಿನಾಂಕ:26-10-2004)

## ಉದ್ದೇಶ:

ಹಿರಿಯ ನಾಗರಿಕರಿಗೆ ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸುವುದು, ಹಿರಿಯರಲ್ಲಿ ಅಡಗಿರುವ ಸಂಪನ್ಮೂಲ ಶಕ್ತಿಯನ್ನು ಉಪಯೋಗಿಸಿಕೊಂಡು ದೇಶದ ಅಭಿವೃದ್ಧಿಗೆ ಶ್ರಮಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರವನ್ನು ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮತ್ತು ಗುಲ್ಬರ್ಗ ಜಿಲ್ಲೆಗಳ ನಗರಪಾಲಿಕೆ/ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.

## ಸೌಲಭ್ಯ ಪಡೆಯಲು ಹಿರಿಯ ನಾಗರಿಕರಿಗೆ ಇರಬೇಕಾದ ಅರ್ಹತೆಗಳು:

- ಸಂಕಷ್ಟ/ಸೌಲಭ್ಯ ವಂಚಿತರಾಗಿರುವ ಯಾವುದೇ ಹಿರಿಯ ನಾಗರಿಕರು.

## ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ ನಡೆಸಲು ಸ್ವಯಂ ಸೇವಾ ಸಂಸ್ಥೆಗೆ ಇರಬೇಕಾದ ಅರ್ಹತೆಗಳು:

- ಸೊಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್ / ಟ್ರಸ್ಟ್ ಆಕ್ಟ್‌ನಡಿ ನೋಂದಣಿಯಾದ ಸಂಸ್ಥೆಯಾಗಿರಬೇಕು
- ಸಂಸ್ಥೆಯು ನೋಂದಣಿಯಾಗಿ ಕನಿಷ್ಠ 2 ವರ್ಷಗಳಾಗಿರಬೇಕು.
- ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಲಾದ ವಿದ್ಯಾರ್ಹತೆಯುಳ್ಳ ಸೇವಾ ಮನೋಭಾವದ ಸಿಬ್ಬಂದಿಗಳನ್ನು ಹೊಂದಿರಬೇಕು.

Karnataka State Government Disabled Employees Association
Renukaradhya S
Indresh R

- ಹಿರಿಯ ನಾಗರಿಕರ ಅವಶ್ಯಕತೆಗಳನ್ನು ಪೂರೈಸುವ, ಮೂಲಭೂತ ಸೌಕರ್ಯ ಒದಗಿಸುವ ಸೇವಾ ಮನೋಭಾವ ಹೊಂದಿರುವ ಆಡಳಿತ ಮಂಡಳಿಯನ್ನು ಹೊಂದಿರಬೇಕು. ಸಂಸ್ಥೆಯ ಆಡಳಿತ ಮಂಡಳಿಯ, ಕರ್ತವ್ಯಗಳು ಮತ್ತ ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿರುವ ಉಪನಿಯಮಗಳನ್ನು (ಬೈಲಾ) ಹೊಂದಿರಬೇಕು.
- ಸಂಸ್ಥೆಯ ಆರ್ಥಿಕ ಸ್ಥಿತಿಗತಿಯು ಸಧೃಡವಾಗಿರಬೇಕು.
- ಯಾವುದೇ ಓರ್ವ ವ್ಯಕ್ತಿ ಹಾಗೂ ಜನಾಂಗದ ಲಾಭಕ್ಕಾಗಿ ಸಂಸ್ಥೆಯನ್ನು ನಡೆಸುತ್ತಿರಬಾರದು.
- ಸಂಸ್ಥೆಯು ಯಾವುದೇ ಜಾತಿ, ಪಂಥ, ಮತ ಮತ್ತು ಭಾಷೆಗಳನ್ನು ಪರಿಗಣಿಸದೇ ಎಲ್ಲರಿಗೂ ಸೌಲಭ್ಯ ಒದಗಿಸಬೇಕು

## ಹಗಲು ಯೋಗಕ್ಷೇಮ ಕೇಂದ್ರ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಯ ಆಯ್ಕೆ ವಿಧಾನ:

- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ ಪ್ರಾರಂಭಿಸಲು ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳು ಅರ್ಜಿ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆ ನೀಡುವುದು.

- ಸ್ವೀಕೃತವಾದ ಅರ್ಜಿಗಳನ್ನು ಪಾಲಕರ ಪೋಷಣೆ ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ 2007ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳವರ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಮಂಡಿಸುವುದು.
- ಸಮಿತಿಯಲ್ಲಿ ಆಯ್ಕೆಯಾದ ಒಂದು ಪ್ರಸ್ತಾವನೆಯನ್ನು ಮಾತ್ರ ಆಡಳಿತಾತ್ಮಕ ಅನುಮೋದನೆಗಾಗಿ ಜಿಲ್ಲಾ ಮಟ್ಟದ ಸಮಿತಿಯ ಸಭಾ ನಡವಳಿ, ತಪಾಸಣಾ ವರದಿ ಹಾಗೂ ಪ್ರಸ್ತಾವನೆಯೊಂದಿಗೆ ಪ್ರಧಾನ ಕಛೇರಿಗೆ ಸಲ್ಲಿಸುವುದು.
- ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ ಪ್ರಾರಂಭಿಸುವುದು.

## ಅನುದಾನ :

ಸ್ವಯಂ ಸೇವಾ ಸಂಸ್ಥೆಗಳಿಗೆ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರಗಳ ನಿರ್ವಹಣೆಗಾಗಿ ವಾರ್ಷಿಕ ರೂ.4.15ಲಕ್ಷ ಅನುದಾನ ನೀಡಲಾಗುತ್ತಿದ್ದು, 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸದರಿ ಅನುದಾನವನ್ನು ರೂ.11.20 ಲಕ್ಷಗಳಿಗೆ ಹೆಚ್ಚಿಸಲಾಗಿದೆ. (ಸರಕಾರಿ ಆದೇಶ ಸಂಖ್ಯೆ ಮಮಇ 105 ಪಿಹೆಚ್‌ಪಿ 2014 ದಿ. 13-6-2014)

## ಪ್ರಸ್ತುತ ಸ್ಥಿತಿಗತಿ:

ರಾಜ್ಯದಲ್ಲಿ 04 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ-ಧಾರವಾಡ ಹಾಗೂ ಗುಲ್ಬರ್ಗಾ ನಗರಪಾಲಿಕೆ/ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ನಡೆಸಲಾಗುತ್ತಿದ್ದು, 2014-15ನೇ ಸಾಲಿನಿಂದ ಹೆಚ್ಚುವರಿ 10 ಜಿಲ್ಲೆಗಳಲ್ಲಿ ಹೊಸದಾಗಿ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

Karnataka State Government Disabled Employees Association
Renukaradhya S
Indresh R

## 14. ವಿಕಲಚೇತನರಿಗೆ ಇರುವ ಅಧಿನಿಯಮಗಳು

- ### ಅಂಗವಿಕಲರ ವ್ಯಕ್ತಿಗಳ ಅಧಿನಿಯಮ-1995

ಅಂಗವಿಕಲ ವ್ಯಕ್ತಿಗಳ "ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣಭಾಗವಹಿಸುವಿಕೆ ಅಧಿನಿಯಮ 1995ನ್ನು ರಾಜ್ಯದಲ್ಲಿ -1996 ರಿಂದ ಜಾರಿಗೆ ತರಲಾಗಿದೆ. ಸದರಿ ಅಧಿನಿಯಮದಡಿ ಸರ್ವತೋಮುಖ ಅಭಿವೃದ್ಧಿ ಅಂದರೆ ಶಿಕ್ಷಣ, ಪುನರ್ವಸತಿ, ಸಾಮಾಜಿಕ ಭದ್ರತೆ ಉದ್ಯೋಗಗಳಲ್ಲಿ ಅವಕಾಶಗಳನ್ನು ಕಲ್ಪಿಸಿ ಸಮಾಜದ ಮುಖ್ಯವಾಹಿನಿಗೆ ವಿಕಲಚೇತನರನ್ನು ತರುವ ನಿಟ್ಟಿನಲ್ಲಿ ಅಧಿನಿಯಮವನ್ನು ರೂಪಿಸಲಾಗಿದೆ.

- ### ನ್ಯಾಷನಲ್ ಟ್ರಸ್ಟ್ ಅಧಿನಿಯಮ.-1999

ನ್ಯಾಷನಲ್ ಟ್ರಸ್ಟ್ ಅಧಿನಿಯಮದಡಿ 4 ವಿಧದ ವಿಕಲಚೇತನರಿಗೆ ಆರೋಗ್ಯ ಮತ್ತಿತರ ಸೌಲಭ್ಯಗಳಿಗೆ ಯೋಜನೆಗಳನ್ನು ರೂಪಿಸಲಾಗಿದೆ. 04 ವಿಧದ ವಿಕಲಚೇತನರೆಂದರೆ ಬುದ್ಧಿಮಾಂದ್ಯರು, ಆಟಿಸಂ, ಸೆರಬ್ರಲ್ ಪಾಲ್ಸಿ, ಬಹುವಿಧ ಅಂಗವಿಕಲತೆಯಾಗಿರುತ್ತದೆ. ಸದರಿ ನಿಯಮದಡಿ ರೂಪಿಸಿರುವ ನಿರಾಮಯ ಯೋಜನೆಯು ಆರೋಗ್ಯ ವಿಮೆ ಯೋಜನೆಯಾಗಿರುತ್ತದೆ. ಗರೌಂಡ್ ಯೋಜನೆಯಡಿ ಗುಂಪು ಮನೆಗಳಿಗಾಗಿ ಅವಕಾಶ ಕಲ್ಪಿಸಲಾಗಿದೆ.

ಸದರಿ ಯೋಜನೆಯನ್ನು ರಾಜ್ಯದ ನ್ಯಾಷನಲ್ ಟ್ರಸ್ಟ್ ನೋಡಲ್ ಏಜೆನ್ಸಿ ಮುಖಾಂತರ ಜಾರಿಗೆ ತರಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಸೇವಾ ಇನ್ ಆಕ್ಷನ್ ಅಸೋಸಿಯೇಷನ್, ಬೆಂಗಳೂರು ರವರು ನ್ಯಾಷನಲ್ ಟ್ರಸ್ಟ್‌ನ ನೋಡಲ್ ಏಜೆನ್ಸಿಯಾಗಿರುತ್ತಾರೆ.

- ### ರಿಹ್ಯಾಬಿಲೀಟೇಷನ್ ಕೌನಿಲ್ಸ್ ಆಫ್ ಇಂಡಿಯಾ ಅಧಿನಿಯಮ-1992:

ಭಾರತೀಯ ಪುನರ್ವಸತಿ ಪರಿಷತ್ (ರಿಹ್ಯಾಬಿಲೀಟೇಷನ್ ಕೌನಿಲ್ಸ್ ಆಫ್ ಇಂಡಿಯಾ), ಭಾರತ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿದ್ದು, ವಿಕಲಚೇತನರುಗಳ ಪುನರ್ವಸತಿ ಕ್ಷೇತ್ರದಲ್ಲಿನ ವಿವಿಧ ಯೋಜನೆ ಮತ್ತು ತರಬೇತಿಗಳ ಕಾರ್ಯನೀತಿಗಳನ್ನು ಕ್ರಮಬದ್ಧಗೊಳಿಸುವ ಗುರುತರ ಜವಾಬ್ದಾರಿ ಹೊಂದಿರುವ ಸಂಸ್ಥೆಯಾಗಿರುತ್ತದೆ. ವಿವಿಧ ಸಂಸ್ಥೆಗಳು ವಿಕಲಚೇತನರುಗಳಿಗೆ ಶಿಕ್ಷಣ/ತರಬೇತಿ ನೀಡುವ ವಿಶೇಷ ತರಬೇತಿಗಳನ್ನು ಹೊಂದಿರುವ ಬೋಧಕರನ್ನು ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವ ಕಾರ್ಯಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಈ ಸಂಸ್ಥೆಯಿಂದ ಮಾನ್ಯತೆ ಪಡೆಯುವುದು ಕಡ್ಡಾಯವಾಗಿರುತ್ತದೆ.

Karnataka State Government Disabled Employees Association
Renukaradhya S
Indresh R

# ಜಿಲ್ಲಾ ವಲಯದ ಯೋಜನೆಗಳು

Karnataka State Government Disabled Employees Association
Renukaradhya S
Indresh R

# 1. 1982ರ ಅನುದಾನ ಸಂಹಿತೆಯಡಿ ವಿಶೇಷ ಶಾಲೆ/ತರಬೇತಿ ಕೇಂದ್ರಗಳಿಗೆ ಅನುದಾನ

(ಎಸ್.ಡಬ್ಲ್ಯೂಎಲ್:18:ಪಿಹೆಚ್‌ಪಿ:82:ಬೆಂಗಳೂರು ದಿ:11.08.1982)

## ಉದ್ದೇಶ:

ವಿವಿಧ ವಿಕಲಚೇತನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಊಟ, ವಸತಿ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿ ಸಮಾಜದಲ್ಲಿ ಇತರೆ ಮಕ್ಕಳಂತೆ ವಿದ್ಯಾಭ್ಯಾಸವನ್ನು ಒದಗಿಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯಿತಿ ಮೂಲಕ ಧನ ಸಹಾಯ ನೀಡುವ ಯೋಜನೆ.

## ಅರ್ಹತೆ:

1. ಈ ಯೋಜನೆಯನ್ನು ಜಿಲ್ಲಾ ಪಂಚಾಯಿತಿಗಳ ವತಿಯಿಂದ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೆ ತರಲಾಗುತ್ತಿದೆ.
2. ವಿವಿಧ ರೀತಿಯ ಅಂಗವಿಕಲತೆಗೆ ಸಂಬಂಧಿಸಿದಂತೆ ವಿಶೇಷ ಶಾಲೆಗಳಿಗೆ ರಾಜ್ಯ ಸರ್ಕಾರವು ಶೇಕಡಾ 100 ರಷ್ಟು ಅನುದಾನವನ್ನು ಒದಗಿಸಲಾಗುತ್ತಿದೆ.
3. ಈ ಯೋಜನೆಯನ್ನು ಪಡೆಯಲು ಸ್ವಯಂ ಸೇವಾ ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಕನಿಷ್ಠ 2 ವರ್ಷಗಳಾಗಿರಬೇಕು.
4. ಸ್ವಯಂ ಸೇವಾ ಸಂಸ್ಥೆಯು, ಸಾಕಷ್ಟು ಸಿಬ್ಬಂದಿವರ್ಗದೊಂದಿಗೆ ಅಗತ್ಯವಾದ ಮೂಲ ಸೌಲಭ್ಯ ಸಂಪನ್ಮೂಲ ಹಾಗೂ ಅನುಭವ ಮತ್ತು ಆರ್ಥಿಕವಾಗಿ ಸದೃಢವಾಗಿರಬೇಕು.
5. ಸ್ವಯಂ ಸೇವಾ ಸಂಸ್ಥೆಯು ಶಾಲೆಯನ್ನು ನಡೆಸುವಲ್ಲಿ ಅಥವಾ ಇಂತಹುದೇ ಇನ್ನಿತರ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅನುಭವ ಹೊಂದಿರಬೇಕು. ವಿಶೇಷ ಶಾಲೆಗಳಿಗೆ ಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು ಅದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬೇಕು.
6. ಸಂಸ್ಥೆಯು ಯಾವುದೇ ಒಂದು ಜನಾಂಗದ ಲಾಭಕ್ಕಾಗಿ ವಿಶೇಷ ಶಾಲೆಯನ್ನು ನಡೆಸುತ್ತಿರಬಾರದು.
7. ಸಂಸ್ಥೆಯು ಅಧಿಕೃತವಾಗಿ ರಚಿತವಾಗಿರುವ ಆಡಳಿತ ಮಂಡಳಿಯನ್ನು ಹೊಂದಿದ್ದು ಆಡಳಿತ ವರ್ಗದ ಅಧಿಕಾರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿ ಸಂಸ್ಥೆಯ ಬರವಣಿಗೆಯಲ್ಲಿರುವ ಸಂವಿಧಾನದಲ್ಲಿ ನಿರೂಪಿತವಾಗಿರಬೇಕು.
8. ಸಂಸ್ಥೆಯು ಯಾವುದೇ ಜಾತಿ, ಪಂಥ, ಮತ ಮತ್ತು ಭಾಷೆಗಳನ್ನು ಪರಿಗಣಿಸದೇ ಎಲ್ಲರಿಗೂ ಸೌಲಭ್ಯ ಒದಗಿಸಬೇಕು.

Karnataka State Government Disabled Employees Association
Renukaradhya S
Indresh R

## 2. ರಾಜ್ಯ ಅನುದಾನದಡಿ ನಡೆಯುತ್ತಿರುವ ವೃದ್ಧಾಶ್ರಮಗಳು

**(ಸರ್ಕಾರಿ ಆದೇಶ ಸಂ. ಮಮಅ-58, ಪಿ.ಹೆಚ್.ಪಿ-95 ದಿನಾಂಕ:29-9-95)**

### ಉದ್ದೇಶ:

ಅರವತ್ತು ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ನಿರ್ಗತಿಕ ವೃದ್ಧರಿಗೆ ಉಚಿತ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿ ವೃದ್ಧರು ಸಮಾಜದಲ್ಲಿ ನಿಶ್ಚಿಂತೆಯಿಂದ ಬಾಳಲು ವೃದ್ಧಾಶ್ರಮಗಳನ್ನು ನಡೆಸುತ್ತಿರುವ ಮತ್ತು ನಡೆಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರವು ಧನ ಸಹಾಯ ನೀಡುವ ಯೋಜನೆ.

### ಅರ್ಹತೆಗಳು:

1. ಈ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.
2. ವೃದ್ಧಾಶ್ರಮಕ್ಕೆ ತಗಲುವ ಅನುಮೋದಿತ ಒಟ್ಟು ವೆಚ್ಚದಲ್ಲಿ ರಾಜ್ಯ ಸರ್ಕಾರದ ಪಾಲು ಶೇ.90 ರಷ್ಟಾಗಿದ್ದು ಉಳಿದ ಶೇ.10ರಷ್ಟು ವೆಚ್ಚವನ್ನು ಸ್ವಯಂ ಸೇವಾ ಸಂಸ್ಥೆಗಳು ತನ್ನ ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು.
3. ಸ್ವಯಂ ಸೇವಾ ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಕನಿಷ್ಠ ಎರಡು ವರ್ಷಗಳಾಗಿರಬೇಕು.
4. ಸ್ವಯಂ ಸೇವಾ ಸಂಸ್ಥೆಯು ಸಾಕಷ್ಟು ಸಿಬ್ಬಂದಿ ವರ್ಗದೊಂದಿಗೆ ಅಗತ್ಯವಾದ ಸೌಲಭ್ಯ ಸಂಪನ್ಮೂಲ ಹಾಗೂ ಅನುಭವ ಹೊಂದಿ ಆರ್ಥಿಕವಾಗಿ ಸದೃಢತೆ ಹೊಂದಿರಬೇಕು.
5. ಸ್ವಯಂ ಸೇವಾ ಸಂಸ್ಥೆಯು ವೃದ್ಧಾಶ್ರಮವನ್ನು ನಡೆಸುವಲ್ಲಿ ಅಥವಾ ಇಂತಹದೇ ಇನ್ನಿತರ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅನುಭವ ಹೊಂದಿರಬೇಕು ಅಥವಾ ವೃದ್ಧಾಶ್ರಮವನ್ನು ನಡೆಸಲು ಬೇಕಾಗಿರುವ ಮೂಲ ಭೂತ ಸೌಲಭ್ಯಗಳನ್ನು ಹೊಂದಿರಬೇಕು ಅದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬೇಕು.
6. ಸಂಸ್ಥೆಯು ಅಧಿಕೃತವಾಗಿ ರಚಿತವಾಗಿರುವ ಆಡಳಿತ ಮಂಡಳಿಯನ್ನು ಹೊಂದಿದ್ದು ಆಡಳಿತ ವರ್ಗದ ಅಧಿಕಾರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿ ಸಂಸ್ಥೆಯ ಬರವಣಿಗೆಯಲ್ಲಿರುವ ಸಂವಿಧಾನದಲ್ಲಿ ನಿರೂಪಿತವಾಗಿರಬೇಕು.
7. ಸಂಸ್ಥೆಯು ಯಾವುದೇ ಜಾತಿ, ಪಂಥ ಮತ್ತು ಭಾಷೆಗಳನ್ನು ಪರಿಗಣಿಸದೇ ಎಲ್ಲರಿಗೂ ಸೌಲಭ್ಯ ಒದಗಿಸಬೇಕು.
8. ಯಾವುದೇ ಸಂಸ್ಥೆಯು ವೃದ್ಧಾಶ್ರಮವನ್ನು ಪ್ರಾರಂಭಮಾಡಬೇಕಾದಲ್ಲಿ ಕನಿಷ್ಠ 25 ಜನ ಫಲಾನುಭವಿಗಳು ಇರಬೇಕು.
9. ರಾಜ್ಯ ಸರ್ಕಾರದಿಂದ ಪ್ರತಿ ಜಿಲ್ಲೆಗೆ ಒಂದರಂತೆ ಮಾತ್ರ ವೃದ್ಧಾಶ್ರಮಕ್ಕೆ ಅನುದಾನವನ್ನು ನೀಡಲಾಗುವುದು.
10. ವೃದ್ಧಾಶ್ರಮವನ್ನು ಪ್ರಾರಂಭ ಮಾಡಬೇಕಾದಲ್ಲಿ ಮತ್ತು ಅನುದಾನವನ್ನು ಪಡೆಯಬೇಕಾದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿಸಬೇಕು.

Karnataka State Government Disabled Employees Association
Renukaradhya S
Indresh R

# ಕೇಂದ್ರ ಸರ್ಕಾರದ ಯೋಜನೆಗಳು

Karnataka State Government Disabled Employees Association
Renukaradhya S
Indresh R

# 1. ದೀನ ದಯಾಳ್ ರಿಹ್ಯಾಬಿಲಿಟೇಷನ್(DDRS) ಯೋಜನೆಯಡಿ ವಿಕಲಚೇತನರಿಗೆ ಶೈಕ್ಷಣಿಕ ಹಾಗೂ ವೃತ್ತಿ ತರಬೇತಿ ಯೋಜನೆಗಳು

**ಉದ್ದೇಶ:**

ವಿವಿಧ ವಿಕಲಚೇತನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ತರಬೇತಿ, ಊಟ, ವಸತಿ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿ ಸಮಾಜದಲ್ಲಿ ಇತರೆ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಒದಗಿಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಮೂಲಕ ಧನ ಸಹಾಯ ನೀಡುವ ಯೋಜನೆ.

**ಅರ್ಹತೆ:**

1. ಈ ಯೋಜನೆಯನ್ನು ಕೇಂದ್ರ ಸರ್ಕಾರವು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೆ ತರಲಾಗುತ್ತಿದೆ. ಈ ಯೋಜನೆಗೆ ಶೇ.90 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರವು ಒದಗಿಸುತ್ತಿದೆ. ಉಳಿದ ಶೇ. 10ರಷ್ಟು ಸ್ವಯಂ ಸೇವಾ ಸಂಸ್ಥೆಗಳೇ ಭರಿಸಬೇಕಾಗುತ್ತದೆ.
2. ಈ ಯೋಜನೆಯನ್ನು ಪಡೆಯಲು ಸ್ವಯಂ ಸೇವಾ ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಕನಿಷ್ಠ 2 ವರ್ಷಗಳಾಗಿರಬೇಕು
3. ಸ್ವಯಂ ಸೇವಾ ಸಂಸ್ಥೆಯು ಸಾಕಷ್ಟು ಸಿಬ್ಬಂದಿ ವರ್ಗದೊಂದಿಗೆ ಅಗತ್ಯವಾದ ಮೂಲಸೌಲಭ್ಯ, ಸಂಪನ್ಮೂಲ ಹಾಗೂ ಅನುಭವ ಹೊಂದಿದ್ದು ಮತ್ತು ಆರ್ಥಿಕವಾಗಿ ಸದೃಢ ಹೊಂದಿರಬೇಕು.
4. ಸ್ವಯಂ ಸೇವಾ ಸಂಸ್ಥೆಯು ಶಾಲೆಯನ್ನು ನಡೆಸುವಲ್ಲಿ ಅಥವಾ ಇಂತಹುದೇ ಇನ್ನಿತರ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅನುಭವ ಹೊಂದಿರಬೇಕು. ವಿಶೇಷ ಶಾಲೆಗಳಿಗೆ ಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು.
5. ಸಂಸ್ಥೆಯು ಯಾವುದೇ ಯೋಜನೆಯನ್ನು ಒಂದು ಜನಾಂಗದ ಲಾಭಕ್ಕಾಗಿ ನಡೆಸುತ್ತಿರಬಾರದು.
6. ಸಂಸ್ಥೆಯು ಅಧಿಕೃತವಾಗಿ ರಚಿತವಾಗಿರುವ ಆಡಳಿತ ಮಂಡಳಿಯನ್ನು ಹೊಂದಿದ್ದು ಆಡಳಿತ ವರ್ಗದ ಅಧಿಕಾರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿ ಸಂಸ್ಥೆಯ ಬರವಣಿಗೆಯಲ್ಲಿರುವ ಸಂವಿಧಾನದಲ್ಲಿ ನಿರೂಪಿತವಾಗಿರಬೇಕು.
7. ಸಂಸ್ಥೆಯು ಯಾವುದೇ ಜಾತಿ, ಪಂಥ, ಮತ ಮತ್ತು ಭಾಷೆಗಳನ್ನು ಪರಿಗಣಿಸದೇ ಎಲ್ಲರಿಗೂ ಸೌಲಭ್ಯ ಒದಗಿಸಬೇಕು.
8. ಕೇಂದ್ರ ಸರ್ಕಾರವು ದೃಷ್ಟಿದೋಷ, ಶ್ರವಣದೋಷ, ಬುದ್ಧಿಮಾಂದ್ಯ, ಮಾನಸಿಕ ಅಸ್ವಸ್ಥರ ಹಾಗೂ ಇತರೆ ವಿಶೇಷ ಶಾಲೆ ಹಾಗೂ ವೃತ್ತಿ ತರಬೇತಿ ಕೇಂದ್ರಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳು ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗುತ್ತದೆ.

Karnataka State Government Disabled Employees Association
Renukaradhya S
Indresh R

## 2. ಇಂಟಿಗ್ರೇಟೆಡ್ ಪ್ರೋಗ್ರಾಂ ಫಾರ್ ಓಲ್ಡರ್ ಪರ್ಸನ್ಸ್(IPOP) ಯೋಜನೆಯಡಿ ವೃದ್ಧಾಶ್ರಮಗಳು, ಮೊಬೈಲ್ ಮೆಡಿಕೇರ್ ಸೆಂಟರ್, ಹಗಲು ಯೋಗಕ್ಷೇಮ ಕೇಂದ್ರಗಳು ಮತ್ತು ಡಿಮೆನ್ಷಿಯ ಹಗಲು ಯೋಗಕ್ಷೇಮ ಕೇಂದ್ರಗಳು ಇತ್ಯಾದಿ.

**ಉದ್ದೇಶ:**

ಅರವತ್ತು ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ನಿರ್ಗತಿಕ ವೃದ್ಧರಿಗೆ ಉಚಿತ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿ ವೃದ್ಧರು ಸಮಾಜದಲ್ಲಿ ನಿಶ್ಚಿಂತೆಯಿಂದ ಬಾಳಲು ವೃದ್ಧಾಶ್ರಮಗಳನ್ನು ಮೊಬೈಲ್ ಮೆಡಿಕೇರ್ ಸೆಂಟರ್, ಡಿಮೆನ್ಷಿಯ ಮತ್ತು ಹಗಲು ಯೋಗಕ್ಷೇಮ ಕೇಂದ್ರಗಳನ್ನು ನಡೆಸುತ್ತಿರುವ ಮತ್ತು ನಡೆಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ಧನ ಸಹಾಯ ನೀಡುವ ಯೋಜನೆ.

**ಅರ್ಹತೆಗಳು:**

1. ಈ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೆ ತರಲಾಗುವುದು, ಈ ಯೋಜನೆಗೆ ಕೇಂದ್ರ ಸರ್ಕಾರವು ಅನುದಾನವನ್ನು ನೀಡುತ್ತಿದೆ.
2. ವೃದ್ಧಾಶ್ರಮ, ಮೊಬೈಲ್ ಮೆಡಿಕೇರ್ ಸೆಂಟರ್, ಡಿಮೆನ್ಷಿಯ ಮತ್ತು ಹಗಲು ಯೋಗಕ್ಷೇಮ ಕೇಂದ್ರಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ತಗಲುವ ಅನುಮೋದಿತ ಒಟ್ಟು ವೆಚ್ಚದಲ್ಲಿ ಸರ್ಕಾರದ ಪಾಲು ಶೇ.90 ರಷ್ಟಾಗಿದ್ದು ಉಳಿದ ಶೇ.10ರಷ್ಟು ವೆಚ್ಚವನ್ನು ಸ್ವಯಂ ಸೇವಾ ಸಂಸ್ಥೆಗಳು ತನ್ನ ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು.
3. ಸ್ವಯಂ ಸೇವಾ ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಕನಿಷ್ಠ ಎರಡು ವರ್ಷಗಳಾಗಿರಬೇಕು.
4. ಸ್ವಯಂ ಸೇವಾ ಸಂಸ್ಥೆಯು ಸಾಕಷ್ಟು ಸಿಬ್ಬಂದಿ ವರ್ಗದೊಂದಿಗೆ ಅಗತ್ಯವಾದ ಸೌಲಭ್ಯ ಸಂಪನ್ಮೂಲ ಹಾಗೂ ಅನುಭವ ಮತ್ತು ಆರ್ಥಿಕವಾಗಿ ಸಧೃಡತೆ ಹೊಂದಿರಬೇಕು.
5. ಸ್ವಯಂ ಸೇವಾ ಸಂಸ್ಥೆಯು ವೃದ್ಧಾಶ್ರಮ, ಮೊಬೈಲ್ ಮೆಡಿಕೇರ್ ಸೆಂಟರ್, ಡಿಮೆನ್ಷಿಯ ಮತ್ತು ಹಗಲು ಯೋಗಕ್ಷೇಮ ಕೇಂದ್ರಗಳನ್ನು ನಡೆಸುವಲ್ಲಿ ಅಥವಾ ಇಂತಹದೇ ಇನ್ನಿತರ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅನುಭವ ಹೊಂದಿರಬೇಕು ಅಥವಾ ವೃದ್ಧಾಶ್ರಮವನ್ನು ನಡೆಸಲು ಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು ಅದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬೇಕು.
6. ಸಂಸ್ಥೆಯು ಅಧಿಕೃತವಾಗಿ ರಚಿತವಾಗಿರುವ ಆಡಳಿತ ಮಂಡಳಿಯನ್ನು ಹೊಂದಿದ್ದು ಆಡಳಿತ ವರ್ಗದ ಅಧಿಕಾರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟ ಹಾಗೂ ಖಚಿತವಾಗಿ ಸಂಸ್ಥೆಯ ಬರವಣಿಗೆಯಲ್ಲಿರುವ ಸಂವಿಧಾನದಲ್ಲಿ ನಿರೂಪಿಸಿರಬೇಕು.
7. ಸಂಸ್ಥೆಯು ಯಾವುದೇ ಜಾತಿ, ಪಂಥ ಮತ್ತು ಭಾಷೆಗಳನ್ನು ಪರಗಣಿಸದೇ ಎಲ್ಲರಿಗೂ ಸೌಲಭ್ಯ ಒದಗಿಸಬೇಕು.
8. ಯಾವುದೇ ಸಂಸ್ಥೆಯು ವೃದ್ಧಾಶ್ರಮ, ಮೊಬೈಲ್ ಮೆಡಿಕೇರ್ ಸೆಂಟರ್, ಡಿಮೆನ್ಷಿಯ ಮತ್ತು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭ ಮಾಡಬೇಕಾದಲ್ಲಿ ವೃದ್ಧಾಶ್ರಮದಲ್ಲಿ ಕನಿಷ್ಠ 25 ಜನ ಫಲಾನುಭವಿಗಳು ಇರಬೇಕು.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳು ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗುತ್ತದೆ.

Karnataka State Government Disabled Employees Association
Renukaradhya S
Indresh R

## 3. ಸಿಪ್ಡಾ (SIPDA) ಯೋಜನೆಯಡಿ ವಿಕಲಚೇತನರಿಗೆ ಸಾರ್ವಜನಿಕ ಕಟ್ಟಡಗಳಲ್ಲಿ ಅಡೆತಡೆರಹಿತ ವಾತವರಣ ಕಲ್ಪಿಸುವುದು.

ಸಿಪ್ಡಾ (ಅಂಗವಿಕಲ ವ್ಯಕ್ತಿಗಳ–ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕ ಅಧಿನಿಯಮ–1995). ಯೋಜನೆಯ ಪ್ರಕಾರ ವಿಕಲಚೇತನರುಗಳು ಸಾರ್ವಜನಿಕ ಕಟ್ಟಡ ಹಾಗೂ ಸ್ಥಳಗಳಲ್ಲಿ ತಡೆ ರಹಿತವಾಗಿ ಸುಲಭವಾಗಿ ಓಡಾಡಲು ಅನುವಾಗುವಂತೆ (ರ್‍ಯಾಂಪ್) ಇಳಿಜಾರು ದಾರಿ, ಅಂಗವಿಕಲಸ್ನೇಹಿ ಶೌಚಾಲಯ, ಸೂಚನಾ ಫಲಕಗಳು, ಟ್ಯಾಕ್ಟೇಲ್ ಫ್ಲೋರಿಂಗ್, ಲಿಫ್ಟ್‌ಗಳಲ್ಲಿ ಬ್ರೈಲ್ ಸಂಕೇತ ಮತ್ತು ಶಬ್ದ ಸಂಕೇತಗಳನ್ನು ಕಲ್ಪಿಸುವುದು ಇದರ ಉದ್ದೇಶವಾಗಿರುತ್ತದೆ.

ಮಾನ್ಯ ಉಚ್ಚನ್ಯಾಯಲಯದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ:37434/09ಕ್ಕೆ ದಿನಾಂಕ: 09/04/2010 ರಲ್ಲಿ ನೀಡಿರುವ ತೀರ್ಪಿನನ್ವಯ ಎಲ್ಲಾ ಸಾರ್ವಜನಿಕ ಕಟ್ಟಡಗಳಲ್ಲಿ / ಕಛೇರಿಗಳಲ್ಲಿ ತಡೆರಹಿತ ವಾತಾವರಣವನ್ನು ಲೋಕೊಪಯೋಗಿ ಇಲಾಖೆ ನಿರ್ವಹಿಸತಕ್ಕದೆಂದು ಹಾಗೂ ವಿಕಲಚೇತನರು ಸುಲಭವಾಗಿ ಓಡಾಡಲು ಅನುಕೂಲವಾಗುವಂತೆ ಇಳಿಜಾರು ದಾರಿ, ಅಂಗವಿಕಲ ಸ್ನೇಹಿ ಶೌಚಾಲಯ, ಸೂಚನಾ ಫಲಕಗಳು, ಟ್ಯಾಕ್ಟೇಲ್ ಫ್ಲೋರಿಂಗ್, ಲಿಫ್ಟ್‌ಗಳಲ್ಲಿ ಬ್ರೈಲ್ ಸಂಕೇತ ಮತ್ತು ಶಬ್ದಸಂಕೇತಗಳನ್ನು ಎಲ್ಲಾ ಸಾರ್ವಜನಿಕ ಕಟ್ಟಡಗಳಲ್ಲಿ ನಿರ್ಮಿಸಲು ಸೂಚಿಸಲಾಗಿರುತ್ತದೆ. ಅದರಂತೆ ದಿನಾಂಕ:20.09.2010 ರ ರಾಜ್ಯಸರ್ಕಾರದ ಸುತ್ತೋಲೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರು ಸರ್ಕಾರಿ ಕಛೇರಿಗಳ ಕಟ್ಟಡ ಕಟ್ಟುವ ನಕ್ಷೆಯಲ್ಲಿ ಅಂಗವಿಕಲರಿಗೆ ಇಳಿಜಾರು ವ್ಯವಸ್ಥೆ ಹಾಗೂ ವಾಹನ ನಿಲುಗಡೆಗೆ ಸೂಕ್ತ ಸ್ಥಳ ವ್ಯವಸ್ಥೆ ಕಲ್ಪಿಸಿ ಕಟ್ಟಡ ನಿರ್ಮಾಣ ಮಾಡುವಂತೆ, ಪ್ರಸ್ತಾವನೆಗಳನ್ನು ಲೋಕೋಪಯೋಗಿ ಇಲಾಖೆಗೆ, ಸಂಬಂಧಿಸಿದ ಇಲಾಖೆಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಅಧೀನ ಕಛೇರಿಗೆ ಸೂಕ್ತ ನಿರ್ದೇಶನ ನೀಡುವಂತೆ ಎಲ್ಲಾ ಇಲಾಖೆಯ ಮುಖಸ್ಥರುಗಳಿಗೆ ಸೂಚಿಸಿರುತ್ತಾರೆ.

Karnataka State Government Disabled Employees Association
Renukaradhya S
Indresh R

## 4. ಅಡಿಪ್ (ಅಸಿಸ್ಟಿವ್ ಡಿವೈಸಸ್ ಫಾರ್ ಪರ್ಸನ್ಸ್ ವಿತ್ ಡಿಸೆಬಿಲಿಟೀಸ್) ಯೋಜನೆ:

ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತೆ ಮತ್ತು ಸಬಲೀಕರಣ ಮಂತ್ರಾಲಯದ ವತಿಯಿಂದ ಅಡಿಪ್ (ವಿಕಲಚೇತನ ವ್ಯಕ್ತಿಗಳಿಗೆ ಸಾಧನ ಸಲಕರಣಗಳ ಸೌಲಭ್ಯ) ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ವಿವಿಧ ರೀತಿಯ ವಿಕಲಚೇತನರುಗಳಿಗೆ ಅವರುಗಳ ಅಗತ್ಯತೆಗನುಸಾರ ಅವಶ್ಯವಿರುವ ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಉಚಿತವಾಗಿ/ರಿಯಾಯಿತಿ ದರದಲ್ಲಿ ಒದಗಿಸುವುದು ಈ ಯೋಜನೆ ಮೂಲ ಉದ್ದೇಶವಾಗಿದೆ.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳು ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗುತ್ತದೆ.

### ಸೌಲಭ್ಯ ಪಡೆಯಲು ಫಲಾನುಭವಿಗೆ ಇರಬೇಕಾದ ಅರ್ಹತೆಗಳು :

- ಅಂಗವಿಕಲತೆಯ ಪ್ರಮಾಣ ಶೇ.40ಕ್ಕಿಂತ ಹೆಚ್ಚಿರುವ ವೈದ್ಯಕೀಯ ಪ್ರಮಾಣ ಪತ್ರ.
- ಮಾಸಿಕ ಆದಾಯ ರೂ.20000/–ಗಳಿಗಿಂತ ಮೀರಿರಬಾರದು.
- ಅವಲಂಬಿತರಾದಲ್ಲಿ ಅವರ ಪೋಷಕರ ಆದಾಯವು ಮಾಸಿಕ ರೂ.20000/–ಗಳಿಗಿಂತ ಮೀರಿರಬಾರದು.
- ಈ ಯೋಜನೆಯಡಿ ಸೌಲಭ್ಯ ಪಡೆಯಲು ಯಾವುದೇ ಮೂಲಗಳಿಂದ ಸಾಧನ ಸಲಕರಣೆಗಳನ್ನು ಕನಿಷ್ಠ 3 ಅವಧಿಯಲ್ಲಿ ಪಡೆದಿರಬಾರದು. 12 ವರ್ಷಕ್ಕಿಂತ ಕಡಿಮೆಯಿರುವ ಮಗುವಿಗೆ ಈ ಮಿತಿಯನ್ನು ಒಂದು ವರ್ಷಕ್ಕೆ ನಿಗದಿಪಡಿಸಿದೆ.
- ವಿಕಲಚೇತನರಿಗೆ ಒದಗಿಸುವ ಪ್ರತಿ ಸಾಧನ ಸಲಕರಣೆಯ ಗರಿಷ್ಠ ಮೊತ್ತ ರೂ.10000/–ಗಳಾಗಿದ್ದು, 9ನೇ ತರಗತಿಯೊಳಗಿನ ವಿದ್ಯಾರ್ಥಿಗಳಿಗೆ ರೂ.12000/–ಗಳಿಗೆ ನಿಗದಿಪಡಿಸಿದೆ.

Karnataka State Government Disabled Employees Association
Renukaradhya C
Indresh R

### ಅಡಿಪ್ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಗಿರಬೇಕಾದ ಅರ್ಹತೆಗಳು :

- ಸಂಘಗಳ ನೊಂದಣಿ ಅಧಿನಿಯಮ 1860, ಟ್ರಸ್ಟ್ ಆಕ್ಟ್‌ನಡಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಡಿ.ಡಿ.ಆರ್.ಸಿ, ರಾಜ್ಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮ, ಜಿಲ್ಲಾ ಪಂಚಾಯತ್, ಪುರಸಭೆಗಳು, ಜಿಲ್ಲಾ ಸ್ವಾಯತ್ತ ಸಂಸ್ಥೆಗಳು, ನೆಹರು ಯುವಕ ಕೇಂದ್ರ, ನೊಂದಾಯಿತ ಆಸ್ಪತ್ರೆಗಳು ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ.
- ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗುತ್ತದೆ.
- ಪ್ರಸ್ತಾವನೆಯು ನಿಗದಿತ ಅರ್ಜಿ ನಮೂನೆ, 2 ವರ್ಷಗಳ ಲೆಕ್ಕತಪಾಸಣಾ ವರದಿ, ವಾರ್ಷಿಕ ವರದಿ, ಫಲಾನುಭವಿಗಳ ಪಟ್ಟಿ, ತಾಂತ್ರಿಕ ವರದಿ, ಇತ್ಯಾದಿಗಳನ್ನು ಸಲ್ಲಿಸಬೇಕು.

# 2014–15ನೇ ಸಾಲಿಗೆ ಹೊಸ ಯೋಜನೆಗಳು.

Karnataka State Government Disabled Employees Association
Renukaradhya.S
Indresh R

# 1. ನಿರಾಮಯ –ವೈದ್ಯಕೀಯ ವೆಚ್ಚ ಮರುಪಾವತಿ ಯೋಜನೆ

## ಪೀಠಿಕೆ:–

ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್–1999 ಆಕ್ಟ್ ಅಡಿ 04 ಬಗೆಯ ವಿಕಲಚೇತನರಿಗೆ (ಬುದ್ಧಿಮಾಂದ್ಯರು, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲರು) **"ನಿರಾಮಯ"** ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಯನ್ವಯ ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 04 ಬಗೆಯ ವಿಕಲಚೇತನ ವ್ಯಕ್ತಿಗಳಿಗೆ ಪ್ರಥಮ ಬಾರಿ ಒಂದುಸಲ ವಾರ್ಷಿಕ ರೂ.250/–ಗಳನ್ನು ಸರ್ಕಾರದ ವತಿಯಿಂದ ವಿಮಾ ಕಂತಾಗಿ ಪಾವತಿಸಿದಲ್ಲಿ ಪ್ರತಿ ವರ್ಷ ರೂ.1.00 ಲಕ್ಷದವರೆಗೆ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

## ಉದ್ದೇಶ:–

- ಈ ಯೋಜನೆಯನ್ನು ರಾಜ್ಯದಲ್ಲಿ ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.
- ಕರ್ನಾಟಕ ರಾಜ್ಯಾದ್ಯಾಂತ ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ–1999 ಆಕ್ಟ್‌ನಡಿ ಬರುವ 04 ಬಗೆಯ ವಿಕಲಚೇತನರಿಗೆ (ಬುದ್ಧಿಮಾಂದ್ಯರು, ಸೆರಬ್ರಲ್ ಪಾಲ್ಸಿ, ಆಟಿಸಂ, ಮತ್ತು ಬಹುವಿಧ ಅಂಗವಿಕಲರು) ವೈದ್ಯಕೀಯ ಸೌಲಭ್ಯ ಒದಗಿಸಲಾಗುವುದು.
- ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ವಿಕಲಚೇತನ ವ್ಯಕ್ತಿಗಳಿಗೆ ಪ್ರತಿ ವರ್ಷ 1.00 ಲಕ್ಷದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಪಡೆಯಲು ಅವಕಾಶವಿದೆ.
- ವಿಕಲಚೇತನ ವ್ಯಕ್ತಿಗಳ ಮಾನಸಿಕ ಮತ್ತು ದೈಹಿಕ ಮಟ್ಟ ಹೆಚ್ಚಿಸಲು ಸಹಕಾರ ಕಲ್ಪಿಸುವುದು.
- ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್ ಆಕ್ಟ್ ನಡಿ 04 ಬಗೆಯ ವಿಕಲಚೇತನರು ವೈದ್ಯಕೀಯ ಶುಶ್ರೂಷೆ ಪಡೆಯಲು ಅವಕಾಶ ಕಲ್ಪಿಸಿದೆ.

Karnataka State Government Disabled Employees Association
Renukaradhya S
Indresh R

## 2. ಎಸ್.ಎಸ್.ಎಲ್.ಸಿ ಹಾಗೂ ನಂತರದ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ವಿತರಣೆ:

**ಸರ್ಕಾರಿ ಆದೇಶ ಸಂ. ಮಮಇ–113, ಪಿ.ಹೆಚ್.ಪಿ–2014 ಬೆಂಗಳೂರು ದಿನಾಂಕ:3–7–2014**

**ಪೀಠಿಕೆ:–**

1 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಸಾಮಾನ್ಯ ಪಠ್ಯ ಕ್ರಮವನ್ನು ಬ್ರೈಲ್ ಲಿಪಿಯಲ್ಲಿ ಮುದ್ರಿಸಿ ಉಚಿತವಾಗಿ ಸರ್ಕಾರದ ವತಿಯಿಂದ ನೀಡಲಾಗುತ್ತಿದೆ. ರಾಜ್ಯದಲ್ಲಿ ಏಕೈಕ ಬ್ರೈಲ್ ಮುದ್ರಣಾಲಯವಿರುವುದರಿಂದ ಎಸ್.ಎಸ್.ಎಲ್.ಸಿ ಹಾಗೂ ನಂತರದ ವಿದ್ಯಾರ್ಥಿಗಳಿಗೆ ಪಠ್ಯಕ್ರಮಗಳನ್ನು ಮುದ್ರಿಸಿಕೊಡಲು ಸಾಧ್ಯವಾಗುತ್ತಿಲ್ಲ. ವಿಶ್ವವಿದ್ಯಾನಿಲಯಗಳಿಗೆ ಅನುಸಾರವಾಗಿ ಪಠ್ಯಕ್ರಮಗಳು ಬೇರೆ ಬೇರೆಯಾಗಿರುವುದರಿಂದ ಅವರುಗಳಿಗೆ ಬ್ರೈಲ್ ಲಿಪಿಯಲ್ಲಿ ಪಠ್ಯ ಪುಸ್ತಕಗಳನ್ನು ಮುದ್ರಿಸಿಕೊಡಲು ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ದೃಷ್ಟಿಹೀನ ವಿಕಲಚೇತನ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಲು ಟಾಕಿಂಗ್ ಲ್ಯಾಪ್‌ಟಾಪ್ ನೀಡುವ ಯೋಜನೆಯನ್ನು 2014–15ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

**ಉದ್ದೇಶ:–**

- ಎಸ್.ಎಸ್.ಎಲ್.ಸಿ ಹಾಗೂ ನಂತರದ ನಂತರದ ಎಲ್ಲಾ ಅಂಧ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಒದಗಿಸುವುದು.
- ಅಂಧ ವಿದ್ಯಾರ್ಥಿಗಳಲ್ಲಿ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಿ ಸಮಾಜದ ಮುಖ್ಯವಾಹಿನಿಗೆ ತರಲು ಸಹಕಾರಿಯಾಗಿರುತ್ತದೆ.
- ಬೇರೆಯುವರ ಅವಲಂಬನೆಯಿಲ್ಲದೇ ತಮ್ಮ ಶಿಕ್ಷಣವನ್ನು ತಾವೇ ಮುಂದುವರೆಸಲು ಸಹಕಾರಿಯಾಗುತ್ತದೆ.
- ಅಂಧ ವಿದ್ಯಾರ್ಥಿಗಳು ಮಧ್ಯಂತರದಲ್ಲೇ ವ್ಯಾಸಂಗವನ್ನು ಮೊಟಕುಗೊಳಿಸದಂತೆ ತಡೆಗಟ್ಟಬಹುದು.
- ಯೋಜನೆಯು ಸರ್ಕಾರದ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ತರಲಾಗುವುದು.

Karnataka State Government Disabled Employees Association
Renukaradhya S
Indresh R

**ಷರತ್ತುಗಳು:–**

- ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು.
- ಯೋಜನೆಯ ಸೌಲಭ್ಯ ಪಡೆಯಲು ಯಾವುದೇ ಆದಾಯಮಿತಿ ಇರುವುದಿಲ್ಲ.
- ವ್ಯಾಸಂಗ ಮಾಡುತ್ತಿರುವ ಬಗ್ಗೆ ಸಂಬಂಧಿತ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪತ್ರ ಒದಗಿಸಬೇಕು.
- ಸರ್ಕಾರ ನೀಡುವ ಲ್ಯಾಪ್‌ಟಾಪ್‌ನ್ನು ಯಾವುದೇ ಕಾರಣಕ್ಕೂ ಪರಭಾರೆ ಮಾಡಬಾರದು.
- ಜೀವಿತ ಕಾಲದಲ್ಲಿ ಒಂದು ಬಾರಿ ಈ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
- ಬೇರೆ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಲ್ಯಾಪ್‌ಟಾಪ್ ಪಡೆದಿದ್ದಲ್ಲಿ ಅರ್ಹರಿರುವುದಿಲ್ಲ. ಈ ಬಗ್ಗೆ ಸ್ವಯಂ ಘೋಷಿತ ದೃಢೀಕರಣ ನೀಡಬೇಕು.
- ಒಂದು ವೇಳೆ ಹೆಚ್ಚಿನ ಫಲಾನುಭವಿಗಳಿಂದ ಬೇಡಿಕೆ ಬಂದಲ್ಲಿ ಮೊದಲು ಶೇ.100ರಷ್ಟು ದೃಷ್ಟಿಹೀನತೆ ಇರುವ, ಪದವಿ ಹಾಗೂ ಪದವಿ ನಂತರದ ರೆಗ್ಯುಲರ್ ಕೋರ್ಸ್ ಮಾಡುತ್ತಿರುವವರಿಗೆ ಆದ್ಯತೆ ನೀಡಲಾಗುವುದು. ತದನಂತರ ಶೇ.100ಕ್ಕಿಂತ ಕಡಿಮೆ ಇರುವ ಪ್ರಕರಣಗಳಲ್ಲಿ ಹೆಚ್ಚಿನ ದೃಷ್ಟಿಹೀನತೆ ಇರುವವರಿಗೆ ಮೊದಲ ಆದ್ಯತೆ ನೀಡಿ ನಂತರ ಕಡಿಮೆ ದೃಷ್ಟಿಹೀನತೆ ಹೊಂದಿರುವವರಿಗೆ ನೀಡುವುದು.

# 3. ತೀವ್ರತರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ನೀಡುವುದು

**ಸರ್ಕಾರಿ ಆದೇಶ ಸಂ. ಮಮಇ–111, ಪಿ.ಹೆಚ್.ಪಿ–2014 ಬೆಂಗಳೂರು ದಿನಾಂಕ:4–7–2014**

**ಪೀಠಿಕೆ:–**

ರಾಜ್ಯದ 2011ರ ಜನಗಣತಿಯ ಪ್ರಕಾರ 20 ರಿಂದ 60ರ ವಯೋಮಾನದ 166726 ದೈಹಿಕ ವಿಕಲಚೇತನರಲ್ಲಿ ಶೇ.30 ರಷ್ಟು ವಿಕಲಚೇತನರು ತೀವ್ರತರನಾದ ವಿಕಲಚೇತನರಾಗಿರುತ್ತಾರೆ. ಅವರುಗಳು ಉದ್ಯೋಗ ನಿರ್ವಹಿಸುವ / ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಿಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ಬರಲು ಚಲನವಲನಕ್ಕೆ ಅಡೆತಡೆಗಳಿರುತ್ತವೆ. ಆದ್ದರಿಂದ ಅವರ ಚಲನವಲನಕ್ಕೆ ಅನುಕೂಲವಾಗುವಂತೆ ಯಂತ್ರಚಾಲಿತ ದ್ವಿಚಕ್ರ ವಾಹನ ನೀಡುವ ಯೋಜನೆ 2014–15ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

**ಮಾರ್ಗಸೂಚಿ :–**

- ವಿಕಲಚೇತನ ವ್ಯಕ್ತಿಗಳು ಭಾರತದ ಪ್ರಜೆಯಾಗಿದ್ದು ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳು ವಾಸವಾಗಿರಬೇಕು. 20 ರಿಂದ 60ರ ವಯೋಮಾನದ ತೀವ್ರತರನಾದ ದೈಹಿಕ ವಿಕಲಚೇತನರಿಗೆ ಜೀವಿತ ಕಾಲದಲ್ಲಿ 1 ಬಾರಿ ಮಾತ್ರ ಸೌಲಭ್ಯ ಕಲ್ಪಿಸಲಾಗಿದೆ.

- ಈ ಯೋಜನೆಯ ಸೌಲಭ್ಯ ಪಡೆಯಲು ಕುಟುಂಬ ವಾರ್ಷಿಕ ಆದಾಯ ರೂ. 2 ಲಕ್ಷಗಳಿಗಿಂತ ಕಡಿಮೆಯಿರಬೇಕು.

- ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು. ಇತರ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಯಂತ್ರಚಾಲಿತ ದ್ವಿಚಕ್ರವಾಹನ ಪಡೆದಿದ್ದಲ್ಲಿ ಅಂತಹವರು ಅರ್ಹರಾಗಿರುವುದಿಲ್ಲ.

- ಈ ಸೌಲಭ್ಯ ಪಡೆಯುವ ದೈಹಿಕ ವಿಕಲಚೇತನರು ಶೇ. 75% ಕ್ಕಿಂತ ಹೆಚ್ಚಿನ ದೈಹಿಕ ವಿಕಲಚೇತನರಾಗಿರಬೇಕು ಹಾಗೂ ಸೊಂಟದ ಕೆಳಗೆ ಅಂದರೆ ಎರಡು ಕಾಲುಗಳಲ್ಲಿ ಸ್ವಾಧೀನ ಕಳೆದುಕೊಂಡಿರುವ, ಎರಡು ಕೈಗಳು ಸ್ವಾಧೀನದಲ್ಲಿರುವ ಹಾಗೂ ಇತರೆ ಎಲ್ಲಾ ರೀತಿಯಲ್ಲಿ ಸದೃಢವಾಗಿರುವ ವಿಕಲಚೇತನರಾಗಿರಬೇಕು. ಇಂತಹ ನ್ಯೂನತೆಯನ್ನು ಹೊಂದಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮೊದಲ ಆದ್ಯತೆ ಮೇಲೆ ಈ ಸೌಲಭ್ಯ ನೀಡಬಹುದು.

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್‌ರವರ ಅಧ್ಯಕ್ಷತೆಯಲ್ಲಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವೈದ್ಯಾಧಿಕಾರಿಗಳು, ಆರೋಗ್ಯ ಇಲಾಖೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು

Karnataka State Government Disabled Employees Association
Renukaradhya C
Indresh R

ಹಾಗೂ ದೈಹಿಕ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರ ಸಮಿತಿಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

- ಯಂತ್ರಚಾಲಿತ ದ್ವಿಚಕ್ರವಾಹನವನ್ನು ಅವರ ಜೀವಿತಾವಧಿಯಲ್ಲಿ ಯಾವುದೇ ಕಾರಣಕ್ಕೆ ಪರಭಾರೆ ಮಾಡಬಾರದು, ಮಾಡಿದ್ದು ಕಂಡುಬಂದಲ್ಲಿ ಅಂತಹವರ ಮೇಲೆ ಕಾನೂನು ಕ್ರಮ ಜರುಗಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

- ಈ ಸೌಲಭ್ಯ ಪಡೆಯಲಿಚ್ಛಿಸುವ ವಿಕಲಚೇತನರು ದ್ವಿಚಕ್ರವಾಹನ ಚಾಲನೆ ಮಾಡುವ ಪರವಾನಗಿ ಪತ್ರ ಪಡೆದಿರಬೇಕು.

- ವಿಕಲಚೇತನರಿಗೆ ನೀಡುವ ದ್ವಿಚಕ್ರವಾಹನವನ್ನು ಸಾರಿಗೆ ಇಲಾಖೆಯಿಂದ ನೋಂದಣಿ ಮಾಡಿಸಿ ನೀಡಬೇಕು. ಆರ್.ಸಿ. ಪುಸ್ತಕದ ಪ್ರತಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನೀಡಬೇಕು ಹಾಗೂ ಆರ್.ಸಿ. ಪುಸ್ತಕದಲ್ಲಿ "ಫಲಾನುಭವಿ ಜೀವಿತವಾಗಿರುವವರೆಗೆ ಸರ್ಕಾರ ಮಂಜೂರು ಮಾಡುವ ವಾಹನ ಮರು ಮಾರಾಟ ಮತ್ತು ವರ್ಗಾವಣೆ ಮಾಡುವಂತಿಲ್ಲ" ಎಂದು ನಮೂದಿಸಬೇಕು.

Karnataka State Government Disabled Employees Association
Renukaradhya S
Indresh R

# 4. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು

**ಸರ್ಕಾರಿ ಆದೇಶ ಸಂ. ಮಮಇ-106, ಪಿ.ಹೆಚ್.ಪಿ-2014 ಬೆಂಗಳೂರು ದಿನಾಂಕ:13-6-2014**

## ಉದ್ದೇಶ:-

3 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರನಾದ ಬುದ್ಧಿಮಾಂದ್ಯರ ಪಾಲನೆಗಾಗಿ ಬೆಂಗಳೂರು ನಗರದಲ್ಲಿ ಪ್ರಾಯೋಗಿಕವಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ತನ್ಮೂಲಕ ಇಂತಹ ಮಕ್ಕಳ ಪೋಷಕರಿಗೆ ಸಮರ್ಪಕವಾಗಿ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಸಹಕಾರ ನೀಡಲಾಗುವುದು. ಸದರಿ ಯೋಜನೆಯನ್ನು ಸರ್ಕಾರದ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ತರಲಾಗಿದೆ.

## ಷರತ್ತುಗಳು:-

- ಹಗಲು ಯೋಗಕ್ಷೇಮ ಕೇಂದ್ರಗಳಲ್ಲಿ ದಾಖಲಾಗುವ ಮಕ್ಕಳ ಪೋಷಕರು, ಉದ್ಯೋಗದಲ್ಲಿ ತೊಡಗಿರುವ ಬಗ್ಗೆ ದೃಢೀಕರಣ ಸಲ್ಲಿಸುವುದು.
- ಅರ್ಹ ಮಕ್ಕಳನ್ನು ಹಗಲು ವೇಳೆಯಲ್ಲಿ ಮಾತ್ರ ಕೇಂದ್ರದಲ್ಲಿ ಬಿಡಲು ಅವಕಾಶವಿರುತ್ತದೆ.
- ಬೆಂಗಳೂರು ನಗರದ 6 ರಿಂದ 18 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಬುದ್ಧಿಮಾಂದ್ಯರು, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರನಾದ ವಿಕಲಚೇತನ ಮಕ್ಕಳಿಗೆ ಸೌಲಭ್ಯವನ್ನು ಒದಗಿಸಲಾಗುವುದು.
- ಈ ಯೋಜನೆಯನ್ನು ಯಾವುದೇ ಆದಾಯಮಿತಿಗೆ ಒಳಪಡಿಸಿರುವುದಿಲ್ಲ.
- ಈ ಯೋಜನೆಯಲ್ಲಿ 2 ಮಕ್ಕಳಿಗೆ ಒಬ್ಬ ವಿಶೇಷ ಶಿಕ್ಷಕರಂತೆ ಶಿಕ್ಷಣ ನೀಡಲು ಅವಕಾಶ ಕಲ್ಪಿಸಿದೆ.
- ಪ್ರತಿ ಕೇಂದ್ರದಲ್ಲಿ 25 ಮಕ್ಕಳು ಮಾತ್ರ ಇರಲು ಅವಕಾಶ ಕಲ್ಪಸಲಾಗಿದೆ.
- ಇಲಾಖೆಯಿಂದ ಅನುಮತಿಯನ್ನು ಪಡೆದ ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
- ಸಹಾಯಧನ ಪಡೆಯಲು ಸಂಸ್ಥೆಗಳು ಅರ್ಜಿಗಳನ್ನು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರ ಮಟ್ಟದಲ್ಲಿ ರಚಿಸಲಾದ ಸಮಿತಿಯ ಮೂಲಕ ಆಯ್ಕೆ ಮಾಡಿ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

Karnataka State Government Disabled Employees Association
Renukaradhya S
Iiutesh R

# 5. ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ

2011ರ ಜನಗಣತಿಯ ಪ್ರಕಾರ 18 ರಿಂದ 40ರ ವಯೋಮಿತಿಯಲ್ಲಿ 4,37,903 ವಿಕಲಚೇತನರಿದ್ದು, ವಿಕಲಚೇತನರಿಗಾಗಿ 'ಎ' ಅಂಡ್ 'ಬಿ' ವೃಂದದಲ್ಲಿ ಶೇ.3ರಷ್ಟು ಮೀಸಲಾತಿ ಹಾಗೂ 'ಸಿ' ಅಂಡ್ 'ಡಿ' ವೃಂದದಲ್ಲಿ ಶೇ.5ರಷ್ಟು ಮೀಸಲಾತಿ ನಿಗದಿಪಡಿಸಲಾಗಿದೆ. ಆದರೆ ಎಲ್ಲಾ ವಿಕಲಚೇತನರಿಗೆ ಉದ್ಯೋಗವಕಾಶಗಳು ಲಭ್ಯವಾಗುತ್ತಿಲ್ಲ. ಈ ವಯೋಮಾನದ ವಿಕಲಚೇತನರಿಗೆ ಸಮಾಜ ಹಾಗೂ ಕುಟುಂಬದಲ್ಲಿ ಸಮಾನತೆ ದೊರೆಯದಿರುವುದರಿಂದ ಅವರುಗಳು ಖಿನ್ನತೆಗೊಳಗಾಗುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರತಿ ಜನತಾ ದರ್ಶನದಲ್ಲಿ ಸಾಕಷ್ಟು ವಿಕಲಚೇತನರು ಸರ್ಕಾರಿ ಉದ್ಯೋಗ ಕೋರಿ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸುತ್ತಿದ್ದಾರೆ. ಆದರೆ ಎಲ್ಲಾ ವಿಕಲಚೇತನರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸುವ ಅವಕಾಶವಾಗುತ್ತಿಲ್ಲ ಕೇವಲ ಬೆರಳಣಿಕೆಯಷ್ಟು ವಿಕಲಚೇತನರಿಗೆ ಮಾತ್ರ ಉದ್ಯೋಗವಕಾಶಗಳು ಲಭ್ಯವಾಗುತ್ತಿವೆ. ಇನ್ನುಳಿದ ಅಂಗವಿಕಲರು ಯಾವುದೇ ಉದ್ಯೋಗಗಳು ದೊರೆಯದೆ ತಮ್ಮ ಕುಟುಂಬ ವರ್ಗದವರಿಗೆ ಹೊರೆಯಾಗಿರುವ ಸಂದರ್ಭಗಳು ಹೆಚ್ಚಿರುತ್ತವೆ. ಅಂಗವಿಕಲರ ಅಧಿನಿಯಮ 1995ರ ಸೆಕ್ಷನ್ 68ರ ಪ್ರಕಾರ ಆಯಾ ರಾಜ್ಯ ಸರ್ಕಾರಗಳು ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ನೀಡಲು ಅವಕಾಶ ಕಲ್ಪಿಸಿಕೊಳ್ಳಬೇಕೆಂದು ತಿಳಿಸಲಾಗಿದೆ. ಈ ಹಿನ್ನಲೆಯಲ್ಲಿ ಎಸ್.ಎಸ್.ಎಲ್.ಸಿ. ನಂತರದ ವಿದ್ಯಾರ್ಹತೆ ಹೊಂದಿರುವ ವಿಕಲಚೇತನರಿಗೆ ಉದ್ಯೋಗ ಭತ್ಯೆಯನ್ನು ನೀಡುವುದು ಸೂಕ್ತವೆಂದೂ ಉದ್ದೇಶಿಸಿ, ಯೋಜನೆ ರೂಪಿಸಲಾಗುತ್ತಿದೆ.

Karnataka State Government Disabled Employees Association
Renukaradhya S
Indresh R

# ವಿಕಲಚೇತನರಿಗೆ
# ಇತರೆ
# ಇಲಾಖೆಯಿಂದ
# ದೊರಕುತ್ತಿರುವ
# ಸೌಲಭ್ಯಗಳು

Karnataka State Government Disabled Employees Association
Renukaradhya S
Indresh R

# ವಿಕಲಚೇತನರಿಗೆ ಇತರೆ ಇಲಾಖೆಯಿಂದ ದೊರಕುತ್ತಿರುವ ಸೌಲಭ್ಯಗಳು

## 1. ಬಡತನ ರೇಖೆಗಿಂತ ಕೆಳಗಿರುವ ಅಂಗವಿಕಲ ವ್ಯಕ್ತಿಗಳಿಗೆ ವಿವಿಧ ಇಲಾಖೆಗಳಲ್ಲಿರುವ ಯೋಜನೆಗಳಲ್ಲಿ ಶೇ.3ರಷ್ಟು ಅನುದಾನ ಮೀಸಲಾತಿ

ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಸೆಕ್ಷನ್ 43ರಲ್ಲಿ ಎಲ್ಲಾ ಇಲಾಖೆಗಳು, ನಿಗಮ ಮಂಡಳಿಗಳು ತಮಗೆ ವಾರ್ಷಿಕವಾಗಿ ನಿಗದಿಯಾಗಿರುವ ಅನುದಾನದಲ್ಲಿ ಶೇ.3ರಷ್ಟು ಅನುದಾನವನ್ನು ವಿಕಲಚೇತನರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ವೈದ್ಯಕೀಯ ಪುನರ್ವಸತಿ ಕಾರ್ಯಕ್ರಮಗಳಿಗಾಗಿ ವೆಚ್ಚಭರಿಸಲು ತಿಳಿಸಲಾಗಿದೆ. ಅದರಂತೆ, ನಗರಾಭಿವೃದ್ಧಿ ಇಲಾಖೆಯು ಸುತ್ತೋಲೆ ಸಂಖ್ಯೆ:ನಅಇ/93/ಸಿ.ಎಸ್.ಎಸ್./2009 ದಿನಾಂಕ:28-10-2010 ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಸುತ್ತೋಲೆ ಸಂಖ್ಯೆ:ಅ.ಪ/74/ಜಿಪಸ/2011 ದಿ:01-04-2011ರಲ್ಲಿ ಆದೇಶಿಸಲಾಗಿದೆ. ಅದರಂತೆ, ವಿಕಲಚೇತನರು ಎಲ್ಲಾ ಇಲಾಖೆಗಳು, ನಿಗಮ ಮಂಡಳಿಗಳಲ್ಲಿನ ಯೋಜನೆಗಳಲ್ಲಿ ಹಾಗೂ ನಿವೇಶನ, ಮನೆ, ವಿಶೇಷ ಶಾಲೆಗಳನ್ನು ಸ್ಥಾಪಿಸಲು ನಿವೇಶನ ಇತ್ಯಾದಿ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

## 2. ಅಂಗವಿಕಲ ವ್ಯಕ್ತಿಗಳಿಗೆ ರಿಯಾಯಿತಿ ಬಸ್‌ಪಾಸ್:

ಅಂಗವಿಕಲತೆಯುಳ್ಳ ವ್ಯಕ್ತಿಗಳು ವಾರ್ಷಿಕವಾಗಿ ರೂ.660/-ಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಪಾವತಿಸಿ ತಮ್ಮ ವಾಸಸ್ಥಳದಿಂದ 100 ಕಿ.ಮೀ ವ್ಯಾಪ್ತಿಯೊಳಗೆ ಸಂಚರಿಸಲು ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ನೀಡಲಾಗುತ್ತಿದೆ.

ಸಂಪೂರ್ಣ ದೃಷ್ಟಿದೋಷವುಳ್ಳವರಿಗೆ ಕರ್ನಾಟಕ ರಾಜ್ಯಾದ್ಯಂತ ರಸ್ತೆ ಸಾರಿಗೆ ಬಸ್ಸುಗಳಲ್ಲಿ ಸಂಚರಿಸಲು ಉಚಿತವಾಗಿ ಬಸ್‌ಪಾಸ್ ನೀಡಲಾಗುತ್ತಿದೆ.

## 3. ಉದ್ಯೋಗದಲ್ಲಿ ಮೀಸಲಾತಿ:

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ನಿಗಮ ಮಂಡಳಿಗಳಲ್ಲಿ ನೇರನೇಮಕಾತಿ ಹುದ್ದೆಗಳಲ್ಲಿ ವಿಕಲಚೇತನರು ಸರ್ಕಾರಿ ಉದ್ಯೋಗ ಪಡೆಯಲು ಅನುವಾಗುವಂತೆ 'ಎ' ಮತ್ತು 'ಬಿ' ವೃಂದದ ಹುದ್ದೆಗಳಲ್ಲಿ ಶೇ.3ರಷ್ಟು ಹಾಗೂ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳಲ್ಲಿ ಶೇ5ರಷ್ಟು ಹುದ್ದೆಗಳನ್ನು ಸಮತಳ ಮೀಸಲಾತಿ ನೀಡಲಾಗುತ್ತಿದೆ.

## 4. ಅಂಧ ಮತ್ತು ದೈಹಿಕ ಅಂಗವಿಕಲ ಸರ್ಕಾರಿ ನೌಕರರಿಗೆ ಸಂಚಾರಿ ಭತ್ಯೆ

ರಾಜ್ಯ ಸರ್ಕಾರಿ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಧ ಮತ್ತು ದೈಹಿಕ ವಿಕಲಚೇತನ ಅಧಿಕಾರಿ/ನೌಕರರಿಗೆ ಅವರ ಚಲನವಲನಕ್ಕೆ ಅನುವಾಗುವಂತೆ ಅವರ ಮೂಲ ವೇತನದ ಶೇ.6ರಷ್ಟು ಸಂಚಾರಿ ಭತ್ಯೆಯನ್ನು ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ./12/ಎಸ್.ಆರ್.ಪಿ/2012(XI) ದಿನಾಂಕ:16-02-2013ರಲ್ಲಿ ಅವಕಾಶ ಕಲ್ಪಿಸಿದೆ.

Karnataka State Government Disabled Employees Association
Renukaradhya S
Indresh R

## 5. ಅಂಗವಿಕಲತೆಯುಳ್ಳ ರಾಜ್ಯ ಸರ್ಕಾರಿ ನೌಕರರು ಖರೀದಿಸುವ ಯಾಂತ್ರಿಕ ವಾಹನದ ಬೆಲೆಯ ಶೇ.25ರಷ್ಟನ್ನು ಹಿಂಬರಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 12 ಎಸ್.ಆರ್.ಪಿ 2012 (XI) ದಿನಾಂಕ: 10–06–2013ರಲ್ಲಿ ಅಂಗವಿಕಲತೆಯುಳ್ಳ ಸರ್ಕಾರಿ ನೌಕರರು ಕಛೇರಿಗೆ ಹೋಗಿ ಬರಲು ಬಳಸುವ ಮೋಟಾರು ಚಾಲಿತ/ಯಾಂತ್ರಿಕ (ಮೆಕಾನಿಕಲ್) ವಾಹನಗಳನ್ನು ಖರೀದಿಸಲು ಉಚಿತ ಸಹಾಯಧನವಾಗಿ, ವಿಶೇಷ ವಾಹನದ ಬೆಲೆಯ ಶೇ.25ರಷ್ಟನ್ನು ಗರಿಷ್ಠ ರೂ.25,000/–ಗಳ ಮಿತಿಗೊಳಪಟ್ಟು ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

## 6. ರಾಜ್ಯ ಸರ್ಕಾರಿ ನೌಕರರ ಅವಲಂಬಿತ ಅಂಧ ಮತ್ತು ಅಂಗವಿಕಲ ಮಕ್ಕಳಿಗೆ ಶಿಕ್ಷಣ ಭತ್ಯೆಯ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/12/ಎಸ್.ಆರ್.ಪಿ/2012(XIII)ರಲ್ಲಿ ವಿಶೇಷ ಸಂಯೋಜಿತ (integrated) ಅಥವಾ ಸಾಮಾನ್ಯ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಮತ್ತು ಗರಿಷ್ಠ 18 ವರ್ಷಗಳ ವಯೋಮಿತಿ ಮೀರದ ರಾಜ್ಯ ಸರ್ಕಾರಿ ನೌಕರರ ಅವಲಂಬಿತ ಅಂಧ ಅಥವಾ ಚಲನವೈಕಲ್ಯತೆ ಹೊಂದಿರುವ ಮಕ್ಕಳ ಶಿಕ್ಷಣಕ್ಕಾಗಿ ಒಂದು ಮಗುವಿಗೆ ಮಾಸಿಕ ತಲಾ ರೂ.500/–ಗಳಂತೆ ಗರಿಷ್ಠ ಎರಡು ಮಕ್ಕಳಿಗೆ ಶಿಕ್ಷಣ ಭತ್ಯೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

Karnataka State Government Disabled Employees Association
Renukaradhya S
Indresh R

## 7. ಚಲನವೈಕಲ್ಯ ಹೊಂದಿರುವ ಮಕ್ಕಳಿರುವ ಸರ್ಕಾರಿ ನೌಕರರಿಗೆ ಪೋಷಣಾ ಭತ್ಯೆಯ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ:

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/12/ಎಸ್.ಆರ್.ಪಿ/2012(XII) ರಲ್ಲಿ ಚಲನವೈಕಲ್ಯತೆ ಮತ್ತು ಅಂಗವಿಕಲತೆಯಿಂದಾಗಿ ಮನೆಯಲ್ಲಿಯೇ ಉಳಿದುಕೊಳ್ಳುವ ಹಾಗೂ ಶಾಲೆಗಳಿಗೆ ಹೋಗಲು ಅಸಮರ್ಥರಾಗಿ ಪೋಷಕರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ ಸರ್ಕಾರಿ ನೌಕರರ ಮಕ್ಕಳ ಪಾಲನೆ/ಪೋಷಣೆ ಮಾಡುವುದಕ್ಕಾಗಿ ಒಂದು ಮಗುವಿಗೆ ಮಾಸಿಕ ತಲಾ ರೂ.500/–ಗಳ ದರದಲ್ಲಿ ಗರಿಷ್ಠ ಎರಡು ಮಕ್ಕಳಿಗೆ ಮಾತ್ರ ಪೋಷಣಾ ಭತ್ಯೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ: ನಇ 93 ಸಿಎಸ್ಎಸ್ 2009

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, ಬೆಂಗಳೂರು
ದಿನಾಂಕ: 28.10.2010

# ಸುತ್ತೋಲೆ

**ವಿಷಯ:** ನಗರ ಸ್ಥಳೀಯ ಸಂಸ್ಥೆಗಳ ಅಂಗವಿಕಲರ ಕಲ್ಯಾಣ ನಿಧಿಯ ಆದಾಯ ಲೆಕ್ಕಾಚಾರ ಹಾಗೂ ನಿಧಿ ವಿನಿಯೋಗದ ಬಗ್ಗೆ ಮಾರ್ಗಸೂಚಿಗಳು

**ಉಲ್ಲೇಖ:**(1) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 220 ಜಿಇಎಲ್ 2009 ಬೆಂಗಳೂರು, ದಿನಾಂಕ: 26.-8-2009

(2) ಅಧಿಸೂಚನೆ ಸಂಖ್ಯೆ: WCD.08.PHP.2006 Dated:9/11/2006

(3) ಸುತ್ತೋಲೆ ಸಂಖ್ಯೆ: ನಇ 22 ಎಂಡಬ್ಲ್ಯೂಪಿ 2010 ದಿನಾಂಕ::18/02/2010.

(4) ಸುತ್ತೋಲೆ ಸಂಖ್ಯೆ: ಮಮಾಇ 14 ಪಿಹೆಚ್‌ಪಿ 2010 ದಿ:20/09/2010.

Karnataka State Government Disabled Employees Association
Renukaradhya S
Indresh R

*****

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 ಜಾರಿಯಲ್ಲಿದೆ. ಮುಂದುವರಿದು ಉಲ್ಲೇಖ (2)ರಲ್ಲಿ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) (ಕರ್ನಾಟಕ ತಿದ್ದುಪಡಿ) ನಿಯಮಗಳು 2006 ಜಾರಿಗೆ ಬಂದಿರುತ್ತದೆ. ಸದರಿ ನಿಯಮಗಳ ಅಧ್ಯಾಯ-4ಎ, ನಿಯಮ 28ಎ - ಅಂಗವಿಕಲ ವ್ಯಕ್ತಿಗಳಿಗೆ ಸೌಲಭ್ಯಗಳ - ಉಪ ನಿಯಮ (ii) ಅಡಿಯಲ್ಲಿ ಎಲ್ಲಾ ರಾಜ್ಯ ವಲಯ / ಜಿಲ್ಲಾ ವಲಯಗಳಲ್ಲಿ ಅನುಷ್ಠಾನಗೊಳಿಸಲಾಗುವ ಎಲ್ಲಾ ಬಡತನ ನಿರ್ಮೂಲನಾ ಯೋಜನೆ / ಅಭಿವೃದ್ಧಿ ಯೋಜನೆ / ಕಲ್ಯಾಣ ಯೋಜನೆ, ವಿದ್ಯಾಭ್ಯಾಸ, ಆರೋಗ್ಯ ಹಾಗೂ ಸಂಶೋಧನಾ ಯೋಜನೆಗಳಿಗೆ ಕೇಂದ್ರ ಮತ್ತು ಬಾಜ್ಯ ನೆರವಿನ ಯೋಜನೆಗಳನ್ನು ಒಳಗೊಂಡಂತೆ / ಎಲ್ಲಾ ಯೋಜನೆಗಳ ಅನುದಾನದಲ್ಲಿ ಶೇ.3ರಷ್ಟು ಅನುದಾನವನ್ನು ಅಂಗವಿಕಲ ವ್ಯಕ್ತಿಗಳ ಕಲ್ಯಾಣಕ್ಕೆ ವಿನಿಯೋಗಿಸುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) (ಕರ್ನಾಟಕ ತಿದ್ದುಪಡಿ) ನಿಯಮಗಳು 2006 ಜಾರಿಗೆ ಬಂದಿರುತ್ತದೆ. ಸದರಿ

ನಿಯಮಗಳ ಅಧ್ಯಾಯ-4ಎ, ನಿಯಮ 28ಎ – ಅಂಗವಿಕಲ ವ್ಯಕ್ತಿಗಳಿಗೆ ಸೌಲಭ್ಯಗಳ – ಉಪ ನಿಯಮ (ii) ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ರಾಜ್ಯದ ನಗರ ಪ್ರದೇಶಗಳಲ್ಲಿ ವಾಸಿಸುವ ಅಂಗವಿಕಲ ವ್ಯಕ್ತಿಗಳ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಮೂಲ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಆಯವ್ಯಯ ಸಂಪನ್ಮೂಲಗಳಲ್ಲಿ ಶೇ.3ಕ್ಕೆ ಕಡಿಮೆ ಇಲ್ಲದಂತೆ ಹಂಚಿಕೆ ಮಾಡತಕ್ಕದ್ದಾಗಿದೆ. ನಗರ ಸ್ಥಳೀಯ ಸಂಸ್ಥೆಗಳು ಈಗಾಗಲೇ ಶೇ.22.75ರಷ್ಟು ತಮ್ಮ ಆಯವ್ಯಯದ ಸಂಪನ್ಮೂಲಗಳನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಬಡ ಜನರ ಕಲ್ಯಾಣಕ್ಕಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ: ನಇ: 220: ಜಿಇಎಲ್: 2009 ದಿ:26.08.2009ರಲ್ಲಿ ನೀಡಿದ ಮಾರ್ಗಸೂಚಿಗಳನ್ವಯ ಈಗಾಗಲೇ ಮೀಸಲಿಡುವ ಪದ್ಧತಿಯನ್ನು ನಗರ ಪ್ರದೇಶದ ಅಂಗವಿಕಲ ವ್ಯಕ್ತಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಅನುಸರಿಸತಕ್ಕದ್ದಾಗಿದೆ.

ಮೇಲಿನ ಸುಧಾರಣ ಕ್ರಮಗಳ ಅನುಷ್ಠಾನಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಆದಾಯದ ಮೂಲಗಳಲ್ಲಿ ಹಂಚಿಕೆ ಮಾಡುವುದು ಕಡ್ಡಾಯವಾಗಿರುತ್ತದೆ. ಈ ನಿಟ್ಟಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕೆ ನಗರ ಸ್ಥಳೀಯ ಸಂಸ್ಥೆಗಳು ಮೀಸಲಿಡುತ್ತಿರುವ ಶೇ.22.75 ರಷ್ಟು ಆದಾಯ ಮತ್ತು ನಗರದ ಇತರೆ ಬಡ ಜನರ ಕಲ್ಯಾಣಕ್ಕಾಗಿ ಶೇ.7.25ರಷ್ಟು ತಮ್ಮ ಆದಾಯವನ್ನು ಮೀಸಲಿಡುವುದು ಕಡ್ಡಾಯವಾಗಿದ್ದು ಅದರಂತೆ ತಮ್ಮ ಆದಾಯದ ಶೇ.3ರಷ್ಟು ಆದಾಯವನ್ನು ಅಂಗವಿಕಲ ಕಲ್ಯಾಣಕ್ಕಾಗಿ ಮೀಸಲಿಡತಕ್ಕದ್ದಾಗಿದೆ.

ಸರ್ಕಾರದ ಸುತ್ತೋಲೆ ಸಂ: ನಇ: 220: ಜಿಇಎಲ್: 2009 ದಿ:26.08.2009ರಲ್ಲಿ ನೀಡಲಾಗಿರುವ ಮಾರ್ಗಸೂಚಿಗಳು ನಿಗದಿತ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿದ್ದು, ಸದರಿ ಸುತ್ತೋಲೆಯಲ್ಲಿ ವಸತಿ ನಿರ್ಮಾಣ, ಉದ್ಯೋಗ, ಶಿಕ್ಷಣ, ಆರೋಗ್ಯ ಹಾಗೂ ಮೂಲಭೂತ ಸೌಕರ್ಯಗಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಒದಗಿಸಬೇಕಾದ ವ್ಯಕ್ತಿಗತ ಹಾಗೂ ಸಮೂಹ ಅನುಕೂಲತೆಗಳನ್ನು ಪಟ್ಟಿ ಮಾಡಲಾಗಿರುತ್ತದೆ. ಪರಿಣಾಮವಾಗಿ ನಗರ ಸ್ಥಳೀಯ ಸಂಸ್ಥೆಗಳು ಹಂಚಿಕೆ ಮಾಡಲಾದ ಆಯವ್ಯಯ ಸಂಪನ್ಮೂಲಗಳನ್ನು ನಗರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯದಲ್ಲಿ ನಿಗದಿತ ಬಡತನ ನಿರ್ಮೂಲನಾ ಉದ್ದೇಶಗಳಿಗೆ ಮಾತ್ರ ಬಳಸುವುದು ಕಡ್ಡಾಯವಾಗಿರುತ್ತದೆ.

ನಗರದ ಅಂಗವಿಕಲರ ಕಲ್ಯಾಣಕ್ಕೆ ಹಂಚಿಕೆ ಮಾಡಲಾಗುವ ಆಯವ್ಯಯ ಸಂಪನ್ಮೂಲಗಳ ಬಳಕೆಯಲ್ಲಿಯೂ ಸಹಾ ಸುತ್ತೋಲೆ ಸಂ:ನಇ: 220: ಜಿಇಎಲ್: 2009 ದಿ:26.08.2009ರಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ನಗರ ಸ್ಥಳೀಯ ಸಂಸ್ಥೆಗಳು ಅನುಸರಿಸುವ ಅಗತ್ಯವಿರುತ್ತದೆ. ಅದರಂತೆ, ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

Karnataka State Government Disabled Employees Association
Renukaradhya S
Indresh R

## ಮಾರ್ಗ ಸೂಚಿಗಳು:

1. ನಗರ ಅಂಗವಿಕಲರ ಕಲ್ಯಾಣಕ್ಕಾಗಿ ಸ್ವೀಕೃತಿಗಳ ಭಾಗಾಂಶದಲ್ಲಿ ಶೇ.3ರಷ್ಟು ಮೊತ್ತವನ್ನು ನಿಗದಿಪಡಿಸುವ ಮುಂಚೆ ನಗರ ಸ್ಥಳೀಯ ಸಂಸ್ಥೆಯು ತನ್ನ ಆದಾಯದಿಂದ ಹೊರತುಪಡಿಸಬೇಕಾದ ಬಾಬ್ತುಗಳು

ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಯು ತನ್ನ ಸ್ವಂತ ಆದಾಯ, ರಾಜ್ಯ ಹಣಕಾಸು ಆಯೋಗದ ಅನುದಾನದ ಮುಕ್ತನಿಧಿ ಈ ಎಲ್ಲಾ ಮೂಲಗಳ ಸ್ವೀಕೃತಿಗಳು ಸೇರಿದಂತೆ ಈ ಕೆಳಗೆ

ಕಾಣಿಸಿದ ಬಾಬ್ತುಗಳನ್ನು ಹೊರತುಪಡಿಸಿ ಉಳಿದ ನಿವ್ವಳ ಸ್ವೀಕೃತಿಗಳಲ್ಲಿ ಒಟ್ಟಾರೆ ಶೇ.3ರಷ್ಟು ಮೊತ್ತವನ್ನು ಮೀಸಲಿಟ್ಟ ವಿನಿಯೋಗಿಸತಕ್ಕದ್ದು.

1. ಸಿಬ್ಬಂದಿ ಹಾಗೂ ಆಡಳಿತ ವೆಚ್ಚಗಳು – ನಿವ್ವಳ ವೇತನ, ಉಪದಾನ, ಮಜೂರಿ, ಲೇಖನ ಸಾಮಗ್ರಿಗಳು ಸೇರಿದಂತೆ.
2. ಸರ್ಕಾರ ಅಥವಾ ಇತರೆ ಇಲಾಖೆಗಳ ಪರವಾಗಿ ಸಂಗ್ರಹಿಸಿ ಮರುಪಾವತಿಸಬೇಕಾದ ಆರೋಗ್ಯ, ಶಿಕ್ಷಣ, ಭಿಕ್ಷುಕ, ಗ್ರಂಥಾಲಯ ಇತ್ಯಾದಿ ಸೇರಿದಂತೆ ಎಲ್ಲಾ ಉಪಕರಣಗಳು ಹಾಗೂ ಆದಾಯ ತೆರಿಗೆ, ವಾಣಿಜ್ಯ ತೆರಿಗೆ, ರಾಯಲ್ಟಿ ಇತ್ಯಾದಿ ಎಲ್ಲಾ ತೆರಿಗೆಗಳು.
3. ನಿರ್ದಿಷ್ಟ ಉದ್ದೇಶ ಅಥವಾ ಕಾಮಗಾರಿಗಳಿಗಾಗಿ ನಗರ ಸ್ಥಳೀಯ ಸಂಸ್ಥೆಗಳು ಪಡೆದ ಸಾಲಗಳು ಅಥವಾ ಬಂದ ಅನುದಾನಗಳಿಂದ ಭರಿಸಿದ ವೆಚ್ಚಗಳು.
4. ಸಾಲಗಳ ಹಾಗೂ ಬಡ್ಡಿಗಳ ಪಾವತಿ, ಮರುಪಾವತಿಗಳು (Refunds), ಮಾಫಿ/ಮನ್ನ (Rescinds User Charges).
5. ಬಳಕೆದಾರರ ವೆಚ್ಚಗಳು (User Charges) ನೀರು ಸರಬರಾಜು ದರ ಇತ್ಯಾದಿ.
6. ಹೊಸ ವಾಹನ, ಯಂತ್ರೋಪಕರಣ ಇತ್ಯಾದಿಗಳ ಖರೀದಿ.
7. ದುರಸ್ತಿ ಮತ್ತು ನಿರ್ವಹಣೆ – ವಾಹನ, ರಸ್ತೆ, ಕಟ್ಟಡ, ಹಾಸ್ಟೆಲ್ ಇತ್ಯಾದಿಗಳನ್ನೊಳಗೊಂಡಂತೆ.

**2. ವಾಸ್ತವಿಕ ಸ್ವೀಕೃತಿಗಳು ಹೆಚ್ಚು ಕಡಿಮೆಯಾದಾಗ ತೆಗೆದುಕೊಳ್ಳಬೇಕಾದ ಕ್ರಮಗಳು:**

ಆರ್ಥಿಕ ವರ್ಷದ ಅಂತ್ಯಕ್ಕೆ ಮೊದಲು ವಾಸ್ತವ ಸ್ವೀಕೃತಿಗಳನ್ನು ಗಣನೆಗೆ ತೆಗೆದುಕೊಂಡು ಸ್ವೀಕೃತಿಗಳ ಪ್ರಮಾಣ ಹೆಚ್ಚಾದಲ್ಲಿ ಇತರೆ ಅಂಗವಿಕಲರ ಕಲ್ಯಾಣ ನಿಧಿಯ ಭಾಗಾಂಶವನ್ನು ಅದಕ್ಕನುಗುಣವಾಗಿ ಹೆಚ್ಚಿಸಿಕೊಳ್ಳುವುದು ಅಥವಾ ಕಡಿಮೆಯಾದಲ್ಲಿ ಅದಕ್ಕನುಗುಣವಾಗಿ ಕಡಿಮೆ ಮಾಡಿ, ಪುನರ್ ಯೋಜಿಸಿ ವಿನಿಯೋಗಿಸತಕ್ಕದ್ದು.

Karnataka State Government Disabled Employees Association
Renukaradhya S
Indresh R

**3. ವರ್ಷಾಂತ್ಯದಲ್ಲಿ ಸ್ವೀಕೃತಿಗಳಲ್ಲಿನ ನಿಗದಿತ ಹಂಚಿಕೆಯಲ್ಲಿ ಖರ್ಚಾಗದೆ ಉಳಿದ ಅಂಗವಿಕಲರ ಕಲ್ಯಾಣ ನಿಧಿಯ ಮೊತ್ತವನ್ನು ಮುಂಬರುವ ವರ್ಷಗಳಲ್ಲಿ ವಿನಿಯೋಗಿಸುವ ವಿಧಾನ:**

ಅಂಗವಿಕಲರ ಕಲ್ಯಾಣ ನಿಧಿಯ ಮೊತ್ತವನ್ನು ಮುಂದಿನ ವರ್ಷಗಳಲ್ಲಿ ಮುಂದುವರೆಸುವ ಬದಲು ಆಯಾಯಾ ವರ್ಷದಲ್ಲಿಯೇ ವಿನಿಯೋಗಿಸಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳತಕ್ಕದ್ದು, ಅನಿವಾರ್ಯ ಕಾರಣಗಳಿಂದ ಅದೇ ವರ್ಷದಲ್ಲಿ ಅಂಗವಿಕಲರ ಕಲ್ಯಾಣ ನಿಧಿಯ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಅಥವಾ ವರ್ಷಾಂತ್ಯದಲ್ಲಿ ವಾಸ್ತವಿಕ ಆದಾಯದ ಮೇಲೆ ಅಂಗವಿಕಲರ ಕಲ್ಯಾಣ ನಿಧಿಯ ಬಾಬ್ತು ಪುನರ್ ಲೆಕ್ಕಾಚಾರ ಮಾಡಿದಾಗ, ಅಂದಾಜಿಗಿಂತ ಹೆಚ್ಚು ಮೊತ್ತವನ್ನು ಸಾಮಾನ್ಯ ನಿಧಿಯಿಂದ ಅಂಗವಿಕಲರ ಕಲ್ಯಾಣ ನಿಧಿಗೆ ವರ್ಗಾವಣೆ ಮಾಡಬೇಕಾದ ಅಗತ್ಯ ಉಂಟಾದಲ್ಲಿ, ಅಂತಹ ಹೆಚ್ಚುವರಿ ಮೊತ್ತದ ವಿನಿಯೋಗವನ್ನು ಮುಂದಿನ ಸಾಲಿಗೆ ಮುಂದುವರೆಸಬಹುದು. ಆದರೆ ಅಂತಹ ಮೊತ್ತವನ್ನು ಮುಂದಿನ ವರ್ಷದಲ್ಲಿ ಅಂಗವಿಕಲರ ಕಲ್ಯಾಣ ನಿಧಿಯ ಆದಾಯದೊಂದಿಗೆ ಸೇರಿಸಿ ತಪ್ಪದೇ ಖರ್ಚು ಮಾಡತಕ್ಕದ್ದು.

## 4. ಶೇ.3ರ ನಿಧಿಯ ನಿರ್ವಹಣೆಗೆ ಪ್ರತ್ಯೇಕ ಬ್ಯಾಂಕ್ ಖಾತೆ:

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು ಹಣದ ಅಡಚಣೆಯಿಂದ ಕುಂಠಿತವಾಗದಂತಾಗಲು, ಅಂಗವಿಕಲರ ಕಲ್ಯಾಣ ನಿಧಿಯ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪ್ರತ್ಯೇಕ ಖಾತೆ ತೆರೆದು ನಿರ್ವಹಿಸತಕ್ಕದ್ದು. ಪ್ರತಿ ತಿಂಗಳು 5ನೇ ದಿನಾಂಕದೊಳಗಾಗಿ ನಗರ ಸ್ಥಳೀಯ ಸಂಸ್ಥೆಯ ವಾಸ್ತವಿಕ ನಿವ್ವಳ ಆದಾಯದ ಶೇ.3ರಷ್ಟು ಹಣವನ್ನು ಸದರಿ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ವರ್ಗಾಯಿಸತಕ್ಕದ್ದು.

## 5. ಆದಾಯ ಮಿತಿ:

ನಗರದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಹಾಗೂ ಇತರೆ ಬಡ ಜನರ ಕಲ್ಯಾಣ ನಿಧಿ ಅಡಿಯಲ್ಲಿ ಫಲಾನುಭವಕ್ಕೆ ಅರ್ಹರಿರುವ ಜನರನ್ನು ಹೊರತು ಪಡಿಸಿದ, ಕುಟುಂಬದ ವಾರ್ಷಿಕ ಆದಾಯ ರೂ.39,600 ಗಳನ್ನು ಮೀರಿರದ ಅಂಗವಿಕಲರು ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ನೀಡಲಾಗುವ ಎಲ್ಲಾ ಅನುಕೂಲತೆಗಳನ್ನು ಪಡೆಯಲು ಅರ್ಹರಿರುತ್ತಾರೆ.

## 6. ವಸತಿ:

### 6.1 ಪಕ್ಕಾ ಮನೆಗಳ ನಿರ್ಮಾಣ ಯೋಜನೆ:

ಅಂಗವಿಕಲರು ನಿವೇಶನ ಹೊಂದಿದ್ದಲ್ಲಿ ಹೊಸದಾಗಿ ಪಕ್ಕಾ ಮನೆ ನಿರ್ಮಿಸಲು ಹಾಗೂ ಕಚ್ಚಾ ಮನೆ ಹೊಂದಿದ್ದಲ್ಲಿ ಪಕ್ಕಾ ಮನೆ ನಿರ್ಮಿಸಲು ಈ ಕೆಳಗೆ ಸೂಚಿಸಿದಂತೆ ಆರ್ಥಿಕ ಸಹಾಯವನ್ನು ಒದಗಿಸಬಹುದು.

**ಅ) ಸಹಾಯಧನ ಗರಿಷ್ಠ ಮಿತಿ: ರೂ.30,000**

ಆ) 3 ಸಮ ಕಂತಿನಲ್ಲಿ ಸಹಾಯಧನವನ್ನು ಬಿಡುಗಡೆ ಮಾಡತಕ್ಕದ್ದು (ಪ್ರತಿ ಕಂತಿನ ಹಣವನ್ನು ಬಿಡುಗಡೆ ಮಾಡುವಾಗ ಮೊತ್ತವು ಹತ್ತಿರದ ನೂರು ರೂ.ಗಳಿಗೆ ಸರಿ ಹೊಂದುವಂತಿರಬೇಕು ಮತ್ತು ಬಿಡುಗಡೆಯಾಗುವ ಒಟ್ಟು ಮೊತ್ತವು ಮಂಜೂರಾದ ಮೊತ್ತದ ಗರಿಷ್ಠ ಮಿತಿಯನ್ನು ಮೀರತಕ್ಕದ್ದಲ್ಲ)

1. ಪ್ರಥಮ ಕಂತು – ತಳಪಾಯ ಮುಕ್ತಾಯದ ನಂತರ
2. ದ್ವಿತೀಯ ಕಂತು – ಲಿಂಟ್ಲ್ ಮುಕ್ತಾಯದ ನಂತರ
3. ತೃತೀಯ ಕಂತು – ಮನೆಯ ಮುಕ್ತಾಯದ ನಂತರ

**ನಿಬಂಧನೆ ಹಾಗೂ ಷರತ್ತುಗಳು:**

ಅ) ನಿವೇಶನವು ಫಲಾನುಭವಿಯ ಹೆಸರಿನಲ್ಲಿರತಕ್ಕದ್ದು ಹಾಗೂ ನಗರ ಸ್ಥಳೀಯ ಸಂಸ್ಥೆಯ ಆಸ್ತಿ ತೆರಿಗೆ ವಹಿಯಲ್ಲಿ ದಾಖಲಾಗಿರತಕ್ಕದ್ದು.

ಆ) ಮನೆಯ ನೆಲಪ್ರದೇಶದ ವಿಸ್ತೀರ್ಣವು 225 ಚದರ ಅಡಿಗಿಂತ ಕಡಿಮೆ ಹಾಗೂ 400 ಚದರ ಅಡಿಗಿಂತ ಹೆಚ್ಚು ಇರತಕ್ಕದ್ದಲ್ಲ.

ಇ) ಫಲಾನುಭವಿಯು ಕಡ್ಡಾಯವಾಗಿ ಪಕ್ಕಾ ಮನೆ ನಿರ್ಮಾಣ ಮಾಡತಕ್ಕದ್ದು.

Karnataka State Government Disabled Employees Association
Renukaradhya S
Indresh R

ಈ) ಆರ್ಥಿಕ ಸಹಾಯವನ್ನು ಪಡೆಯುವ ಫಲಾನುಭವಿಯು ಕಂತನ್ನು ಪಡೆಯುವ ಪ್ರತಿ ಸಂದರ್ಭದಲ್ಲಿಯೂ ಕಟ್ಟಡ ನಿರ್ಮಾಣ ಹಂತದ ಛಾಯಾ ಚಿತ್ರಗಳನ್ನು ತಪ್ಪದೆ ನಗರ ಸ್ಥಳೀಯ ಸಂಸ್ಥೆಗೆ ಸಲ್ಲಿಸತಕ್ಕದ್ದು.

ಉ) ನಗರ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ/ಪೌರಾಯುಕ್ತರು ಸಿವಿಲ್ ಇಂಜಿನಿಯರರೊಡನೆ ಗೃಹ ನಿರ್ಮಾಣ ಹಂತಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆರ್ಥಿಕ ನೆರವಿನ ಕಂತನ್ನು ಬಿಡುಗಡೆ ಮಾಡುವುದಕ್ಕೆ ಪೂರ್ವಭಾವಿಯಾಗಿ ನಿರ್ಮಾಣ ಪ್ರಗತಿಯನ್ನು ದೃಢೀಕರಿಸತಕ್ಕದ್ದು.

## 6.2 ಸರ್ಕಾರಿ ಆರ್ಥಿಕ ಗೃಹನಿರ್ಮಾಣ ಯೋಜನೆಗಳಡಿ ಫಲಾನುಭವಿಗಳ ವಂತಿಕೆ

ಕೆಳಕಂಡ ಷರತ್ತಿಗೊಳಪಟ್ಟಂತೆ ಸರ್ಕಾರಿ ಪ್ರಾಯೋಜಿತ ಗೃಹನಿರ್ಮಾಣ ಯೋಜನೆಗಳಡಿ ಫಲಾನುಭವ ಪಡೆದ ಅಂಗವಿಕಲರ ಕುಟುಂಬಗಳಿಗೆ ಫಲಾನುಭವಿಗಳ ವಂತಿಕೆಯನ್ನು ಶೇ.3 ನಿಧಿಯಿಂದ ಸಹಾಯಧನವಾಗಿ ನೀಡತಕ್ಕದ್ದು.

ಅ) ಪ್ರತಿ ಫಲಾನುಭವಿಯ ಸಹಾಯಧನದ ಗರಿಷ್ಠ ಮಿತಿ: ರೂ.20.000/-

ಆ) ಫಲಾನುಭವಿಗಳು ಮನೆ/ನಿವೇಶನದ ಹಂಚಿಕೆ ಪತ್ರ ನೀಡಿದ ನಂತರದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಸಹಾಯಧನದ ಮೊತ್ತವನ್ನು ನೇರವಾಗಿ ಯೋಜನೆ ಅನುಷ್ಠಾನಗೊಳಿಸುವ ಸರ್ಕಾರಿ ಸಂಸ್ಥೆಗೆ ನೀಡತಕ್ಕದ್ದು.

ಇ) ಗೃಹ ನಿರ್ಮಾಣದ ಒಟ್ಟಾರೆ ಮೌಲ್ಯದ ಶೇಕಡ 5ಕ್ಕೆ ಕಡಿಮೆ ಇಲ್ಲದಂತೆ ಕಡ್ಡಾಯವಾಗಿ ಫಲಾನುಭವಿಗಳಿಂದ ವಂತಿಗೆ ಹಣವನ್ನು ಪಡೆಯತಕ್ಕದು.

## 7. ಉದ್ಯೋಗ:

- ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಈಗಾಗಲೇ ಅನುಕೂಲತೆಗಳನ್ನು ಪಡೆದಿರುವ ಅಂಗವಿಕಲ ಫಲಾನುಭವಿಗಳು ಶೇ.3ರ ಯೋಜನೆ ಅಡಿಯಲ್ಲಿ ಉದ್ಯೋಗ ಸಂಬಂಧಿತ ಅನುಕೂಲತೆಗಳಿಗೆ ಅರ್ಹರಾಗಿರುವುದಿಲ್ಲ.
- ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯ ಸ್ವಯಂ ಉದ್ಯೋಗ ಕಾರ್ಯಕ್ರಮದ ಅಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ವೆಚ್ಚಮಾಡಿದ ನಂತರ ಶೇ.3ರ ನಿಧಿಯನ್ನು ಇತರೆ ಉದ್ಯೋಗಾವಕಾಶಗಳಿಗೆ ಉಪಯೋಗಿಸತಕ್ಕದ್ದು.

### 7.1 ಇತರೆ ಬಡ ಸಣ್ಣ ಉದ್ದಿಮೆದಾರರಿಗೆ ಸಹಾಯಧನ ಕಾರ್ಯಕ್ರಮ:

ವಾಣಿಜ್ಯ ಬ್ಯಾಂಕ್‌ಗಳ ಸಾಲದ ನೆರವಿನಿಂದ ಸಣ್ಣ ಉದ್ದಿಮೆಯನ್ನು ಆರಂಭಿಸಿದ ಪ್ರತಿಯೊಬ್ಬ ಅಂಗವಿಕಲ ಸಣ್ಣ ಉದ್ದಮೆದಾರನಿಗೆ ಯೋಜನಾ ವೆಚ್ಚದ ಶೇ.50ರಷ್ಟು ಅಥವಾ ರೂ.50,000

### 7.2. ಸರ್ಕಾರಿ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ನಿವೇಶನಗಳು/ಉದ್ದಿಮೆ ಶೆಡ್‌ಗಳ ಸ್ವಾಧೀನಕ್ಕೆ ಸಹಾಯಧನ ನೀಡುವ ಕಲ್ಯಾಣ ಕಾರ್ಯಕ್ರಮ:

ಸರ್ಕಾರಿ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ನಿವೇಶನಗಳು/ಉದ್ದಿಮೆ ಶೆಡ್‌ಗಳ ಸ್ವಾಧೀನಕ್ಕೆ ಮುಂದೆ ಬರುವ ಅಂಗವಿಕಲ ಉದ್ದಿಮೆದಾರರಿಗೆ ನಗರ ಸ್ಥಳೀಯ ಸಂಸ್ಥೆಗಳು ಪ್ರತಿ ಪ್ರಕರಣದಲ್ಲಿ ಈ

Karnataka State Government Disabled Employees Association
Renukaradhya S
Indresh R

ಕೆಳಗೆ ಸೂಚಿಸಿದ ಗರಿಷ್ಠ ಮೊತ್ತ ಅಥವಾ ನಿವೇಶನದ/ಶೆಡ್ಡಿನ ಸ್ವಾಧೀನದ ವೆಚ್ಚ ಶೇ.50 ರಷ್ಟು ಮೊತ್ತ ಈ ಎರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತಕ್ಕೆ ಸಹಾಯಧನವನ್ನು ಮಿತಿಗೊಳಿಸತಕ್ಕದ್ದು, ಈ ಯೋಜನೆಯಡಿಯಲ್ಲಿ ಧನ ಸಹಾಯ ಹಾಗೂ ಇತರೆ ಇಲಾಖೆ/ಸರ್ಕಾರಿ ಸಂಸ್ಥೆಗಳು ನೀಡುವ ಧನ ಸಹಾಯ ಸೇರಿ ಒಟ್ಟಾರೆ ಧನ ಸಹಾಯ ನಿವೇಶನ /ಶೆಡ್ಡಿನ ಮೌಲ್ಯದ ಶೇ.75 ರಷ್ಟು ಮೊತ್ತವನ್ನು ಮೀರತಕ್ಕದ್ದಲ್ಲ.

## 8.ಆರೋಗ್ಯ.

### 8.1: ಕೃತಕ ಅಂಗ ಜೋಡಣೆಗೆ ಸಹಾಯಧನ:-

ಬಡ ಅಂಗವಿಕಲರು/ಪೋಲಿಯೋ ರೋಗಗಳಿಗೆ ಒಳಪಟ್ಟಿರುವವರಿಗೆ ಕೃತಕ ಪಾದ ಇತರೆ ಭೇದಿತ ಆವಯವಗಳ ಜೋಡಣೆಗೆ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕ ನೆರವನ್ನು ಕೆಳಗೆ ಸೂಚಿಸಿದ ಷರತ್ತುಗೊಳಪಟ್ಟಂತೆ ಒದಗಿಸುವುದು.

ಎ. ಕುಟುಂಬದ ವಾರ್ಷಿಕ ವರಮಾನ ರೂ.36,000 ಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ.

ಬಿ. ಅವಯವದ ನಿರ್ಮಾಣದ ವಾಸ್ತವ ವೆಚ್ಚವನ್ನು ನೀಡತಕ್ಕದ್ದು.

ಸಿ. ಯೋಜನೆಯನ್ನು ರೆಡ್‌ಕ್ರಾಸ್ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸುವುದು ಮತ್ತು ರೆಡ್‌ಕ್ರಾಸ್ ಸಂಸ್ಥೆಗೆ ನೇರವಾಗಿ ಹಣ ಪಾವತಿ ಮಾಡತಕ್ಕದ್ದು.

Karnataka State Government Disabled Employees Association
Renukaradhya S
Indresh R

### 8.2: ಭಾರಿ ಶಸ್ತ್ರ ಚಿಕಿತ್ಸೆಗೆ ಧನಸಹಾಯ:-

ನಗರ ಸ್ಥಳೀಯ ಸಂಸ್ಥೆಗಳು ಭಾರಿ ಶಸ್ತ್ರ ಚಿಕಿತ್ಸೆಗೆ ಒಳಗಾಗುವ ಇತರೆ ಬಡ ರೋಗಿಗಳಿಗೆ ಯಶಸ್ವಿನಿ ಯೋಜನೆಯಲ್ಲಿ ಗುರುತಿಸಲ್ಪಟ್ಟ ದವಾಖಾನೆಗಳಲ್ಲಿ ಯಶಸ್ವಿನಿ ಯೋಜನೆಯಲ್ಲಿನ ನಿಯಮಗಳನುಸಾರ ಒಂದು ಬಾರಿ ಸಹಾಯಧನ ನೀಡಬಹುದು ಮೊತ್ತವನ್ನು ಯಶಸ್ವಿನಿ ಯೋಜನೆಯಲ್ಲಿನ ದರಗಳಿಗೆ ಮಿತಿಗೊಳಿಸತಕ್ಕದ್ದು.

1. ಶಿಕ್ಷಣ:-

2. **9.1 ಮಧ್ಯಮ/ದೀರ್ಘಕಾಲದ ಕೌಶಲ್ಯ ಅಭಿವೃದ್ಧಿ ತರಬೇತಿಗೆ ಆರ್ಥಿಕ ನೆರವು:-**
ಸರ್ಕಾರದಿಂದ ಮಾನ್ಯತೆ ಪಡೆದ/ನೊಂದಾಯಿತ ತರಬೇತಿ ಸಂಸ್ಥೆಗಳಲ್ಲಿ ಮೂರು ತಿಂಗಳವರೆಗಿನ ಮಧ್ಯಮ ಹಾಗೂ ಆರು ತಿಂಗಳಿನಿಂದ ಒಂದು ವರ್ಷದ ಅವಧಿಯ ದೀರ್ಘಕಾಲಿಕ ಕೌಶಲ್ಯ ಅಭಿವೃದ್ಧಿ ತರಬೇತಿ ಪಡೆಯುವ ಇತರೆ ಬಡ ಜನರ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿದ ದರಗಳಿಗೆ ಮಿತಿಗೊಳಿಸಿ ತರಬೇತಿ ವೆಚ್ಚ, ವಸತಿ ಮತ್ತು ಭೋಜನ ವೆಚ್ಚಗಳನ್ನು ತರಬೇತಿ ಸಂಸ್ಥೆಗಳಿಗೆ ಪಾವತಿಸಬಹುದು.

### 1.2 ಪದವಿ ಪೂರ್ವ ಹಾಗೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಗಳಿಗೆ ವಿಶೇಷ ನೆರವು:-

ಬಿ.ಎ. ಬಿ.ಎಸ್ಸಿ. ಬಿ.ಕಾಂ ಇತ್ಯಾದಿ ಸ್ನಾತಕ ಪದವಿ ತರಗತಿಗಳಲ್ಲಿ ಅಧ್ಯಯನ ಮಾಡುವ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಮುಂದುವರಿಕೆಗಾಗಿ ವಾರ್ಷಿಕವಾಗಿ ರೂ.2000ಗಳ

ವಿಶೇಷ ನೆರವನ್ನು ನೀಡುವುದು. ಸ್ನಾತಕೋತ್ತರ ಪದವಿಗಳಾದ ಎಂ.ಎ. ಎಂ.ಎಸ್.ಸಿ ಎಂ.ಕಾಂ ಎಂ.ಸಿ.ಎ ಎಂ.ಇಡಿ ಅಲ್ಲದೆ ಬಿ.ಇ ಎಲ್.ಎಲ್.ಬಿಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ರೂ.5,000ಗಳನ್ನು ಎಂ.ಬಿ.ಬಿ.ಎಸ್. ಬಿ.ಡಿ.ಎಸ್. ಎಂ.ಫಿಲ್ ಹಾಗೂ ಎಂ.ಟೆಕ್ ಪದವಿಗಳಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ವಾರ್ಷಿಕ ರೂ.10,000ಗಳನ್ನು ಎಂ.ಎಸ್. ಪದವಿಗಳಲ್ಲಿ ವ್ಯಾಸಂಗ ಮಾಡುವ ಮತ್ತು ಪಿಹೆಚ್‌ಡಿಗಾಗಿ ಸಂಶೋಧನೆ ಕೈಗೊಂಡಿರುವ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ರೂ.15,000 ಗಳನ್ನು ವಿಶೇಷ ಹಣಕಾಸಿನ ನೆರವನ್ನು ನೀಡಬಹುದು.

### 1.3 ರಾಜ್ಯ/ರಾಷ್ಟ್ರೀಯ ಮಟ್ಟದ ಆಟಗಳಲ್ಲಿ ಸಾಂಸ್ಕೃತಿಕ ಹಾಗೂ ಭಾಷಣ ಚಟುವಟಿಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸಹಾಯ:

ರಾಜ್ಯ/ರಾಷ್ಟ್ರೀಯ ಮಟ್ಟದ ಆಟಗಳಲ್ಲಿ ಸಾಂಸ್ಕೃತಿಕ ಹಾಗೂ ಭಾಷಣ ಚಟುವಟಿಕೆಗಳಲ್ಲಿ ಭಾಗವಹಿಸುವ ಅಂಗವಿಕಲರ ವಿದ್ಯಾರ್ಥಿಗಳಿಗೆ ಬಸ್ಸು ಅಥವಾ ಮೂರು ಟೈಯರ್ ಸ್ಲೀಪರ್ ರೈಲಿನ ಪ್ರಯಾಣದ ಅಗತ್ಯ ದಾಖಲೆಗಳನ್ನು ಪಡೆದು ವಾಸ್ತವಿಕ ವೆಚ್ಚವನ್ನು ನೀಡಬಹುದು.

## 10. ಮೂಲ ಸೌಕರ್ಯಗಳು:-

ರೂ.36.000ಗಳಿಗಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರದ ಅಂಗವಿಕಲ ವ್ಯಕ್ತಿ ಕುಟುಂಬಗಳಿಗೆ ವೈಯಕ್ತಿಕ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಈ ಕೆಳಕಂಡ ಪ್ರಕರಣಗಳಲ್ಲಿ ಸಹಾಯಧನ ನೀಡಬಹುದು.

### 2.1 ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸಹಾಯಧನ:-

ವೈಯಕ್ತಿಕ ಹರಿವ ನೀರು ಶೌಚಾಲಯ ಹೊಂದಿರದ ಅಂಗವಿಕಲ ವ್ಯಕ್ತಿ ಕುಟುಂಬ ಸ್ವತಂತ್ರ ಸೆಪ್ಟಿಕ್ ಶೌಚಾಲಯ ನಿರ್ಮಾಣಕ್ಕಾಗಿ ಗರಿಷ್ಠ ರೂ.10,000ಗಳಿಗೆ ಮಿತಿಗೊಳಿಸಿ ಮತ್ತು ಯು.ಜಿ.ಡಿ ಸಂಪರ್ಕದ ಶೌಚಾಲಯ ನಿರ್ಮಾಣಕ್ಕೆ ರೂ.5,000ಗಳಿಗೆ ಮಿತಿಗೊಳಿಸಿ ವಾಸ್ತವಿಕ ನಿರ್ಮಾಣದ ವೆಚ್ಚವನ್ನು ಪಾವತಿಸಬಹುದು. ಪೌರಾಯುಕ್ತರು/ಮುಖ್ಯಾಧಿಕಾರಿಗಳು ಅರ್ಜಿದಾರರ ಮನೆಯನ್ನು ತಪಾಸಣೆ ಮಾಡಿ ಹರಿವ ನೀರು ಶೌಚಾಲಯ ಇಲ್ಲವೆಂದು ಖಚಿತಪಡಿಸಿಕೊಂಡ ನಂತರವೇ ಈ ಯೋಜನೆಗೆ ಮಂಜೂರಾತಿ ನೀಡತಕ್ಕದ್ದು. ಸಹಾಯಧನವನ್ನು ಎರಡು ಕಂತುಗಳಲ್ಲಿ ಫಲಾನುಭವಿಗೆ ಪಾವತಿಸತಕ್ಕದ್ದು, ಶೇಕಡಾ 5ಕ್ಕೆ ಕಡಿಮೆ ಇಲ್ಲದಂತೆ ಕಡ್ಡಾಯವಾಗಿ ಫಲಾನುಭವಿಗಳಿಂದ ವಂತಿಗೆ ಹಣವನ್ನು ಪಡೆಯುವಂತೆ ಖಾತರಿಸಿಕೊಳ್ಳತಕ್ಕದ್ದು.

**ಮೊದಲನೆಯ ಕಂತು**: ನಿರ್ಮಾಣದ ಒಟ್ಟು ವೆಚ್ಚದ ಶೇ.30 ರಷ್ಟು ಮೊತ್ತವನ್ನು ತಳಪಾಯ ನಿರ್ಮಾಣದ ನಂತರ ಪಾವತಿಸತಕ್ಕದ್ದು.

**ಎರಡನೇ ಕಂತು** – ಬಾಕಿ ಶೇ.70 ಮೊತ್ತವನ್ನು ಶೌಚಾಲಯ ನಿರ್ಮಾಣ ಪೂರ್ಣಗೊಂಡ ನಂತರ ಪಾವತಿಸತಕ್ಕದ್ದು.

ಮುಖ್ಯಾಧಿಕಾರಿಗಳು ಹಾಗೂ ಅಭಿಯಂತರರು ಸ್ಥಳ ತಪಾಸಣೆ ಮಾಡಿ ಕಾರ್ಯ ಎರಡು ಹಂತಗಳ ಪ್ರಗತಿಯನ್ನು ಖಚಿತ ಪಡಿಸಿಕೊಂಡ ನಂತರ ಸಹಾಯ ಧನವನ್ನು ಪಾವತಿಸತಕ್ಕದ್ದು.

Karnataka State Government Disabled Employees Association
Renukaradhya S
Indresh R

## 2.2 ಯು.ಜಿ.ಡಿ ಸಂಪರ್ಕದ ವೆಚ್ಚ:-

ಅಂಗವಿಕಲ ವ್ಯಕ್ತಿ ಕುಟುಂಬಗಳ ಮನೆಗಳಿಗೆ ವೈಯಕ್ತಿಕ ಯು.,ಜಿ.ಡಿ ಸಂಪರ್ಕದ ವಾಸ್ತವಿಕ ವೆಚ್ಚವನ್ನು ನಗರ ಸ್ಥಳೀಯ ಸಂಸ್ಥೆಯ ಶೇ.3 ನಿಧಿಯಿಂದ ಭರಿಸಬಹುದು. ಶೇಕಡಾ 5ಕ್ಕೆ ಕಡಿಮೆ ಇಲ್ಲದಂತೆ ಕಡ್ಡಾಯವಾಗಿ ಫಲಾನುಭವಿಗಳಿಂದ ವಂತಿಗೆ ಹಣವನ್ನು ಪಡೆಯತಕ್ಕದ್ದು.

## 2.3 ಕುಡಿಯುವ ನೀರಿನ ಸಂಪರ್ಕದ ವೆಚ್ಚ:-

ಅಂಗವಿಕಲ ವ್ಯಕ್ತಿ ಕುಟುಂಬಗಳ ಮನೆಗಳಿಗೆ ವೈಯಕ್ತಿಕ ನೀರಿನ ಸಂಪರ್ಕದ ವೆಚ್ಚವನ್ನು ನಗರ ಸ್ಥಳೀಯ ಸಂಸ್ಥೆಯ ಶೇ.3 ರ ನಿಧಿಯಿಂದ ಭರಿಸಬಹುದು ಶೇ.5ಕ್ಕೆ ಕಡಿಮೆ ಇಲ್ಲದಂತೆ ಕಡ್ಡಾಯವಾಗಿ ಫಲಾನುಭವಿಗಳಿಂದ ವಂತಿಗೆ ಹಣವನ್ನು ಪಡೆಯತಕ್ಕದ್ದು.

ಸಹಿ/-

**(ಸಿ.ಆರ್.ರವೀಂದ್ರ)**

ಸರ್ಕಾರದ ಅಧೀನ ಕಾರ್ಯದರ್ಶಿ.

ನಗರಾಭಿವೃದ್ಧಿ ಇಲಾಖೆ.

Karnataka State Government Disabled Employees Association
Renukaradhya S
Indresh R

<u>ಗೆ:</u>

1. ಮಹಾಲೇಖಪಾಲರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ (ವೆಚ್ಚ) ಆರ್ಥಿಕ ಇಲಾಖೆ, ವಿಧಾನಸೌಧ,
3. ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
4. ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು,
5. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ಬೆಂಗಳೂರು.
7. ಎಲ್ಲಾ ಜಿಲ್ಲಾಧಿಕಾರಿಗಳು
8. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
9. ನಿರ್ದೇಶಕರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ,
11. ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ,
12. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ,
13. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ,
14. ಎಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ.
15. ಎಲ್ಲಾ ಆಯುಕ್ತರು ಮಹಾನಗರ ಪಾಲಿಕೆಗಳು ಎಲ್ಲಾ ಪೌರಾಯುಕ್ತರ ನಗರ ಸಭೆಗಳು ಎಲ್ಲಾ ಮುಖ್ಯಾಧಿಕಾರಿಗಳು, ಪುರಸಭೆಗಳು/ಪಟ್ಟಣಪಂಚಾಯಿತಿಗಳು-ಪೌರಾಡಳಿತ ನಿರ್ದೇಶಕರ ಮುಖಾಂತರ.
16. ಸರ್ಕಾರದ ಉಪ ಕಾರ್ಯದರ್ಶಿಗಳು/ಅಧೀನಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ.
17. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು

NO: WCD.08.PHP.2006

Karnataka Government Secretariat,
M.S. Building,
Bangalore,
dated: 9th November 2006

# NOTIFICATION

In exercise of powers conferred sub-section [1] of section 73 read with sections 33 and 43 of the Persons with Disabilities [Equal Opportunities, Protection of Rights and Full Participation] Act,1995 [Central Act 1 of 1996] the Government of Karnataka hereby makes the following rules further to amend the Person With Disabilities [Equal Opportunities, Protection of Rights and Full Participation] [Karnataka] Rules, 2003 namely:

Karnataka State Government Disabled Employees Association
Renukaradhya S
Indresh R

## RULES

1. <u>Title and commencement:</u>

   1. These rules may be called the Persons with Disabilities [Equal Opportunities, Protection of Rights and Full Participation] [Karnataka Amendment] Rules, 2006.

   2. They shall come into force on the date of their publication in the Official Gazette.

2. <u>Insertion of new chapter IVA</u> :- After chapter IV of the Persons With Disabilities [Equal Opportunities, Protection of Rights and Full Participation] Rules, 2003, hereinafter referred to as the said rules the following new chapter shall be inserted namely:-

## CHAPTER IV A

<u>"Rules 28A Benefit of Persons With Disabilities</u>":- All the state Government Departments, Boards, Corporations, Zilla Panchayaths Taluk Panchayats, Town Panchayats, Gram Panchayats, Municipal Corporations, Municipal Councils, Local bodies, Urban Development Authorities and other Establishments of State Government and other aided Institution shall,:-

(i) Provided for 3% reservation in Group A and B posts and 5% reservation in Group C and D posts or in such ratio as specified by the State Government from time to time in any Order, Circular or Notification.

(ii) Ensure that in all State Sector/District Schemes implemented by them by them not less than 3% of the fund allocation in all poverty alleviation schemes/development programmes, welfare schemes, education, health and research programmes including central and externally aided schemes and projects, is spent on providing relief to persons with disabilities.

(iii) ensure that when allotment of land is made for the following purpose:-

a. House/Site,
b. Setting up of business,
c. Setting up of special recreation centers,
d. Establishment of special school,
e. Establishment of research centers,
f. Establishment of factories by entrepreneurs with disabilities.
   (i) not less than 3% of the allottees are persons with disabilities.
   (ii) the rate changed to such persons is made concessional.

Not with standing any thing contained in any other law for the time being in force a report in compliance of clauses (i) to (iii) shall be furnished at regular intervals to the Commissioner for Persons With Disabilities for review and further necessary direction'.

Karnataka State Government Disabled Employees Association
Renukaradhya S
Indresh P

By Order in the name of the
Government of Karnataka
Sd/-
**[R.M.CHANDRAMMA],**
Under Secretary to Government,
Women and Child Development Department

To,
The Compiler, Karnataka Gazette, Bangalore for publication in the next issue of Gazette and to supply 500 copies to this Department,

Copy to:-

1. The Accountant General [A&E] Karnataka, Bangalore,
2. Chief Secretary/Additional Chief Secretary to Government,

3. All Principal Secretaries/Secretaries to Government,
4. Secretary to Government of India, Ministry of Social Justice and Empowerment Shastri Bhavan, New Delhi,
5. Chief Commissioner for Persons with Disabilities, Ministry of Social Justice and Empowerment, Government of India, Das Road, New Delhi-110001.
6. State Commissioner, Persons with Disabilities, Karnataka, No.40, Tambuchetty Road, Cox town, Bangalore.
7. State Commissioner, Persons with Disabilities, Karnataka.
8. M.D.KSRCT, Bangalore.
9. M.D.BMTC, Bangalore.
10. All Deputy Commissioners/Chief Executives Officers ZPs.
11. Director, Women and Child Development Department
12. Director, Department of Disabled Welfare and Senior Citizens, Bangalore.
13. Director of Municipal Administration, V.V.Tower, Bangalore.
14. Commissioners of all CMCs/Chief Officers of TMCs/ Pattana Panchayats.

Copy for information:-

1. PS to Hon'ble Minister for Women & Child Welfare,
2. PA Section to Principal Secretary/Deputy Secretary/ Deputy Secretary, Women & Child Development Department.

Karnataka State Government Disabled Employees Association
Renukaradhya S
Indresh R

## ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳನ್ನು ಸಂಪರ್ಕಿಸಬೇಕಾದ ವಿವರ

| ಕ್ರ ಸಂ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|
| 1 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಿದ್ವಾಯಿ ಆಸ್ಪತ್ರೆ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು-29 | 080-26577411 | dwd.ddwo@yahoo.com |
| 2 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನಂ.5, ವಾಟಾಳ್ ನಾಗರಾಜ್ ರೋಡ್, ಪಿ.ಆರ್.ಪ್ಲಾಜಾ, 3ನೇ ಮಹಡಿ, ಓಕಳೀಪುರಂ, ಬೆಂಗಳೂರು.21 | 080-23423181 | ddwbangalorerural@gmail.com |
| 3 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಿಮ್ಯಾಂಡ್ ಹೋಂ ಬಿಲ್ಡಿಂಗ್, ಶಿವಾಜಿನಗರ, ಬೆಳಗಾಂ-590002 | 0831-2476096 | ddwcdbgm@yahoo.co, |
| 4 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೆ.ಹೆಚ್.ಬಿ ಕಾಲೋನಿ, ಬಾಲಭವನ, ಬೀದರ್-585401 | 08482-233115 | adwcdbidar@gmail.com |
| 5 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರೂಮ್ ನಂ.5, ಜಿಲ್ಲಾ ಆಡಳಿತ ಭವನ, ನವನಗರ, ಬಾಗಲಕೋಟೆ | 08354-235556 | bagalkotddwo@gmail.com |
| 6 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶ್ರೀ ಸೇವಾ ನಿಕೇತನ ಆವರಣ, ಕ್ಲಬ್ ರಸ್ತೆ, ಬಳ್ಳಾರಿ-04 | 08392-267886 | ddwcbellary@rediffmail |

Karnataka State Government Disabled Employees Association
Renukaradhya S
Indresh R

| ಕ್ರ ಸಂ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|
| 7 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯತ್ ಆವರಣ, ವಿಜಾಪುರ-586104 | 08352-278369 | wcdbijapur@yahoo.co.in |
| 8 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಂಚಾಯತಿ ಸಭಾಂಗಣ ಪಕ್ಕ, ಚಿಕ್ಕಮಗಳೂರು-577102 | 08262-228171 | ddwckm123@gmail.com |
| 9 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ ಆವರಣ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ಚಿತ್ರದುರ್ಗ-577501 | 08194-235284 | ddwcd.chitradurga@yahoo.com |
| 10 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರು ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆಡಳಿತ ಕಟ್ಟಡ, ನೆಲಮಹಡಿ, ಎ ಬ್ಲಾಕ್, ಚಾಮರಾಜನಗರ. | 08226-223688 | ddwochnagar@yahoo.in |
| 11 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರು ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಲಭವನ ಬಾಲವಿಕಾಸ ನಗರ, ಈಜುಕೊಳದ ಹತ್ತಿರ, ಡಿ.ಸಿ.ಕಾಂಪೌಂಡ್, ಧಾರವಾಡ. | 0836-2435749 | ddwodwd@gmail.com |
| 12 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀ ಶಕ್ತಿ ಭವನ, 14 ನೇ ಮುಖ್ಯರಸ್ತೆ, ಕುವೆಂಪು ನಗರ, ಎಂ.ಸಿ.ಸಿ.ಬಿ ಬ್ಲಾಕ್, ದಾವಣಗೆರೆ-577604 | 08192-263936 | ddwo-da-ka@nic.in |

Karnataka State Government Disabled Employees Association
Renukaradhya S
Indresh B

| ಕ್ರ ಸಂ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|
| 13 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು<br>ಉಪನಿರ್ದೇಶಕರ ಕಛೇರಿ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>ಡಾ: ಜಯಲಕ್ಷ್ಮೀ ವೆಂಕಟೇಶ್ ನರ್ಸಿಂಗ್<br>ಹೋಂ ಬಿಲ್ಡಿಂಗ್, 1ನೇ ಮಹಡಿ,<br>ಡಿ.ಬಿ.ರಸ್ತೆ, ಹಾವೇರಿ-581110 | 08375-<br>249014 | ddwohaveri@gmail.com |
| 14 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು<br>ಉಪನಿರ್ದೇಶಕರು ಕಛೇರಿ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>ಜಿಲ್ಲಾ ಪಂಚಾಯತ್ ಕಟ್ಟಡ,<br>ಅಶೋಕ್ ನಗರ,<br>ದಕ್ಷಿಣ ಕನ್ನಡ, ಮಂಗಳೂರು | 0824-<br>2458173 | wcddept@gmail.com |
| 15 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು<br>ಉಪನಿರ್ದೇಶಕರ ಕಛೇರಿ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>ಸರ್ಕಾರಿ ಅಂಧ ಮಕ್ಕಳ ಶಾಲೆಯ<br>ಆವರಣ, 1ನೇ ಮಹಡಿ,<br>ಜಿಲ್ಲಾ ಕ್ರೀಡಾಂಗಣ ಎದುರು,<br>ಗುಲ್ಬರ್ಗಾ | 08472-<br>255629 | ddwcdglb@gmail.com |
| 16 | ಜಿಲ್ಲಾ ಅಂಗವಿಕಲರ ಮತ್ತು ಹಿರಿಯ<br>ನಾಗರಿಕರ<br>ಕಲ್ಯಾಣಾ ಇಲಾಖೆ ಜಿಲ್ಲಾ ಆಡಳಿತ ಭವನ,<br>ಕೊಠಡಿ ಸಂ:06 ಹುಬ್ಬಳ್ಳಿ ರೋಡ್<br>ಗದಗ-582101 | 08372-<br>220711 | ddwogadag@gmail.com |
| 17 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು<br>ಉಪನಿರ್ದೇಶಕರ ಕಛೇರಿ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>ಜಿಲ್ಲಾ ಆಡಳಿತ ಕಛೇರಿ, 11ನೇ ಕ್ರಾಸ್,<br>ಕೆ.ಆರ್.ಪುರಂ,<br>ಹಾಸನ | 08172-<br>264546 | hassanddwo@yahoo.in |
| 18 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು,<br>ಪುಲಕೇಶಿ ರಸ್ತೆ, ತಿಲಕ್ ನಗರ,<br>ಕಿವುಡು ಮಕ್ಕಳ ಶಾಲೆ ಆವರಣ,<br>ಮೈಸೂರು 570021 | 0821-<br>2490111 | ddwomysore@yahoo.com |

Karnataka State Government Disabled Employees Association
Renukaradhya S
Indresh R

| ಕ್ರ ಸಂ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|
| 19 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಶಾಂತಾ ಕಾಂಪ್ಲೆಕ್ಸ ಶ್ರೀ ಓಂಕಾರೇಶ್ವರ ದೇವಸ್ಥಾನ ರಸ್ತೆ ಮಡಿಕೇರಿ ಕೊಡಗು-571201 | 08272-222829 | ddwo-kd-ka@nic.in |
| 20 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹೊಸ ಕೋಲಾರ ನರ್ಸಿಂಗ್ ಹೋಂ ಬಿಲ್ಡಿಂಗ್, ಕೋಲಾರ-583101 | 08152-228250 | ddwokolar@gmail.com |
| 21 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆಡಳಿತ ಕಟ್ಟಡ, ಗದಗ್ ರಸ್ತೆ, ಕೊಪ್ಪಳ | 08539-220596 | dsceo.koppal@gmail.com |
| 22 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ ಕಟ್ಟಡ,ತುಮಕೂರು. | 0816-2252763 | dd.wcdtumkur@ymail.com |
| 23 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆಡಿಟೋರಿಯಂ ಉತ್ತರ ಕನ್ನಡ(ಕಾರವಾರ) | 08382-221914 | disabled14@rediffmail.com |
| 24 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನೆಲ ಮಹಡಿ ರೂಂ ನಂ.101 ಜಿಲ್ಲಾಧಿಕಾರಿಗಳ ಕಛೇರಿ ಸಂಕೀರ್ಣ ಸಿ ಬ್ಲಾಕ್ , ರಜತಾದ್ರಿ ಮಣಿಪಾಲ ಉಡುಪಿ. | 0820-2574810 | ddwofficeudp@yahoo.in |
| 25 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಕೇರಾಫ್ ಮಹಿಳಾ ಸಾಂತ್ವನ ಕೇಂದ್ರ, ಹಳೆ ತಾಲ್ಲೂಕ್ ಆಫೀಸ್ ರಸ್ತೆ, ಶಿವಮೊಗ್ಗ | 08182-226676 | ddwo-sh-ka@nic.in |

Karnataka State Government Disabled Employees Association
Renukaradhya S
Indresh R

| ಕ್ರ ಸಂ | ವಿಳಾಸ | ದೂರವಾಣಿ ಸಂಖ್ಯೆ | ಇ-ಮೇಲ್ |
|---|---|---|---|
| 26 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲ್ಲೂಕು ಕಛೇರಿ ಆವರಣ, ಮಂಡ್ಯ | 08232-231090 | ddwomandya@yahoo.in |
| 27 | ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ನಂ.12-8-299, ಬಾಪೂಜಿ ಪ್ರೌಢಶಾಲೆ ಹತ್ತಿರ ಸಿಯಾತಲಾಬ್ ರಾಯಚೂರು-584101 | 08532-234793 | ddwcdecr@gmail.com |
| 28 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಕಂದಾಯ ಭವನ ನೆಲಮಹಡಿ, ಬಿ.ಎಂ.ರಸ್ತೆ ರಾಮನಗರ. | 080-7273036 | ddworam@gmail.com |
| 29 | ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಛೇರಿ ಜಿಲ್ಲಾಧಿಕಾರಿಗಳ ಭವನ ಕೊಠಡಿ ಸಂ:ಜಿ.014 ಚಿಕ್ಕಬಳ್ಳಾಪುರ-562101 | 08156-273510 | ddwocbpur@gmail.com |
| 30 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿತ್ತಾಪುರ ರಸ್ತೆ, ಮುನ್ಸಿಪಾಲಿಟಿ ಬಿಲ್ಡಿಂಗ್, ಯಾದಗಿರಿ ಜಿಲ್ಲೆ. | 08473-253739 | ddwcdyad@gmail.com |

Karnataka State Government Disabled Employees Association
Renukaradhya S
Indresh R

**ವಿಕಲಚೇತನರಿಗೆ**
**ಅನುಕಂಪ ಬೇಡ**
**ಅವಕಾಶ ನೀಡಿ**

## ಟಿಪ್ಪಣಿ

Karnataka State Government Disabled Employees Association
Renukaradhya S
Indresh R















Karnataka State Government Disabled Employees Association
Renukaradhya S
Indresh R

ದಿನಾಂಕ : 03-12-2013ರಂದು ವಿಶ್ವವಿಕಲಚೇತನರ ದಿನಾಚರಣೆಯ ಪ್ರಯುಕ್ತ
ಸನ್ಮಾನಿಸಲಾದ 2013ನೇ ಸಾಲಿನ ರಾಜ್ಯ ಪ್ರಶಸ್ತಿ ವಿಜೇತರು



Karnataka State Government Disabled Employees Association
Renukaradhya S
Indresh R

## ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಪೋಡಿಯಂ ಬ್ಲಾಕ್, ನೆಲಮಹಡಿ, ವಿಶ್ವೇಶ್ವರಯ್ಯ ಕೇಂದ್ರ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
Email: dir-dwdsc-ka@nic.in dirdwdscka@gmail.com
Website: welfareofdisabled.kar.nic.in

**ಯೋಜನೆಗಳ ಅನುಷ್ಠಾನದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು,
ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ
ಮಾಹಿತಿ ಸಲಹಾ ಕೇಂದ್ರ - ದೂರವಾಣಿ ಸಂಖ್ಯೆ : 080-22860907